ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಮುದಾಯದ ಚೊಕ್ಕಲಿಂಗಂ ಇನ್ನಿಲ್ಲ



ಸಂಪುಟ 10 | ಸಂಚಿಕೆ 20 | ಪುಟ 16 | ಮೇ 15, 2016 | ರೂ. 10/-

web: www.janashakthi.co.in e-mail : js_weekly@yahoo.com



ಬರ ಪರಿಹಾರ ನಿರ್ಲಕ್ಷ್ಯ ಏಕೆ?

ಬರ ಸರ್ಕಾರಕ್ಕೂ ಇಷ್ಟ! - ಯು.ಬಸವರಾಜ

ರೇಗಾ ಮತ್ತು ಬರ - ಕೆ.ನೀಲಾ

ಮರಾಠವಾಡ : ಈಡೇರಿಸದ ಭವಸೆಗಳು - ಬೃಂದಾ



'ಆಜಾದಿ' ಮೊಳಗಿಸಿದ ಮೇ ದಿನ



ನೀಟ್ : ನೀಟಾಗಿ ಜಾರಿ ಮಾಡಿ

2 ಕೋಟಿ ಉದ್ಯೋಗಗಳು ಎಲ್ಲಿವೆ? - ಕಾರಟ್

ಅಗಸ್ಟಾ : ರಾಜಕೀಯ ಸಾಕು, ತನಿಖೆ ನಡೆಸಿ



ಕೇರಳದಲ್ಲಿ ದಲಿತ ಕಾನೂನು ವಿದ್ಯಾರ್ಥಿನಿಯ ಅಮಾನುಷ ಅತ್ಯಾಚಾರ ಮತ್ತು ಕೊಲೆಗೆ ವ್ಯಾಪಕ ಖಂಡನೆ



ಈ ಹೀನ ಕೃತ್ಯವನ್ನು ಮುಚ್ಚಿ ಹಾಕುವ ಕೇರಳ ಪೋಲಿಸ್ ಪ್ರಯತ್ನ ನಾಚಿಕೆಗೇಡು –ಸಿಪಿಐ(ಎಂ) ಪೊಲಿಟ್‌ಬ್ಯುರೊ

ಎಪ್ರಿಲ್ 28 ರಂದು ಕೇರಳದ ಎರ್ನಾಕುಳಂ ಜಿಲ್ಲೆಯ ಪೆರುಂಬವೂರ್‌ನಲ್ಲಿ ಒಬ್ಬ 30 ವರ್ಷದ ದಲಿತ ಕಾನೂನು ವಿದ್ಯಾರ್ಥಿನಿಯ ಮೇಲೆ ಅಮಾನುಷ ಅತ್ಯಾಚಾರ ಮತ್ತು ಕೊಲೆಯ ಸುದ್ದಿ ಇಡೀ ಕೇರಳವನ್ನು ಮತ್ತು ದೇಶವನ್ನೂ ತಲ್ಲಣಗೊಳಿಸಿದೆ. ಸಿಪಿಐ(ಎಂ) ಪೊಲಿಟ್‌ಬ್ಯುರೊ ಇದನ್ನು ಬಲವಾಗಿ ಖಂಡಿಸಿದೆ .

ಇಂತಹ ಸಂದರ್ಭಗಳನ್ನು ದೃಢವಾಗಿ ಕ್ರಮ ಕೈಗೊಳ್ಳುವ ಬದಲು ರಾಜ್ಯ ಪೋಲಿಸ್ ಮತ್ತು ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸರಕಾರ ಆರಂಭದಲ್ಲಿ ಈ ಹೀನ ಕೃತ್ಯವನ್ನು ಮುಚ್ಚಿ ಹಾಕಲು ಪ್ರಯತಿಸಿರುವುದು ನಾಚಿಕೆಗೇಡು ಎಂದು ಪೊಲಿಟ್‌ಬ್ಯುರೊ ಹೇಳಿದೆ. ಪೋಲೀಸ್ ಮತ್ತು ಆಡಳಿತದ ಇಂತಹ ವರ್ತನೆ ನಿಂದನೀಯ, ಯಾವುದೇ ನಾಗರಿಕ ಸಮಾಜ ಇದನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ. ಜಾಗರೂಕ ಮಾಧ್ಯಮ ಮತ್ತು ಬೃಹತ್ ಸಾರ್ವಜನಿಕ ಆಕ್ರೋಶದ ನಂತರವೇ ಪೋಲೀಸ್ ಕೊನೆಗೂ ಕಾರ್ಯಾಚರಣೆಗಿಳಿದಿದೆ ಎಂದು ಪೊಲಿಟ್ ಬ್ಯುರೋ ಖೇದ ವ್ಯಕ್ತಪಡಿಸಿದೆ.

ಈ ಯುವ ಮಹಿಳೆಯ ಮೇಲೆ ಅಮಾನುಷ ಅತ್ಯಾಚಾರ ಮತ್ತು ದಿಗಿಲು ಹುಟ್ಟಿಸುವ ಹಿಂಸಾಚಾರದ ತನಿಖೆಯನ್ನು ಒಬ್ಬ ಉನ್ನತ ದರ್ಜೆಯ ಮಹಿಳಾ ಪೋಲೀಸ್ ಅಧಿಕಾರಿಯ ನೇತೃತ್ವದ ತನಿಖಾ ಸಮಿತಿಗೆ ಒಪ್ಪಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ. ಅಪರಾಧಿಗಳನ್ನು ಹಿಡಿಯಲು ತಕ್ಷಣವೇ ಕ್ರಮಗಳನ್ನು ಕೈಗೊಳ್ಳಬೇಕು, ನಿರ್ಭಯಾ ಘಟನೆಯ ನಂತರ ಕ್ರಿಮಿನಲ್ ಕಾನೂನುಗಳಿಗೆ ತಂದ ತಿದ್ದುಪಡಿಗಳಿಗನುಗುಣವಾಗಿ ಫಾಸ್ಟ್ ಟ್ರಾಕ್ ಅಂದರೆ ತ್ವರಿತ ವಿಚಾರಣೆಯ ಮೂಲಕ ಶಿಕ್ಷಿಸಬೇಕು. ಈ ಕೇಸನ್ನು ಮುಚ್ಚಿ ಹಾಕಲು ಪ್ರಯತ್ನಿಸಿದವರ ವಿರುದ್ಧವೂ ಕ್ರಮ ಕೈಗೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ. ದುಃಖ ತಪ್ತ ತಾಯಿಗೆ ಹಾರ್ದಿಕ ಸಹಾನುಭೂತಿಯನ್ನು ಅದು ವ್ಯಕ್ತಪಡಿಸಿದೆ.

ಜಿಶಾಗೆ ನ್ಯಾಯ ಕೊಡಿ: ಡಿಎಸ್‌ಎಂಎಂ

ದಲಿತ್ ಶೋಷಣ್ ಮುಕ್ತಿ ಮಂಚ್ (ಡಿಎಸ್‌ಎಂಎಂ) ಒಂದು ಬಡ ದಲಿತ ಕುಟುಂಬದಿಂದ ಬಂದಿರುವ ಕಾನೂನು ವಿದ್ಯಾರ್ಥಿನಿ ಜಿಶಾಳ ಮೇಲೆ ಅಮಾನುಷ ಅತ್ಯಾಚಾರ ಮತ್ತು ಕೊಲೆಯನ್ನು ಬಲವಾಗಿ ಖಂಡಿಸಿದೆ. ಅದು ಕೂಡ ಪೋಲೀಸ್‌ನ ವರ್ತನೆ ನಾಚಿಕೆಗೇಡಿ ಎನ್ನುತ್ತ ಅಪರಾಧಿಗಳನ್ನು ಬೇಗನೇ ಹಿಡಿಯಬೇಕು, ಫಾಸ್ಟ್ ಟ್ರಾಕ್ ವಿಚಾರಣೆ ನಡೆಸಿ ಶಿಕ್ಷಿಸಬೇಕು, ಆರಂಭದಲ್ಲಿ ಇದನ್ನು ಮುಚ್ಚಿ ಹಾಕುವ ಪ್ರಯತ್ನ ನಡೆಸಿದವರ ಮೇಲೂ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದೆ.

ಜಿಶಾಳ ದುಃಖತಪ್ತ ತಾಯಿ ಮತ್ತು ಕುಟುಂಬದ ಸದಸ್ಯರಿಗೆ ಅದು ಹಾರ್ದಿಕ ಸಂತಾಪ ವ್ಯಕ್ತಪಡಿಸಿದೆ.

ದಿಲ್ಲಿಯಲ್ಲಿ ಮಹಿಳಾ ಸಂಘಟನೆಗಳ ಪ್ರತಿಭಟನೆ

ಮೇ 4ರಂದು ದಿಲ್ಲಿಯಲ್ಲಿ ಹಲವು ಮಹಿಳಾ ಸಂಘಟನೆಗಳು ಕೇರಳ ಭವನದ ಮುಂದೆ ಪ್ರತಿಭಟನೆ ನಡೆಸಿದವು. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಜಗ್ಮತಿ ಸಂಗ್ವಾನ್, ಅನ್ಹದ್‌ನ ಶಬ್ನಮ್ ಹಾಶ್ಮಿ, ಸ್ತ್ರೀ ಮುಕ್ತಿ ಸಂಘಟನ್‌ನ ವೃಶಾಲಿ ಮತ್ತಿತರರು ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತ'ನಾಡಿದರು.

ಕೇರಳದ ಜನವಾದಿ ಮಹಿಳಾ ಸಂಘಟನೆಯ ನಿಯೋಗವೊಂದು ಜಿಶಾಳ ತಾಯಿಯನ್ನು ಭೇಟಿಯಾದಾಗ ಆಕೆಯ ತಾಯಿ ಪೋಲೀಸರು ಸಮಯಕ್ಕೆ ಸರಿಯಾಗಿ ಕ್ರಮ ಕೈಗೊಂಡಿದ್ದರೆ ತನ್ನ ಮಗಳುಈಗ ಬದುಕಿರುತ್ತಿದ್ದಳು ಎಂದರು. ಇದಕ್ಕೆ ಮೊದಲೇ ಪೋಲೀಸರಿಗೆ ಕಿರುಕುಳ ಕೊಡುತ್ತಿರುವ ಬಗ್ಗೆ ದೂರು ಕೊಡಲಾಗಿತ್ತಂತೆ. ಆದರೆ ಪೋಲಿಸರು ಅದನ್ನು ಹಗುರವಾಗಿ ಕಂಡರು. ಆಕೆ ಕೇರಳ ಸರಕಾರದ ಮತ್ತು ಅವರ ಪೋಲಿಸರ ನಿರ್ಲಕ್ಷ್ಯವನ್ನು ಖಂಡಿಸಿದ್ದಾರೆ.

ಕೇರಳ ಭವನದ ಮುಖ್ಯಸ್ಥ ರೆಸಿಡೆಂಟ್ ಕಮಿಶನರ್ ಪ್ರತಿಭ'ಟನಾಕಾರರನ್ನು ಭೇಟಿಯಾಗಲು ನಿರಾಕರಿಸಿದರು. ಎರಡು ಗಂಟೆಗಳ ಕಾಲಪಟ್ಟು ಬಿಡದ ಮಹಿಳೆಯರ ರೋಷ ಹೆಚ್ಚುತ್ತಿದ್ದುದನ್ನು ಕಂಡು ಕೊನೆಗೂ ಜಗ್ಗಿದ ಕಮಿಶನರ್ ಹೊರ ಬಂದು ಪ್ರತಿಭಟನಾಕಾರರು ಕೇರಳದ ಮುಖ್ಯಮಂತ್ರಿಗಳಿಗೆ ಸಲ್ಲಿಸಬೇಕೆಂದಿದ್ದ ಮನವಿಯನ್ನು ಸ್ವೀಕರಿಸಿದರು.

ಶಂಕಿತ ಅಪರಾಧಿಗಳನ್ನು ಕೂಡಲೇ ಬಂಧಿಸಬೇಕು, ಈ ಅತ್ಯಂತ ಬರ್ಬರ ಕೃತ್ಯವನ್ನು ಅಪರೂಪದಲ್ಲಿ ಅಪರೂಪದ ಕೇಸ್ ಎಂದು ಪರಿಗಣಿಸಬೇಕು, ತಾಯಿ ಕೊಟ್ಟ ದೂರಿನ ಮೇಲೆ ಕ್ರಮ ಕೈಗೊಳ್ಳದ ಪೋಲೀಸ್ ಅಧಿಕಾರಿಯ ಹೊಣೆಗಾರಿಕೆಯನ್ನು ನಿಗದಿ ಪಡಿಸಬೇಕು ಮತ್ತು ಇದರ ನಂತರ ತಿರುವನಂತಪುರದಲ್ಲಿ ಒಬ್ಬ ನರ್ಸಿಂಗ್ ವಿದ್ಯಾರ್ಥಿಯ ಮೇಲೂ ನಡೆದ ಅತ್ಯಾಚಾರ ಪ್ರಕರಣದಲ್ಲಿ ನ್ಯಾಯ ದಗಿಸಬೇಕು ಎಂದು ಈ ಮನವಿ ಪತ್ರದಲ್ಲಿ ಆಗ್ರಹಿಸಲಾಗಿದೆ.

ಅಗಸ್ತಾ ಹೆಲಿಕಾಪ್ಟರ್ ಖರೀದಿ ಹಗರಣ: ರಾಜಕೀಯ ಧೂಳು ಎಬ್ಬಿಸುವ ಬದಲು ತನಿಖೆ ತ್ವರಿತವಾಗಿ ಪೂರ್ಣಗೊಳಿಸಿ

–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಭಾರತಕ್ಕೆ 12 ಹೆಲಿಕಾಪ್ಟರುಗಳನ್ನು ಮಾರಿದ ಇಟಲಿಯ ಕಂಪನಿ ಅಗಸ್ತಾ ವೆಸ್ಟ್‌ಲ್ಯಾಂಡ್ ಮತ್ತು ಅದರ ಮೂಲ ಕಂಪನಿಯ ಇಬ್ಬರು ಮಾಜಿ ಉನ್ನತ ಅಧಿಕಾರಿಗಳು ಲಂಚ ಪಡೆದ ಆಪಾದನೆಯ ಮೇಲೆ ಇಟೆಲಿಯ ನ್ಯಾಯಾಲಯ ಶಿಕ್ಷೆ ವಿಧಿಸಿದ ಹಿನ್ನೆಲೆಯಲ್ಲಿ ರಕ್ಷಣಾ ವ್ಯವಹಾರಗಳಲ್ಲಿ ಹಗರಣದ ಪ್ರಶ್ನೆಯ ಮೇಲೆ ಮತ್ತೆ ಗಮನ ಕೇಂದ್ರೀಕೃತಗೊಂಡಿದೆ.

ಇಟೆಲಿಯಲ್ಲಿನ ತನಿಖೆ ಮತ್ತು ನ್ಯಾಯಾಲಯದ ತೀರ್ಪಿನ ಪ್ರಕಾರ ಈ ವ್ಯವಹಾರದಲ್ಲಿ 360 ಕೋಟಿ ರೂ.ಗಳ ಲಂಚ ನೀಡಲಾಗಿದೆ. ಈ ವಿಷಯ ಬೆಳಕಿಗೆ ಬಂದ. ಾಗ ಯುಪಿಎ ಸರಕಾರ ಈ ಆರ್ಡರನ್ನು ರದ್ದು ಮಾಡಿ ಸಿಬಿಐ ತನಿಖೆಗೆ ಆದೇಶಿಸಿತ್ತು. ಆದರೆ ಯುಪಿಎ ಆಳ್ವಿಕೆಯಲ್ಲಿ ಈ ತನಿಖೆಯಲ್ಲಿ ನಿಜವಾದ ಪ್ರಗತಿಯೇನೂ ಆಗಲಿಲ್ಲ ಎಂಬುದು ಸ್ವಯಂವೇದ್ಯ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೋ ಅಭಿಪ್ರಾಯ ಪಟ್ಟಿದೆ.


ಈ ತನಿಖೆ ಸುಪ್ರಿಂ ಕೋರ್ಟಿನ ಉಸ್ತುವಾರಿಯಲ್ಲಿ ನಡೆಯಬೇಕು, ಆಗ ಮಾತ್ರವೇ ನಿಜವಾದ ತಪ್ಪಿತಸ್ಥರಿಗೆ ಶಿಕ್ಷೆಯಾಗಿದೆ ಎಂಬ ವಿಶ್ವಾಸ ಜನರಿಗೆ ಬರಲು ಸಾಧ್ಯ ಎಂದು ಆಗ ಸಿಪಿಐ(ಎಂ) ಹೇಳಿತ್ತು.

ಅಲ್ಲಿ ಇಟೆಲಿಯಲ್ಲಿ ಈ ವಿಷಯಕ್ಕೆ ಸಂಬಧಪಟ್ಟ ಎಲ್ಲ ಸಾಮಗ್ರಿಗಳನ್ನು ಅಪೀಲು ಕೋರ್ಟಿನ ಎದುರು ಸಲ್ಲಿಸಿ, ತೀರ್ಪು ಕೂಡ ಬಂದಿದೆ, ಆದರೆ ಇಲ್ಲಿ ಮೋದಿ ಸರಕಾರ ಬಂದ ಮೇಲೆ ಎರಡು ವರ್ಷಗಳಾದರೂ ಏನೂ ಪ್ರಗತಿ ಕಂಡಿಲ್ಲ.

ಆಳುವ ರಾಜಕಾರಣಿಗಳ, ಅಧಿಕಾರಶಾಹಿಗಳ ಮತ್ತು ಹಿರಿಯ ಮಿಲಿಟರಿ ಅಧಿಕಾರಿಗಳ ದುಷ್ಟಕೂಟ ಹೇಗಿದೆಯೆಂದರೆ, ಹಲವಾರು ರಕ್ಷಣಾ ಅವ್ಯವಹಾರಗಳು ನಡೆದರೂ ಭ್ರಷ್ಟಾಚಾರದ ವ್ಯವಸ್ಥೆ ಬಯಲಿಗೆ ಬಂದಿಲ್ಲ, ತಪ್ಪಿತಸ್ಥರಿಗೆ ಶಿಕ್ಷೆಯಾಗಿಲ್ಲ.

ಮೋದಿ ಸರಕಾರ ರಾಜಕೀಯ ಅಬ್ಬರ ಎಬ್ಬಿಸುವ ಬದಲು ತನಿಖೆ ತ್ವರಿತವಾಗಿ ಪೂರ್ಣಗೊಂಡು ಲಂಚ ಪಡೆಯುವಲ್ಲಿ ಶಾಮೀಲಾಗಿರುವ ಎಲ್ಲರನ್ನು ವಿಚಾರಣೆಗೊಳಪಡಿಸಿ ಶಿಕ್ಷೆಯಾಗುವಂತೆ ಮಾಡಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೋ ಆಗ್ರಹಿಸಿದೆ.

ªAiÀvÉAzÀgÉ EzÀÄ



"ಸುತ್ತಮುತ್ತಲಿನ ಜನರ ದಾರಿದ್ರ್ಯಕೂಪದಿಂದ ಮೇಲೇಳುವ ಆಕ್ರಂದನವನ್ನು ಯಾವಾಗಲೂ ಕೇಳುತ್ತಲೇ ಇರಬೇಕಾಗುವ ಒಬ್ಬ ವರದಿಗಾರನು ತನ್ನ ಯೋಚನೆಗಳನ್ನು, ಸೌಂದರ್ಯಪ್ರಜ್ಞೆಯಿಂದ, ಬಹಳ ರುಚಿಕರವಾದ ಪದಗಳಲ್ಲಿ ವ್ಯಕ್ತಪಡಿಸುವ ತಂತ್ರವನ್ನು ಮರೆಯಬೇಕಾಗುತ್ತದೆ. ಅವನ ಹುಟ್ಟೂರಿನಲ್ಲಿ ಒಮ್ಮೆಯೂ ಕಣ್ಣಿನಗಳಿಂದ ಮರೆಯಾಗದ ದಾರುಣ ಸ್ಥಿತಿಯನ್ನು ಜನಸಾಮಾನ್ಯರ ಒರಟು ಭಾಷೆಯಲ್ಲೇ ಬಹಿರಂಗಪಡಿಸುವುದು ತನ್ನ ರಾಜಕೀಯ ಕರ್ತವ್ಯವಾಗಿದೆಯೆಂದು ಅವನು ಕೆಲವೊಮ್ಮೆ ಭಾವಿಸುವುದು ಸ್ವಾಭಾವಿಕವಾಗಿದೆ".

– ಕಾರ್ಲ್ ಮಾರ್ಕ್ಸ್

ಅರಣ್ಯ ಭೂಮಿ ಮತ್ತು ಸಂಪನ್ಮೂಲಗಳ ಕಾನೂನುಬಾಹಿರ ಸ್ವಾಧೀನದ ವಿರುದ್ಧ ರಾಷ್ಟ್ರೀಯ ಸಮಾವೇಶ

ಆದಿವಾಸಿ, ಬುಡಕಟ್ಟು ಜನಗಳ ಸಂವಿಧಾನಿಕ ಹಕ್ಕುಗಳನ್ನು ದಮನ ಮಾಡುವ ಮೋದಿ ಸರಕಾರದ ದುಷ್ಟ ಹುನ್ನಾರದ ವಿರುದ್ಧ ಎಲ್ಲ ಸಮಾನ ಮನಸ್ಕ ಮತ್ತು ಜನವಾದಿ ಸಂಘಟನೆಗಳ ಒಂದು ಜಂಟಿ ದೇಶವ್ಯಾಪಿ ಪ್ರಚಾರಾಂದೋಲನಕ್ಕೆ ಪೂರ್ವಭಾವಿಯಾಗಿ ಮೇ 4ರಂದು ನವದೆಹಲಿಯಲ್ಲಿ ಅರಣ್ಯ ಭೂಮಿ ಮತ್ತು ಸಂಪನ್ಮೂಲಗಳ ಕಾನೂನುಬಾಹಿರ ಸ್ವಾಧೀನದ ವಿರುದ್ಧ ರಾಷ್ಟ್ರೀಯ ಸಮಾವೇಶ ನಡೆಯಿತು.

ಸಿಪಿಐ(ಎಂ) ಸಂಸತ್ ಸದಸ್ಯ ಜಿತೇಂದ್ರ ಚೌಧರಿ ಸಮಾವೇಶವನ್ನು ಉದ್ದೇಶಿಸಿ ಮಾತಾಡುತ್ತ ಕಳೆದ 23 ತಿಂಗಳಲ್ಲಿ ಪ್ರಧಾನ ಮಂತ್ರಿಗಳ ಕಚೇರಿ ಮತ್ತು ಪರಿಸರ ಮತ್ತು ಅರಣ್ಯ ಇಲಾಖೆ ಬುಡಕಟ್ಟು ವ್ಯವಹಾರಗಳ ಇಲಾಖೆಯ ಮೇಲೆ ಸತತ ಒತ್ತಡ ಹಾಕುತ್ತಿದೆ ಎಂದರು. ಅರಣ್ಯ ಭೂಮಿಯನ್ನು ಬೇರೆ ಪ್ರಾಜೆಕ್ಟುಗಳಿಗೆ ಬಳಸುವ ಬಗ್ಗೆ ಗ್ರಾಮಸಭೆಗಳ ಸಮ್ಮತಿ ಪಡೆಯಬೇಕೆಂಬ ಅಂಶವನ್ನು ತೆಗೆಯುವ ಪ್ರಸ್ತಾವಕ್ಕಾಗಿ ಈ ಒತ್ತಡ. ಈ ಹಿಂದೆಯೂ ಕೇಂದ್ರದಲ್ಲಿನ ಯುಪಿಎ ಮತ್ತು ಎನ್‌ಡಿಎ ಸರಕಾರಗಳು, ಅದೇ ರೀತಿಯಲ್ಲಿ ಹಲವು ರಾಜ್ಯಸರಕಾರಗಳು ಬುಡಕಟ್ಟು ಜನಗಳಿಗೆ ಮತ್ತು ಪಾರಂಪರಿಕವಾಗಿ ಅರಣ್ಯದಲ್ಲಿ ವಾಸಿಸುವ ಒಟ್ಟು 80 ಲಕ್ಷ ಕುಟುಂಬಗಳಿಗೆ ಹಕ್ಕುಗಳನ್ನು ಕೊಡಲು ಹಿಂದೇಟು ಹಾಕುತ್ತಲೇ ಇವೆ. ಆದರೆ ಮೋದಿ ಸರಕಾರ ಇನ್ನೂ ಮುಂದೆ ಹೋಗಿ ಅರಣ್ಯ ಹಕ್ಕುಗಳ ಕಾಯ್ದೆಯನ್ನೇ ದುರ್ಬಲಗೊಳಿಸಲು ಬಹಳ ಶ್ರಮ ಪಡುತ್ತಿದೆ. ಈ ಮೂಲಕ ದೊಡ್ಡ ಕಾರ್ಪೊರೇಟ್‌ಗಳಿಗೆ ಬೆಲೆಬಾಳುವ ಭೂಮಿ ಮತ್ತು ಖನಿಜಗಳ ಲೂಟಿಗೆ ಸೌಲಭ್ಯ ಕಲ್ಪಿಸುವುದು ಅದರ ಉದ್ದೇಶ.

ದೇಶದ ವಿವಿಧ ಭಾಗಗಳಿಂದ ಬಂದ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದರು. ವಿಭಿನ್ನ ರಾಜಕೀಯ ಪಕ್ಷಗಳ ಎಂಪಿಗಳು ಮತ್ತು ಮುಖಂಡರು ಈ ಸಮಾವೇಶದಲಿ ಮಾತನಾಡಿದರು. ಇವರಲ್ಲಿ ಯುಪಿಎ ಆಳ್ವಿಕೆಯಲ್ಲಿ ಪರಿಸರ ಮತ್ತು ಅರಣ್ಯ ಇಲಾಖೆಯ ಮಂತ್ರಿಯಾಗಿದ್ದ ಜೈರಾಮ್ ರಮೇಶ್ ಕೂಡ ಒಬ್ಬರು.



‘ಲೋಕಾಯುಕ್ತ’ಕ್ಕೆ ಇನ್ನೊಂದು ಕಂಟಕ

ಸಂಪಾದಕೀಯ

ಲೋಕಾಯುಕ್ತದ ಮೂಲಕ ಭ್ರಷ್ಟಾಚಾರದ (ಅದರಲ್ಲೂ ಉನ್ನತ ವಲಯದ ಭ್ರಷ್ಟಾಚಾರದ) ವಿರುದ್ಧ ಕ್ರಮಗಳಿಗೆ ಉತ್ತಮ ವ್ಯವಸ್ಥೆ ಸ್ಥಾಪಿಸಿ ಮುಖ್ಯಮಂತ್ರಿಯನ್ನು ಜೈಲಿಗೆ ಕಳಿಸಿದ ಕರ್ನಾಟಕ ಈಚಿನ ವರ್ಷಗಳಲ್ಲಿ ಈ ನಿಟ್ಟಿನಲ್ಲಿ ಅಡಿಗಡಿಗೂ ಎಡವುತ್ತಿದೆ. ಆ ವ್ಯವಸ್ಥೆಯನ್ನು ನಾಶ ಮಾಡುವತ್ತ ಸಾಗಿದೆ. ನ್ಯಾ. ಸಂತೋಷ ಹೆಗಡೆ ಅವರ ಪರಿಣಾಮಕಾರಿ ಅವಧಿಯ ನಂತರ ಸೂಕ್ತ ಲೋಕಾಯುಕ್ತರನ್ನು ನೇಮಿಸುವುದರಲ್ಲಿ ಸತತವಾಗಿ ಎಡವುತ್ತಿದೆ. ಲೋಕಾಯುಕ್ತ ವ್ಯವಸ್ಥೆಗೆ ಒಂದರ ಮೇಲೊಂದು ಕಂಟಕಗಳು ಬರುತ್ತಿವೆ. ವಿವಿಧ ಸರಕಾರಗಳು/ ಮುಖ್ಯಮಂತ್ರಿಗಳು ಸೂಚಿಸಿದ ವ್ಯಕ್ತಿಗಳ ಮೇಲೆ ವಿವಿಧ ಆಪಾದನೆಗಳು ಬರುತ್ತಿದ್ದು, ಅವರು ಅಥವಾ ಸರಕಾರ ಹಿಂಜರಿಯುವ ಮೂಲಕ ಲೋಕಾಯುಕ್ತರ ನೇಮಕದಲ್ಲಿ ವಿಳಂಬ ಆಗುತ್ತಿದೆ. ನ್ಯಾ. ಭಾಸ್ಕರ ರಾವ್ ಅವರನ್ನು ಲೋಕಾಯುಕ್ತರಾಗಿ ನೇಮಿಸಿದ ನಂತರ ಅವರ ಮಗನಿಂಧ ಅವರ ಸ್ಥಾನದ ದುರುಪಯೋಗ ಲೋಕಾಯುಕ್ತ ವ್ಯವಸ್ಥೆಯನ್ನು ಒಳಗಿನಿಂದಲೇ ಕೊರೆಯಲು ಆರಂಭವಾಗಿತ್ತು. ಆ ಪ್ರಕರಣದಲ್ಲಿ ನ್ಯಾ. ಭಾಸ್ಕರ ರಾವ್ ರಾಜೀನಾಮೆಯ ನಂತರ, ಹೊಸ ಲೋಕಾಯುಕ್ತ ನೇಮಕದಲ್ಲಿ ವಿಳಂಬ, ಸಾಲದ್ದಕ್ಕೆ ಉಪಲೋಕಾಯುಕ್ರ ಅಡಿ ಅವರ ವಿರುದ್ಧ ದೋಷಾರೋಪಣೆ ಇಡೀ ವ್ಯವಸ್ಥೆಯನ್ನೇ ಅತಂತ್ರವಾಗಿಸಿತ್ತು. ಅದು ಸಾಲದೆಂಬಂತೆ ಆ ನಂತರ, ಲೋಕಾಯುಕ್ತಕ್ಕೆ ಬದಲಿಯಾಗಿ ಎಸಿಬಿ (ಭ್ರಷ್ಟಾಚಾರ ನಿಗ್ರಹ ದಳ) ರಚನೆ ಭ್ರಷ್ಟಾಚಾರ–ವಿರೋಧಿ ಕ್ರಮದ ವ್ಯವಸ್ಥೆಯನ್ನೇ ಬುಡಮೇಲು ಮಾಡಿದೆ.

ಇವೆಲ್ಲದರ ಹಿನ್ನೆಲೆಯಲ್ಲಿ ರಾಜ್ಯ ಸರಕಾರ ಲೋಕಾಯುಕ್ತ ಹುದ್ದೆಗೆ ಹಲವು ವಿವಾದಗಳ ನಡುವೆ ನ್ಯಾ. ಎಸ್. ಆರ್. ನಾಯಕ್ ಅವರ ಹೆಸರನ್ನು ಸೂಚಿಸಿ ರಾಜ್ಯಪಾಲರಿಗೆ ಕಳಿಸಿತ್ತು. ರಾಜ್ಯಪಾಲರು ನ್ಯಾ. ನಾಯಕ್ ಅವರ ಹೆಸರನ್ನು ತಿರಸ್ಕರಿಸಿ ಹಿಂದೆ ಕಳಿಸುವ ಮೂಲಕ ಲೋಕಾಯುಕ್ತ ವ್ಯವಸ್ಥೆಗೆ ಇನ್ನೊಂದು ಕಂಟಕ ಎದುರಾಗಿದೆ. ಭಾರತದ ಸಂವಿಧಾನದ ಪ್ರಕಾರ ರಾಜ್ಯಪಾಲರು ಸಾಮಾನ್ಯವಾಗಿ ಚುನಾಯಿತ ಸರಕಾರದ ಶಿಫಾರಸುಗಳನ್ನು ಮನ್ನಿಸಬೇಕು. ಸರಕಾರ ಸಂವಿಧಾನ ಉಲ್ಲಂಘಿಸಿದ ಅಥವಾ ಅದರ ಸಂವಿಧಾನ–ವಿರೋಧಿ ಕೃತ್ಯಗಳ ಅಪರೂಪದ ಸಂದರ್ಭಗಳಲ್ಲಿ ಮಾತ್ರ ಅವರು ಸರಕಾರದ ಶಿಫಾರಸುಗಳನ್ನು ತಿರಸ್ಕರಿಸಬಹುದು. ಈ ದೃಷ್ಟಿಯಿಂದ ನ್ಯಾ. ಎಸ್. ಆರ್. ನಾಯಕ್ ಅವರ ಸೂಚನೆಯ ಸಾಧಕ–ಬಾಧಕಗಳು ಏನೇ ಇರಲಿ, ರಾಜ್ಯಪಾಲರ ಕ್ರಮ ಸರಿಯಲ್ಲ. ರಾಜ್ಯಪಾಲರು ಎಂದಿನಂತೆ ಕೇಂದ್ರದಲ್ಲಿ ಆಳುವ ಸರಕಾರದ ರಾಜಕೀಯ ಪ್ರತಿನಿಧಿಯಂತೆ ಈ ಕ್ರಮ ಕೈಗೊಂಡಿದ್ದಾರೆ.

ಲೋಕಾಯುಕ್ತ ವ್ಯವಸ್ಥೆಯಿಂದ ಜೈಲುವಾಸ ಕಂಡ ಯೆಡಿಯೂರಪ್ಪನವರನ್ನು ರಾಜ್ಯ ಪಕ್ಷದ ಅಧ್ಯಕ್ಷರನ್ನಾಗಿ ಆರಿಸಿದ ಬಿಜೆಪಿ ಪಕ್ಷ ಲೋಕಾಯುಕ್ತ ವ್ಯವಸ್ಥೆ ಗಟ್ಟಿಗೊಳಿಸುವ ಬಗ್ಗೆ ಎಷ್ಟು ಬದ್ಧವಾಗಿದೆ ಅಥವಾ ಪ್ರಾಮಾಣಿಕವಾಗಿದೆ ಎಂಬುದು ಎಲ್ಲರಿಗೂ ತಿಳಿದಿದೆ. ಇದೇ ರಾಜ್ಯಪಾಲರು ಮಾಜಿ ಮುಖ್ಯಮಂತ್ರಿಗಳ ಮೇಲೆ ಕೇಸು ಹಾಕಲು ಬೇಕಾದ ಅನುಮತಿಯನ್ನು ಹಿಂತೆಗೆಯುವ ಮೂಲಕ ಲೋಕಾಯುಕ್ತ ವ್ಯವಸ್ಥೆಯ ಪ್ರಮುಖ ಪರಿಣಾಮಕಾರಿ ಕ್ರಮದ ಒಂದು ಉದಾಹರಣೆಯನ್ನು ಹೊಸಕಿ ಹಾಕಿದ್ದರು ಎಂದು ಇಲ್ಲಿ ನೆನಪು ಮಾಡಿಕೊಳ್ಳಬೇಕು. ಆದ್ದರಿಂದ ರಾಜ್ಯಪಾಲರ ಈ ಕ್ರಮ ಕಳಂಕರಹಿತರು ಲೋಕಾಯುಕ್ತರಾಗಿರಬೇಕು ಎಂಬ ಕಾಳಜಿಯಿಂದ ತೆಗೆದುಕೊಂಡದ್ದಲ್ಲ. ಒಂದು ಕಡೆ ತಾನು ಲೋಕಾಯುಕ್ತ ವ್ಯವಸ್ಥೆ ಪರ ಎಂದು ಪೋಸು ಕೊಡುತ್ತಾ, ಕಾಂಗ್ರೆಸ್ ಸರಕಾರ ಮತ್ತು ಮುಖ್ಯಮಂತ್ರಿಯನ್ನು ಭ್ರಷ್ಟರೆಂದು ‘ಬದನಾಮ್’ ಮಾಡುತ್ತಾ, ಇನ್ನೊಂದು ಕಡೆ ಲೋಕಾಯುಕ್ತ ವ್ಯವಸ್ಥೆಯನ್ನು ನಿಷ್ಕ್ರಿಯಗೊಳಿಸುವುದರಲ್ಲಿ ಕಾಂಗ್ರೆಸ್ ಜತೆ ಶಾಮೀಲಾಗುವ ಬಿಜೆಪಿಯ ತಂತ್ರವನ್ನು ಜಾರಿ ಮಾಡಲು ರಾಜ್ಯಪಾಲರ ಅಧಿಕಾರವನ್ನು ಬಳಸಲಾಗಿದೆ. 2014 ಚುನಾವಣೆಯಲ್ಲಿ ಕಾಂಗ್ರೆಸ್ ಭ್ರಷ್ಟಾಚಾರದ ವಿರುದ್ಧ ಪ್ರಚಾರ ಮಾಡಿ ಅಧಿಕಾರಕ್ಕೆ ಬಂದ ಬಿಜೆಪಿ ಕೇಂದ್ರದಲ್ಲಿ ಲೋಕಪಾಲ್ ವ್ಯವಸ್ಥೆ ಬಗ್ಗೆ ಎರಡು ವರ್ಷವಾದರೂ ಉಸಿರೆತ್ತಿಲ್ಲ. ಬಿಜೆಪಿ ಸರಕಾರ ಇರುವ ಹೆಚ್ಚಿನ ರಾಜ್ಯಗಳಲ್ಲೂ ಲೋಕಾಯುಕ್ತದಂತಹ ವ್ಯವಸ್ಥೆ ಜಾರಿಗೆ ತಂದಿಲ್ಲ.

ರಾಜ್ಯದಲ್ಲಿ ಅತ್ಯಂತ ಭ್ರಷ್ಟ ಆಡಳಿತ ಕೊಟ್ಟ ಬಿಜೆಪಿ ಸರಕಾರದಿಂದ ಬೇಸತ್ತ ಜನ ಆರಿಸಿದ ಕಾಂಗ್ರೆಸ್ ಸರಕಾರ ಸಹ ಲೋಕಾಯುಕ್ತ ವ್ಯವಸ್ಥೆಯನ್ನು ಗಟ್ಟಿ ಗೊಳಿಸುವ ಬದಲು ಕಿತ್ತು ಹಾಕುವ ಸರಣಿ ಕ್ರಮಗಳನ್ನು ಕೈಗೊಂಡಿದೆ. ಲೋಕಾಯುಕ್ತ ಹುದ್ದೆಗೆ ಸೂಕ್ತರಾದ ಕಳಂಕರಹಿತ ನ್ಯಾಯಮೂರ್ತಿಗಳು ಲಭ್ಯವಿಲ್ಲ ಎಂದೇನಿಲ್ಲ. ನ್ಯಾ. ನಾಯಕ್ ಅವರನ್ನು ಸೂಚಿಸಿದರೆ ರಾಜ್ಯಪಾಲರು ಅದನ್ನು ತಿರಸ್ಕರಿಸುತ್ತಾರೆ. ಈಗಾಗಲೇ ಹಲ್ಲು ಕಿತ್ತಿರುವ ಲೋಕಾಯುಕ್ತ ವ್ಯವಸ್ಥೆ ಇನ್ನಷ್ಟು ಕಾಲ ಅತಂತ್ರವಾಗಿ ಮುಂದುವರೆಯುತ್ತದೆ ಎಂಬ ಲೆಕ್ಕಾಚಾರದ ಮೇಲೆನೇ ಅವರ ನೇಮಕಕ್ಕೆ ಪಟ್ಟು ಹಿಡಿದಿದ್ದರೂ ಆಶ್ಚರ್ಯವಿಲ್ಲ. ಹೀಗೆ ಲೋಕಾಯುಕ್ತ ವ್ಯವಸ್ಥೆ ಕಾಂಗ್ರೆಸ್–ಬಿಜೆಪಿಗಳ ಸಾರ್ವಜನಿಕ ಪೋಸು ಮತ್ತು ಒಳಹುನ್ನಾರಗಳ ಆಟ–ಕ್ಕೆ ಬಲಿಯಾಗಿದೆ. ಸೂಕ್ತ ಲೋಕಾಯುಕ್ತರನ್ನು ನೇಮಿಸುವ, ಆ ವ್ಯವಸ್ಥೆಯನ್ನು ಗಟ್ಟಿ ಗೊಳಿಸಲು ಸಾರ್ವಜನಿಕ ಒತ್ತಡ ಹೇರಬೇಕಾಗಿದೆ.

ಅದೇ ಸಮಯದಲ್ಲಿ ಮೂಲತಃ ಭ್ರಷ್ಟ ವ್ಯವಸ್ಥೆಯಾಗಿರುವ ಬಂಡವಾಳಶಾಹಿ (ಅದರಲ್ಲೂ ಈಗಿನ ನವ–ಉದಾರವಾದಿ ಹಂತದಲ್ಲಿ) ವ್ಯವಸ್ಥೆಯನ್ನು ಬದಲಾಯಿಸದೆ ಭ್ರಷ್ಟಾಚಾರವನ್ನು ಹೋಗಲಾಡಿಸಲು ಸಾಧ್ಯವಿಲ್ಲ. ಬಂಡವಾಳಶಾಹಿ ಆಳ್ವಿಕೆಯ ಮೂರೂ ಅಂಗಗಳನ್ನು ಆವರಿಸಿರುವ ಭ್ರಷ್ಟಾಚಾರವನ್ನು ಒಂದು ಕಳಂಕರಹಿತ ಲೋಕಾಯುಕ್ತ ತೊಡೆದು ಹಾಕಬಹುದು ಎಂಬುದು ಒಂದು ಭ್ರಮೆ ಎಂದು ತಿಳಿದುಕೊಳ್ಳಬೇಕು. ಆದ್ದರಿಂದ ಭ್ರಷ್ಟಾಚಾರವನ್ನು ನಿಗ್ರಹಿಸಲು ಹತೋಟಿಗೆ ತರಲು ಲೋಕಾಯುಕ್ತ ವ್ಯವಸ್ಥೆ ಸ್ಥಾಪಿಸಲು ಹೋರಾಟವನ್ನು, ಭ್ರಷ್ಟ ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಹೋರಾಟದ ಜತೆ ಸಮ್ಮಿಳಿತಗೊಳಿಸುವುದು ದುಡಿಯುವ ವರ್ಗದ ಚಳುವಳಿಯ ಕರ್ತವ್ಯ.

‘ನೀಟ್’ ಜಾರಿಗೆ ಪೂರ್ವ ಸಿದ್ಧತೆ ಅಗತ್ಯ

ಶಿಕ್ಷಣ ಕ್ಷೇತ್ರವಿಂದು ಗೊಂದಲಗಳ ಗೂಡಾಗಿದೆ. ಒಂದೆಡೆ ಆಳುವವರು ತೆಗೆದುಕೊಳ್ಳುವ ನಿರ್ಧಾರಗಳು, ಶಿಕ್ಷಣ ಕ್ಷೇತ್ರದಲ್ಲಿ ಭಾರೀ ಹಿಡಿತ ಹೊಂದಿರುವ ಖಾಸಗಿ ಶಿಕ್ಷಣೋದ್ಯಮಿಗಳು. ಕಾಲಕಾಲಕ್ಕೆ ನ್ಯಾಯಾಲಯಗಳ ತೀರ್ಪುಗಳು ಹೀಗೆ ಅವುಗಳನ್ನು ಗೋಜಲುಗೊಳಿಸುತ್ತಲೇ ಇರುತ್ತವೆ. ಅದೆಷ್ಟೋ ಬಾರಿ ಸಮಸ್ಯೆಗಳಿಗೆ ಸೂಚಿಸುವ ಪರಿಹಾರಗಳೂ ಸಹ ಸಾಂದರ್ಭಿಕ ಕಾಲ ಮಿತಿಗಳಿಂದಾಗಿ ಅರಗಿಸಿಕೊಳ್ಳಲಾಗದ ಅನ್ನವಾಗಿಯೂ ಬಿಡುತ್ತವೆ.

ಈಗ ದೇಶದಲ್ಲಿ, ನಮ್ಮ ರಾಜ್ಯದಲ್ಲಿಯೂ ವ್ಯಾಪಕ ಚರ್ಚೆ ನಡೆಯುತ್ತಿರುವುದು ವೈದ್ಯಕೀಯ, ಮತ್ತಿತ್ತರ ಕೋರ್ಸ್‌ಗಳಿಗೆ ಪ್ರವೇಶಾವಕಾಶ ಕುರಿತ (ನೀಟ್) ಸುಪ್ರಿಂಕೋರ್ಟ್‌ನ ಆದೇಶದ ಸುತ್ತ. ಇದೇ ಏಪ್ರಿಲ್ 28 ರಂದು ಮೆಡಿಕಲ್, ಡೆಂಟಲ್ ಶಿಕ್ಷಣದ ಪ್ರವೇಶಾತಿಗೆ ‘ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ’ (ಎನ್.ಇ.ಇ.ಟಿ) ಕಡ್ಡಾಯ ಮತ್ತು ಇಡೀ ದೇಶದಲ್ಲಿನ ಪ್ರಕ್ರೀಯೆಗೆ ಅದೊಂದೇ ಕ್ರಮ ಅನುಸರಿಸಬೇಕು ಎಂಬ ಆದೇಶವನ್ನು ಸುಪ್ರೀಂಕೋರ್ಟ್‌ನ ಐದು ನ್ಯಾಯ ಮೂರ್ತಿಗಳ ಪೀಠ (ನ್ಯಾ. ಅನಿಲ್ ದವೆ ನೇತೃತ್ವದ ಸಂವಿಧಾನ ಪೀಠ) ತೀರ್ಪು ನೀಡಿತ್ತು.

ಈಗ ನಿಗದಿಯಾದಂತೆ ಮೊದಲ ಹಂತದ ಪರೀಕ್ಷೆಗಳನ್ನು 2016 ರ ಮೇ 1 ರಂದು ನಡೆಸಬೇಕೆಂದೂ, ಹೊಸದಾಗಿ ಬರೆಯಬೇಕಿರುವವರಿಗೆ ಜುಲೈ 24, 2016 ರಂದು ದಿನಾಂಕಗಳನ್ನು ಸೂಚಿಸಿತು. ಈ ಏಕರೂಪದ ಪರೀಕ್ಷೆಯೇ ದೇಶದ ಎಲ್ಲ ಸರ್ಕಾರಿ, ಖಾಸಗಿ ಶಿಕ್ಷಣ ಸಂಸ್ಥೆಗಳ ಪ್ರವೇಶಕ್ಕೆ ಅನಿವಾರ್ಯ, ಕಡ್ಡಾಯ ಅದನ್ನು ಪಾಲಿಸಬೇಕೆಂದು ಕಠಿಣವಾದ ನಿರ್ದೇಶನವನ್ನು ನೀಡಿತು.

ಪರೀಕ್ಷೆ ತೀರಾ ಹತ್ತಿರವಿರುವಾಗ, ರಾಜ್ಯಗಳು ಸಿಇಟಿ, ಕಾಮೆಡ್–ಕೆ. ಯಂತಹ ತನ್ನದೇ ಪರೀಕ್ಷೆಗಳನ್ನು ನಡೆಸಲು ಸಿದ್ಧವಾಗಿರುವಾಗ, ತಮಿಳುನಾಡಿನಲ್ಲಿ ಇಂತಹ ಪರೀಕ್ಷೆಗಳೆ ಇಲ್ಲದೆ, ಮಂಡಳಿಯ ಪರೀಕ್ಷೆಯ ಅಂಕಗಳನ್ನೇ ಆಧಾರವಾಗಿ ಇರಿಸಿಕೊಂಡು ಅರ್ಹತೆಯ ಆಯ್ಕೆ ಮಾಡುತ್ತಿರುವಾಗ, ಅದೆಲ್ಲವನ್ನು ರದ್ದುಗೊಳಿಸಿ ‘ನೀಟ್’ ಪರೀಕ್ಷೆಯೊಂದನ್ನೇ ಅನುಸರಿಸಬೇಕೆಂಬುದು ಬಹುತೇಕ ಎಲ್ಲರಲ್ಲಿ, ಮುಖ್ಯವಾಗಿ ಪೋಷಕರು, ವಿದ್ಯಾರ್ಥಿಗಳಲ್ಲಿ ಆತಂಕ, ತಲ್ಲಣಗಳನ್ನೂ ಸೃಷ್ಟಿಸಿರುವುದು ನಿಜ. ಆದರೆ ನ್ಯಾಯಾಲಯ ತನ್ನ ಬಿಗಿ ನಿಲುವು ಸಡಿಲಗೊಳಿಸುವುದು ಅಸಾಧ್ಯವೆಂದು ಮುಂದಿನ ಮನವಿ ಕುರಿತ ಸಂದರ್ಭದಲ್ಲಿ ಸ್ಪಷ್ಟಪಡಿಸಿದೆ.

2016 ರ ಈ ತೀರ್ಪು ತನ್ನ ಹಿಂದಿನ 2013ರ ಬಹುತೇಕ ತೀರ್ಪಿನ್ನು ಅನೂರ್ಜಿತಗೊಳಿಸಿದಂತೆ ಆಗಿದೆ. 2013 ರಲ್ಲಿ ಮುಖ್ಯ ನ್ಯಾಯಮೂರ್ತಿಗಳಾಗಿದ್ದ ನ್ಯಾ. ಅಲ್ತಮಸ್ ಕಬೀರ್ ರವರ ಮೂರು ನ್ಯಾಯಮೂರ್ತಿಗಳ ಪೀಠ ಬಹುಮತದಿಂದ ನೀಟ್ ಪದ್ಧತಿಯನ್ನು ನಿರಾಕರಿಸಿ ರಾಜ್ಯಗಳಲ್ಲಿ ಅವರದೇ ರೀತಿಯ ಪರೀಕ್ಷೆಗಳನ್ನೂ ನಡೆಸಲು ಆದೇಶಿಸಿತ್ತು. ಮಹಾನಗರಗಳಲ್ಲಿ ಬೆಳೆದ ಮಕ್ಕಳು ಮತ್ತು ಗ್ರಾಮೀಣ ಪರಿಸರದ ಮಕ್ಕಳ ನಡುವೆ ಜ್ಞಾನದ ಕಲಿಕೆಯಲ್ಲಿ ಅಪಾರ ವ್ಯತ್ಯಾಸವಿದೆ. ರಾಜ್ಯಗಳ ಹಾಗೂ ಅಲ್ಪ ಸಂಖ್ಯಾತರ ಸಂವಿಧಾನಿಕ ಹಕ್ಕುಗಳನ್ನು ಮಾನ್ಯ ಮಾಡಬೇಕಾಗುತ್ತದೆ ಎಂದು ತನ್ನ ತೀರ್ಪಿಗೆ ಸಮರ್ಥನೆಯನ್ನು ನೀಡಿತ್ತು. ಈ ತೀರ್ಪು ಬಹುಮತದಿಂದ ತೆಗೆದುಕೊಂಡದ್ದಾಗಿತ್ತಲ್ಲದೆ, ನ್ಯಾ. ಅಲ್ತಮಸ್ ರವರು ನಿವೃತ್ತಿ ಹೊಂದುವ ಹಿಂದಿನ ದಿನ ತೀರ್ಪು ಪ್ರಕಟಿಸಿದ್ದನ್ನ ಪ್ರಶ್ನಿಸಲಾಗಿತ್ತು. ಈಗಲೂ ನ್ಯಾ. ದವೆ ಯವರ ನೇತೃತ್ವದ ಪೀಠ ಈ ಪ್ರಶ್ನೆಯನ್ನು ಪ್ರಸ್ತಾಪಿಸಿದೆ.

2016ರ ಏಪ್ರಿಲ್ 28 ರ ತನ್ನ ತೀರ್ಪಿನಲ್ಲಿ ಈ ವಾಸ್ತವಗಳನ್ನು ಗಮನಿಸಿದಾಗ್ಯೂ ಈ ಅವಕಾಶವನ್ನೇ ಬಳಸಿ ಖಾಸಗಿ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿ–ಪೋಷಕರಿಂದ ವಿಪರೀತ ಹಣವನ್ನು ಸುಲಿಯುತ್ತಿವೆ. ಮಾತ್ರವಲ್ಲ, ಅವರವರದ್ದೇ ಪರೀಕ್ಷಾ ಪದ್ಧತಿಗಳು ಇರುವುದರಿಂದಾಗಿ ವಿದ್ಯಾರ್ಥಿಗಳು ಹಲವಾರು ಪರಿಕ್ಷೆಗಳನ್ನು ಬರೆಯಬೇಕಾದ ವಿಪರೀತ ಒತ್ತಡದಲ್ಲಿದ್ದಾರೆ, ಮಾನಸಿಕ ಹಿಂಸೆ ಅನುಭವಿಸುತ್ತಾರೆ. ಇದು ತೊಲಗಿ ಒಂದು ಏಕರೂಪದ ಪರೀಕ್ಷಾ ವ್ಯವಸ್ಥೆ ಅನಿವಾರ್ಯ, ಅಗತ್ಯವೆಂದು ಈಗಿನ ಪೀಠ ಪ್ರತಿಪಾದಿಸಿತು.

ಎತ್ತಲಾದ ಹಲವು ಪ್ರಶ್ನೆಗಳಿಗೆ ಸ್ಪಷ್ಟನೆ ನೀಡುತ್ತಾ ಪೀಠವು ರಾಜ್ಯದ ನೀಟ್ ಹಂಚಿಕೆ ಕೋಟಾ 85% ರಷ್ಟು ಈಗಿರುವಂತೆ ಮುಂದುವರಿಯುತ್ತದೆಂದೂ ಕೇಂದ್ರಕ್ಕೆ 15% ಹಂಚಿಕೆ ಈಗಿರುವಂತೆ ಲಭ್ಯವೆಂದೂ ಹೇಳಿ ರಾಜ್ಯಗಳ, ಪ್ರಾದೇಶಿಕ, ಸಂವಿಧಾನಾತ್ಮಕ ಹಾಗೂ ಮೀಸಲಾತಿಗಳನ್ನು ನಿರಾಕರಿಸುವುದಿಲ್ಲ, ಪಾಲಿಸಲೇಬೇಕು ಎಂದೂ ಹೇಳಿದೆ. ಹಾಗೇ ಕ್ಯಾಪಿಟೇಶನ್, ಡೋನೇಷನ್ ಸುಲಿಗೆಗೆ ನಿಯಂತ್ರಣದ ಬಗ್ಗೆಯೂ ಸೂಚಿಸಿದೆ. ಭಾರೀ ಅವ್ಯವಹಾರಗಳ ಆಗರವಾಗಿದೆಯೆಂಬ ಆರೋಪವಿರುವ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದ ಆಡಳಿತ ನಿರ್ವಹಣೆಯನ್ನು ತೀವ್ರವಾಗಿ ಟೀಕಿಸಿ ಕೇಂದ್ರ ಸರ್ಕಾರ ಪರ್ಯಾಯವಾಗಿ ಮುಂದಿನ ಕಾನೂನು – ವ್ಯವಸ್ಥೆಯನ್ನು ಮಾಡುವವರೆಗೆ ನಿಗಾ ಸಮಿತಿಯನ್ನು ರಚಿಸಿ ಕಣ್ಗಾವಲು ಇರಿಸಿದೆ.

ಈ ಒಟ್ಟು ತೀರ್ಪಿನಲ್ಲಿ ಹಲವಾರು ಸಕಾರಾತ್ಮಕ ಅಂಶಗಳಿವೆ. ಶಿಕ್ಷಣದ ವ್ಯಾಪಾರೀಕರಣ, ಅದರಲ್ಲೂ ವೃತ್ತಿ ಶಿಕ್ಷಣದ ಭಾರೀ ದಂಧೆಯಲ್ಲಿ ಹಣದ ಲೂಟಿಗೆ ಕಡಿವಾಣ ಹಾಕುವುದು ಸ್ವಾಗತಾರ್ಹ. ಆದರೆ ಇಂತಹ ಅತ್ಯಂತ ಮಹತ್ವದ ತೀರ್ಪನ್ನು ಜಾರಿಗೊಳಿಸಬೇಕಾದರೆ ಕಾಲಾವಾಕಾಶ ಬೇಕಾಗುತ್ತದೆ. ಹಲವಾರು ಪ್ರಶ್ನೆಗಳಿಗೆ ಪ್ರಾಯೋಗಿಕವಾದ ಉತ್ತರಗಳನ್ನು ಕಂಡು ಕೊಳ್ಳಬೇಕಾಗುತ್ತದೆ, ಜಾರಿವಿಧಾನಗಳನ್ನು ರೂಪಿಸಬೇಕಾಗುತ್ತದೆ.

ಆದ್ದರಿಂದ 2016 ಏಪ್ರೀಲ್ 28 ರ ಸುಪ್ರಿಂ ಕೋರ್ಟ್‌ನ ತೀರ್ಪನ್ನು 2017–18ರ ಶೈಕ್ಷಣಿಕ ವರ್ಷದಿಂದ ಜಾರಿಗೊಳಿಸುವುದು ಅತ್ಯಗತ್ಯ.

ಇದರೊಂದಿಗೆ ಹಲವು ಸಮಸ್ಯೆಗಳೂ ಇವೆ. ಹಿಂದೆ ನ್ಯಾಯಾಲಯ ಗಮನಿಸಿದಂತೆ, ಇಡೀ ರಾಷ್ಟ್ರಕ್ಕೆ ಏಕರೂಪ ಪರೀಕ್ಷೆಯಾದಾಗ ಬಹುತೇಕ ರಾಜ್ಯಗಳಲ್ಲಿ ಆ ಮಟ್ಟದ ಕಲಿಕೆ, ತರಬೇತಿಗಳು ಇಲ್ಲ. ಹಾಗೂ ಇನ್ನೂ ನೀಡುವ ಕೋಚಿಂಗ ಸೆಂಟರ್, ಶಿಕ್ಷಣ ಸಂಸ್ಥೆಗಳು ವಿಪರೀತ ಹಣವನ್ನು (1.5 ಲಕ್ಷದಿಂದ 2 ಲಕ್ಷ ಪ್ರತಿ ವರ್ಷ) ಸುಲಿಯುತ್ತವೆ. ಕಾಲೇಜು ಪೀಜ್ ಕಟ್ಟಲೇ ಅಸಾಧ್ಯವಿರುವವರು ಆರ್ಥಿಕವಾಗಿ ಸಾಮಾಜಿಕವಾಗಿ ದುರ್ಬಲರು ಹೇಗೆ ತರಬೇತಿ ಪಡೆಯಲು ಸಾಧ್ಯ? ಅಲ್ಲದೆ ಆಯಾ ರಾಜ್ಯಗಳಲ್ಲಿ ಒಂದೊಂದು ರೀತಿಯ ಪಠ್ಯಕ್ರಮವೂ ಇರುತ್ತದೆ. ಪ್ರಾದೇಶಿಕ ಭಿನ್ನತೆ ಇರುತ್ತದೆ. ಹೀಗಿರುವಾಗ ‘ಮುಂದುವರಿದ’ ವಿಭಾಗಗಳು ‘ನೀಟ್’ ನ ಲಾಭ ಬಾಚಿಕೊಳ್ಳಲಾರರೇ? ಹಾಗಾಗಿ ನಮ್ಮ ರಾಜ್ಯಗಳಲ್ಲಿಯೂ ಕೆಳಹಂತದಿಂದ ಮೇಲಿನ ವರೆಗೆ ಪಠ್ಯಕ್ರಮದಲ್ಲಿ ಗುಣಮಟ್ಟದ ಸುಧಾರಣೆ, ಶಿಕ್ಷಣ ನೀಡಿಕೆ, ಮೂಲಭೂತ ಸೌಲಭ್ಯಗಳನ್ನು ಉನ್ನತೀಕರಿಸುವುದು ಅನಿವಾರ್ಯ, ಅತ್ಯಗತ್ಯ.

ಅದೇ ಹೊತ್ತಿನಲ್ಲಿ ಶಿಕ್ಷಣ ಮತ್ತು ಪ್ರವೇಶಾತಿಗಳನ್ನು ವಿಪರೀತವಾಗಿ ಕೇಂದ್ರೀಕರಿಸುವುದು ಸರಿಯಲ್ಲ. ಕಾರ್ಪೋರೇಟ್ ಧಾಳಿ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಪ್ರಜಾಪ್ರಭುತ್ವೀಕರಣದ ಮೂಲ ನೀತಿಗಳನ್ನು ಬದ್ಧತೆಯಿಂದ ಪಾಲಿಸಲು ಹೆಚ್ಚಿನ ಗಮನ ನೀಡಬೇಕಿದೆ.

ಹೀಗಾಗಿ ‘ನೀಟ್’ ಜಾರಿಯನ್ನು ಮುಂದಿನ ವರ್ಷದಿಂದ ಸಕಲ ಸಿದ್ಧತೆ ಮಾಡಿ ನಡೆಸುವುದು ವಾಸ್ತವದ ಕ್ರಮವಾಗುವುದು. ನಿಜ, ಇಂದು ಖಾಸಗೀ ಸಂಸ್ಥೆಗಳ ಲೂಟಿ. ಹಲವು ಪರೀಕ್ಷೆಗಳ ಹೆಸರಿನಲ್ಲಿ (ಸಿಇಟಿ, ಕಾಮೆಡ್–ಕೆ ಮತ್ತು ಆಯಾ ಸಂಸ್ಥೆಗಳೇ ನಡೆಸುವ ಪರೀಕ್ಷೆಗಳು ಕೊನೆಗೆ ಎಲ್ಲಾ ನಿಯಮಗಳನ್ನು ಉಲ್ಲಂಘಿಸಿ ಕೋಟಿಗಳಿಗೆ ಮಾರುವುದು). ಹಣ ದೋಚುವ, ಶಿಕ್ಷಣ ದಂಧೆಗೆ ಕಡಿವಾಣ ಹಾಕಲೇಬೇಕು. ‘ಶಿಕ್ಷಣದ ಸೇವೆ’ಗೆಂದೇ ಜನಿಸಿದೆವೆಂದು ಘೋಷಿಸಿರುವ ಶಿಕ್ಷಣೋದ್ಯಮಗಳು ‘ಸೇವೆ’ ಮಾಡಿದರೆ ಅಷ್ಟೇ ಸಾಕು!

ಇಂತಹ ಸ್ಥಿತಿಯಲ್ಲಿ ರಾಜ್ಯ ಸರ್ಕಾರವೂ ಈ ಕ್ಷೇತ್ರದ ತಜ್ಞರೊಂದಿಗೆ, ಪೋಷಕರು, ವಿದ್ಯಾರ್ಥಿಗಳೊಂದಿಗೆ ಸಮಾಲೋಚಿಸಿ ಸೂಕ್ತ ನಿಲುವು, ಕ್ರಮ ವಹಿಸುವುದು ಅಗತ್ಯವಾಗಿದೆ.

– ಎಸ್.ವೈ. ಗುರುಶಾಂತ,

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೇ ದಿನ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದೆರಡು ಪಟ್ಟಣಗಳಿಗಷ್ಟೇ ಸೀಮಿತವಾಗಿ ನಡೆಯುತ್ತಿದ್ದ ಮೇ ದಿನ, ಕಳೆದ ಎರಡು ವರ್ಷಗಳಿಂದ ಹಲವು ಊರುಗಳಲ್ಲಿ ಸಂಭ್ರಮದಿಂದ ಆಚರಿಸಲಾಗುತ್ತಿದೆ. ಮಂಗಳೂರು, ಕೊಂಚಾಡಿ, ಮೂಡಬಿದ್ರೆ, ಬೆಳ್ತಂಗಡಿ, ಗುರುಪುರ, ಸುಳ್ಯಗಳಲ್ಲಿ ಮೇ ದಿನಾಚರಣೆ ಸಿಐಟಿಯು ನೇತೃತ್ವದಲ್ಲಿ ನಡೆದಿದೆ .

ಕುಂದಾಪುರದಲ್ಲಿ ಹಲವಾರು ವರ್ಷಗಳಿಂದ ಮೇ ದಿನವನ್ನು ಸಂಭ್ರಮದಲ್ಲಿ ಆಚರಿಸಲಾಗುತ್ತಿದ್ದು, ಈ ವರ್ಷವೂ ನಗರದ ಪ್ರಮುಖ ರಸ್ತೆಗಳಲ್ಲಿ ಸಿಐಟಿಯು ನೇತೃತ್ವದಲ್ಲಿ ಸಮವಸ್ತ್ರಧಾರಿಗಳ ಮೆರವಣಿಗೆ ನಡೆದು ಶಾಸ್ತ್ರಿ ವೃತ್ತದ ಬಳಿ ವಿವಿಧ ಕಾರ್ಮಿಕ ಸಂಘಟನೆಗಳ ಸಹಭಾಗಿತ್ವದಿಂದ ನಡೆಯಿತು.

ಗುರುಪುರ ವಲಯ ಸಿಐಟಿಯು ನೇತೃತ್ವದಲ್ಲಿ ಮೇ 1 ರಂದು ಗುರುಪುರ ಕೈಕಂಭದಲ್ಲಿ ಮೇ ದಿನಾಚರಣೆ ಕಾರ್ಯಕ್ರಮ ನಡೆಯಿತು. ಮೇ ದಿನ ಸಮಾರಂಭದ ಮುಖ್ಯ ಅತಿಥಿಯಾಗಿ ಸಿಐಟಿಯು ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ ಮಾತನಾಡಿದರು. ಸಿಐಟಿಯು ಮುಖಂಡರಾದ ಯು.ಬಿ.ಲೋಕಯ್ಯ, ಸದಾಶಿವ ದಾಸ್, ಗಂಗಯ್ಯ ಅಮೀನ್, ನೋಣಯ್ಯ ಗೌಡ, ವಸಂತಿ ಕುಪ್ಪೆಪದವು. ಹಸನಬ್ಬ ಭಾಗವಹಿಸಿದ್ದರು.

ಮೇ 2 ರಂದು ಮೂಡಬಿದರೆಯಲ್ಲಿ ಸಿಐಟಿಯು ವತಿಯಿಂದ ಅಲ್ಲಿನ ಸಮಾಜಮಂದಿರದಲ್ಲಿ ನಡೆದ ಸಭೆಯನ್ನುದ್ದೇಶಿಸಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ವರಲಕ್ಷ್ಮಿ ಮಾತನಾಡಿದರು. ಸಿಐಟಿಯು ದ.ಕ.ಜಿಲ್ಲಾ ಘಟಕದ ಅಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ, ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ, ಕಾರ್ಮಿಕ ಮುಖಂಡರಾದ ರಮಣಿ,ಗಿರಿಜ,ರಾಧಾ,ಸುಂದರ ಶೆಟ್ಟಿ, ಶಂಕರ ವಾಲ್ಪಾಡಿ, ಸೀತರಾಮ ಶೆಟ್ಟಿ ಭಾಗವಹಿಸಿದ್ದರು.

ಮಂಗಳೂರಿನಲ್ಲಿ ಸಿಐಟಿಯು ಮಂಗಳೂರು ನಗರ ಸಮಿತಿಯ ನೇತೃತ್ವದಲ್ಲಿ ಸರಕಾರಿ ನೌಕರರ ಸಭಾ ಭವನದಲ್ಲಿ ನಡೆಯಿತು.

ಸುಳ್ಯದಿಂದ ಕರ್ನಾಟಕ ಕಟ್ಟಡ ಮತ್ತು ಇತರೇ ನಿರ್ಮಾಣ ಕಾರ್ಮಿಕರ ಫೆಡರೇಶನ್ ಆಶ್ರಯದಲ್ಲಿ ಮೊದಲು ಸುಳ್ಯ ಗಾಂಧಿನಗರದಿಂದ ಶಾಸ್ತ್ರವೃತ್ತದ ತನಕ ಕಾರ್ಮಿಕರ ಮೆರವಣಿಗೆ ನಡೆಯಿತು. ಅಮೃತಭವನದಲ್ಲಿ ನಡೆದ ಮೇ ದಿನ ಕಾರ್ಮಿಕ ಸಮಾವೇಶದಲ್ಲಿ ಫೆಡರೇಶನ್ ಜಿಲ್ಲಾಧ್ಯಕ್ಷ ಬಿ.ಎಂ.ಭಟ್ ಮಾತನಾಡಿದರು.

ಮೇ 2 ರಂದು ಬೆಳ್ತಂಗಡಿಯಲ್ಲಿ ನಡೆದ ಮೇ ದಿನ ಭಾರೀ ಭರ್ಜರಿಯಾಗಿತ್ತು. ಸುಮಾರು 900 ಜನ ಭಾಗವಹಿಸಿದ್ದರು.

ಮಂಗಳೂರು ನಗರದ ಇಂಡಸ್ಟ್ರಿಯಲ್ ಎಸ್ಟೇಟ್ ಇರುವ ಕೊಂಚಾಡಿಯಲ್ಲಿ ಮೂರನೆಯ ವರ್ಷದಲ್ಲಿ ಸಂಭ್ರಮದ ಮೇ ದಿನ ಮೇ 2 ರಂದು ನಡೆಸಲಾಯಿತು. ಸಿಐಟಿಯು ದ.ಕ.ಜಿಲ್ಲಾಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ, ಬ್ಯಾಂಕ್ ಎಂಪ್ಲೋಯಿಸ್ ಫೆಡರೇಶನ್ ಆಫ್ ಇಂಡಿಯಾದ ಮುಖಂಡರಾದ ಬಿ.ಎಂ.ಮಾಧವ ಮುಖ್ಯ ಅತಿಥಿಗಳಾಗಿ ಮಾತನಾಡಿದರು. ಕಾರ್ಮಿಕ ಮುಖಂಡರುಗಳಾದ ರವಿಚಂದ್ರ ಕೊಂಚಾಡಿ, ಸಿಪಿಐ(ಎಂ) ಮುಖಂಡರಾದ ಕೃಷ್ಣಪ್ಪ ಕೊಂಚಾಡಿ, ಯುವಜನ ಮುಖಂಡರಾದ ನವೀನ್ ಕೊಂಚಾಡಿ ಮತ್ತಿತರರು ಭಾಗವಹಿಸಿದ್ದರು.

ವಿನಾಯಕ ಸಿಎನ್‌ಸಿ ಕಾರ್ಮಿಕರ 63 ದಿನಗಳ ಅನಿರ್ದಿಷ್ಠ ಧರಣಿ ಹಿಂದಕ್ಕೆ

ಬೆವರು ಸುರಿಸಿ ದುಡಿದ ವೇತನವನ್ನು ಕಳೆದ 8–9 ತಿಂಗಳುಗಳಿಂದ ಕಡಿತ ಮಾಡುತ್ತಿದ್ದ ಆಡಳಿತ ಮಂಡಳಿಯ ಕ್ರಮವನ್ನು ವಿರೋಧಿಸಿ ಕಳೆದ 63 ದಿನಗಳಿಂದ ಜಿಲ್ಲಾಧಿಕಾರಿಗಳ ಕಛೇರಿ ಎದುರು ಪ್ರತಿಭಟನೆ ನಡೆಸುತ್ತಿದ್ದ ವಿನಾಯಕ ಸಿಎನ್‌ಸಿ ಕಾರ್ಮಿಕ ಬೇಡಿಕೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಮೇ 02, 2016ರಂದು ಬೆಂಗಳೂರಿನ ಕಾರ್ಮಿಕ ಇಲಾಖೆಯಲ್ಲಿ ನಡೆದ ಆಡಳಿತ ಮಂಡಳಿ, ಕಾರ್ಮಿಕ ಇಲಾಖೆ ಹಾಗೂ ಕಾರ್ಮಿಕ ಸಂಘಟನೆಯ ಮುಖಂಡರೊಂದಿಗೆ ನಡೆದ ತ್ರೀಪಕ್ಷಿಯ ಸಭೆಯಲ್ಲಿ ಚರ್ಚಿಸಲಾಗಿದೆ.

ಸಹಾಯಕ ಕಾರ್ಮಿಕ ಆಯುಕ್ತರಾದ ಕೆ.ಎಲ್. ರವಿಕುಮಾರ್, ಮಾಲೀಕರುಗಳಾದ ಸಿ.ಎಸ್.ಸುಕುಮಾರನ್, ಬಿ.ಡಿ.ಅತವಾಲೆ ಬಾಲಚಂದ್ರ ರವರುಗಳು ಹಾಗೂ ಕಾರ್ಮಿಕ ಸಂಘಟನೆ ಪರ ಸಿ.ಐ.ಟಿ.ಯು ರಾಜ್ಯ ಕಾರ್ಯದರ್ಶಿ ಮೀನಾಕ್ಷಿಸುಂದರಂ, ಪ್ರತಾಪ್‌ಸಿಂಹ, ಎನ್. ಕೆ.ಸುಬ್ರಮಣ್ಯ, ಕಾರ್ಮಿಕರಾದ ಟಿ.ಜೆ.ಗಿರೀಶ್, ಉಬೇದುಲ್ಲಾ, ವಸಂತಕುಮಾರ್ ರವರು ಹಾಜರಾಗಿ ಸುಮಾರು ಮೂರು ಗಂಟೆಗೂ ದೀರ್ಘ ಕಾಲ ಸಮಸ್ಯೆಗಳ ಬಗೆಹರಿಸಲು ಪ್ರಯತ್ನಿಸಿ ಅಂತಿಮವಾಗಿ ಈ ಕೆಳಗಿನ ಅಂಶಗಳ ಆಧಾರದಲ್ಲಿ ಸಮ್ಮತಿಗೆ ಬರಲಾಗಿದೆ.

ತಕ್ಷಣದ ಕ್ರಮವಾಗಿ ಏಪ್ರಿಲ್ ತಿಂಗಳ ಸಂಬಳದಲ್ಲಿ ಕಡಿತ ಮಾಡಲಾಗಿರುವ ಪೂರ್ತಿ ಸಂಬಳವನ್ನು ದಿ:07–05–2016 ರಂದು ಕಾರ್ಮಿಕರ ಖಾತೆಗಳಿಗೆ ಜಮಾ ಮಾಡುವುದು, ಯಂತ್ರಗಳಿಗೆ ಅಗತ್ಯವಾದ ಆಪರೇಟರ್‌ಗಳ 60 ಜನ ಪಾಳಿಯಲ್ಲಿ ಕೆಲಸ ಮಾಡಿದರೆ ದಿನ 3 ಪಾಳಿಗಳು ಸೇರಿ ಕನೆಕ್ಟಿಂಗ್ ಪ್ಲಾಂಜ್ 4 ಸಿಲೇಂಡರ್ 1200 ಸಂಖ್ಯೆಗಳ ಉತ್ಪಾದನೆ ನೀಡುವುದು, 9–10 ತಿಂಗಳುಗಳಿಂದ ಕಡಿತ ಮಾಡಿರುವ ಸಂಬಳ ಕಾರ್ಮಿಕರಿಗೆ ನೀಡುವುದು, ಕೆಲಸದಿಂದ ಹೊರಹಾಕಲಾಗಿರುವ ಕಾರ್ಮಿಕರುಗಳಿಗೆ ಕೆಲಸಕ್ಕೆ ಅವಕಾಶ ನೀಡುವುದು, ನಾಲ್ಕು ವರ್ಷಗಳ ವೇತನ ಹೆಚ್ಚಳ ನೀಡದೆ ಇರುವ ಬಗ್ಗೆ ಇತರೆ ಅಂಶಗಳ ಬಗ್ಗೆ ದಿನಾಂಕ:18–05–2016 ರ ಸಂಧಾನಾಧಿಕಾರಿಗಳ ಸಮ್ಮುಖದಲ್ಲಿ ಚರ್ಚಿಸಿ ಇತ್ಯರ್ಥಪಡಿಸಲು ತೀರ್ಮಾನಿಸಲಾಗಿದೆ.

ಕಳೆದ 63 ದಿನಗಳಿಂದ ಜಿಲ್ಲಾಧಿಕಾರಿಗಳ ಕಛೇರಿ ಎದುರು ನಡೆಸುತ್ತಿದ್ದ ಹೋರಾಟವನ್ನು ತಾತ್ಕಾಲಿಕವಾಗಿ ಹಿಂಪಡೆದಿದ್ದು ಆಡಳಿತ ಮಂಡಳಿ ಮಾತಿನಂತೆ ನಡೆದುಕೊಳ್ಳದಿದ್ದರೆ ಮತ್ತೆ ಹೋರಾಟವನ್ನು ಮುಂದುವರಿಸುವುದಾಗಿ ಎಚ್ಚರಿಸಿದ್ದಾರೆ.

ಮನೆ ನಿವೇಶನ ಹಂಚಲು ಒತ್ತಾಯಿಸಿ ಅಂಬ್ಲಮೊಗರಿನಲ್ಲಿ ಸಿಐಟಿಯು ಧರಣಿ:

ಉಳ್ಳಾಲ ಪ್ರದೇಶದ ಅಂಬ್ಲಮೊಗರು ಗ್ರಾಮ ಪಂಚಾಯತಿನಲ್ಲಿ ನಿವೇಶನ ರಹಿತರಿಗೆ ನೀಡಲು 3 ಎಕ್ರೆ ಜಮೀನನ್ನು ಗ್ರಾಮ ಪಂಚಾಯತು ಕಾದಿರಿಸಿದ್ದರೂ ಈವರೆಗೂ ಹಂಚಿಕೆ ನಡೆದಿಲ್ಲ. ಮನೆ ಹಾಗೂ ನಿವೇಶನ ರಹಿತರಿಗೆ ಶೀಘ್ರ ನಿವೇಶನ ಹಂಚುವಂತೆ ಸಿಐಟಿಯು ನೇತೃತ್ವದಲ್ಲಿ ಮೇ 2 ರಂದು ಅಂಬ್ಲಮೊಗರು ಗ್ರಾಮ ಪಂಚಾಯತು ಕಚೇರಿ ಮುಂದೆ ಧರಣಿಯನ್ನು ನಡೆಸಲಾಯಿತು.

ಧರಣಿಯನ್ನುದ್ದೇಶಿಸಿ ಸಿಐಟಿಯು ದ.ಕ. ಜಿಲ್ಲಾ ಸಮಿತಿ ಮುಖಂಡರಾದ ಸುನಿಲ್ ಕುಮಾರ್ ಬಜಾಲ್ ಮಾತನಾಡಿದರು. ಉಳ್ಳಾಲ ಸಿಐಟಿಯು ಮುಖಂಡರಾದ ಜಯಂತ ನಾಯ್ಕ್, ಸಿಪಿಐ(ಎಂ) ಉಳ್ಳಾಲ ವಲಯ ಸಮಿತಿ ಕಾರ್ಯದರ್ಶಿ ಕೃಷ್ಣಪ್ಪ ಸಾಲ್ಯಾನ್, ಸ್ಥಳೀಯ ಮುಖಂಡರಾದ ಜಯಂತ ಅಂಬ್ಲಮೊಗರು ಮತ್ತಿತರರು ಭಾಗವಹಿಸಿದ್ದರು.

ಈ ವಾರ ಚರಿತ್ರೆಯಲ್ಲಿ

ಮೇ 4, 1919

ಚೀನಾದ ರಾಷ್ಟ್ರೀಯ ಚಳುವಳಿ ಆರಂಭವಾದ ದಿನ

1919ರ ಮೇ 4ರಂದು ಬೇಜಿಂಗ್ ನಲ್ಲಿ ಆರಂಭವಾದ ವಿದ್ಯಾರ್ಥಿ ಚಳುವಳಿಯಿಂದ ಹೊಮ್ಮಿದ ಸಾಮ್ರಾಜ್ಯಶಾಹಿ–ವಿರೋಧಿ ಸಾಂಸ್ಕೃತಿಕ ಮತ್ತು ರಾಜಕೀಯ ಚಳುವಳಿಯನ್ನು ಮೇ 4ರ ಚಳುವಳಿ ಎನ್ನುತ್ತಾರೆ. ಮೊದಲ ಮಹಾಯುದ್ಧದಲ್ಲಿ ಜರ್ಮನಿಯ ಪರಾಭವದ ನಂತರದ ಶರಣಾಗತಿ ಒಪ್ಪಂದದ ಪ್ರಕಾರ ಜರ್ಮನ್ ವಶದಲ್ಲಿದ್ದ ಚೀನಾದ ಪ್ರದೇಶಗಳನ್ನು ಜಪಾನಿಗೆ ಹಸ್ತಾಂತ ಮಾಡುವುದನ್ನು ವಿದ್ಯಾರ್ಥಿಗಳು ವಿರೋಧಿಸಿ ನಡೆಸಿದ ಚಳುವಳೀ ಇದು. ಈ ಚಳುವಳಿಯಿಂದ ದೇಶದಾದ್ಯಂತ ರಾಷ್ಟ್ರೀಯ ಚಳುವಳಿ ಆರಂಭವಾಯಿತು. ಈ ಚಳುವಳಿ ಮುಂದಿನ ಒಂದು ಶತಮಾನದ ಕಾಲದ ಚೀನೀ ರ್‍ಾಷ್ಟ್ರೀಯತೆಯನ್ನು ರೂಪಿಸಿತು. ಇದರ ಭಾಗವಾಗಿದ್ದ ಕೆಲವು ಪ್ರಮುಖ ಬುದ್ಧಿಜೀವಿಗಳೇ ಮುಂದೆ 1921ರಲ್ಲಿ ಚೀನಾದ ಕಮ್ಯುನಿಸ್ಟ್ ಪಕ್ಷವನ್ನು ಸ್ಥಾಪಿಸಿದರು.

ಜಿಶಾ ಬರ್ಬರ ಅತ್ಯಾಚಾರ–ಕೊಲೆ ಖಂಡಿಸಿ ಪ್ರತಿಭಟನೆ

ಕೇರಳ ರಾಜ್ಯದ ಎರ್ನಾಕುಲಂ ಜಿಲ್ಲೆಯ ಪೆರುಂಬಾವೂರ್ ನಿವಾಸಿ, ಕಾನೂನು ವಿದ್ಯಾರ್ಥಿನಿ 29 ವರ್ಷದ ಜಿಶಾಳ ಮನೆಯಲ್ಲೇ ಅವಳ ಮೇಲೆ ಅತ್ಯಂತ ಬರ್ಬರ ಅತ್ಯಾಚಾರ ನಡೆಸಿ ಕೊಲೆಮಾಡಿ 6 ದಿನಗಳಾಗಿದ್ದರೂ ಈವರೆಗೆ ಆರೋಪಿಗಳನ್ನು ಬಂಧಿಸಲಾಗದ ಕಾಂಗ್ರೆಸ್ ನೇತೃತ್ವದ ಯು,ಡಿ. ಎಫ್ ಸರ್ಕಾರದ ವೈಫಲ್ಯವನ್ನು ಖಂಡಿಸಿ ಮೇ. 04ರಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಜೆ.ಎಂ.ಎಸ್.) ಹಾಗೂ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್.ಎಫ್.ಐ.) ಜಂಟಿ–ಯಾಗಿ ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಿವೆ.

ಕರುಳ ಭಾಗಗಳು, ಗರ್ಭಕೋಶದ ಭಾಗಗಳು ಹೊರಬರುವಂತೆ ನಡೆದಿರುವ ಅತ್ಯಾಚಾರ ಅವಳ ಮೇಲೆನಡೆದಿರುವ ಕ್ರೌರ್ಯವನ್ನುಸಾರುತ್ತವೆ. ಮಹಿಳೆಯರ ಮೇಲೆ ನಡೆಯುತ್ತಿರುವ ಅತ್ಯಾಚಾರಗಳನ್ನು ತಡೆಯಲೂ ಆಗದ, ಅಪರಾಧಿಗಳನ್ನು ಶಿಕ್ಷಿಸಲೂ ಆಗದ ಅಸಮರ್ಥ ರಾಜ್ಯ ಸರ್ಕಾರವೇ ಇದರ ನೇರ ಹೊಣೆ. ದೌರ್ಜನ್ಯಗಳನ್ನು ಹಗುರವಾಗಿ ನೋಡುವುದು, ಮೇಲ್ಪದರದ ಕ್ರಮಗಳನ್ನು ತೋರಿ–ಕೆಗಾಗಿ ತೆಗೆದುಕೊಳ್ಳುವುದು, ನಿಗದಿತ ಅವಧಿಯಲ್ಲಿ ತನಿಖೆ ಮುಗಿಸಿ ಅಪರಾಧಿಗಳನ್ನು ಶಿಕ್ಷಿಸದಿರುವುದು, ಮಹಿಳೆಯರ ಕುರಿತ ಹುಸಿ ರಾಜಕೀಯ ಬದ್ಧತೆಯನ್ನು ತೋರಿಸುತ್ತದೆ.

ಜೆಎಂಎಸ್ ರಾಜ್ಯ ಉಪಾಧ್ಯಕ್ಷರಾದ ಗೌರಮ್ಮ ರವರು ಮಾತನಾಡಿ "ದೇಶದಲ್ಲಿ ಮಹಿಳೆಯರಿಗೆ ಮತ್ತು ವಿದ್ಯಾರ್ಥಿನಿಯರಿಗೆ ರಕ್ಷಣೆ ಇಲ್ಲದಂತಾಗಿದೆ. ದಿನೇ ದಿನೇ ಅತ್ಯಾಚಾರ ಪ್ರಕರಣಗಳು ಹೆಚ್ಚಾಗುತ್ತಿದ್ದು ಅದನ್ನು ತಡೆಗಟ್ಟುವಲ್ಲಿ, ಮಹಿಳೆಯರಿಗೆ ರಕ್ಷಣೆ ನೀಡುವಲ್ಲಿ ಸರಕಾರಗಳು ವಿಫಲವಾಗಿದೆ. ವರ್ಮಾ ಸಮಿತಿ ಆಯೋಗದ ಶಿಫಾರಸ್ಸುಗಳನ್ನು ಜಾರಿಮಾಡಬೇಕು" ಎಂದು ಆಗ್ರಹಿಸಿದರು.

ಎಸ್.ಎಫ್.ಐ.ರಾಜ್ಯ ಕಾರ್ಯದರ್ಶಿ ಗುರುರಾಜ್ ದೇಸಾಯಿ ಮಾತನಾಡಿ "ಕಾನೂನು ಅಧ್ಯಯನದ ಮೂಲಕ ಶೋಷಿತ ಜನತೆಗೆ ನ್ಯಾಯ ಕೊಡಿಸುವ ಕನಸು ಹೊತ್ತ ಜಿಶಾಳನ್ನು ಅತ್ಯಾಚಾರಗೈದಿರುವುದು ಆತಂಕಕಾರಿಯಾಗಿದೆ. ಶಿಕ್ಷಣದಲ್ಲಿ ಪ್ರಥಮ ಸ್ಥಾನದಲ್ಲಿರುವ ಕೇರಳ ರಾಜ್ಯದಲ್ಲಿ ಇಂತಹ ಘಟನೆ ಗಟಿಸಿರುವುದಕ್ಕೆ ರಾಜ್ಯ ಸರ್ಕಾರದ ಭದ್ರತಾ ವ್ಯವಸ್ಥೆಯ ವೈಫಲ್ಯ ತೋರಿಸುತ್ತದೆ." ಎಂದು ತಿಳಸಿದರು.

ಈ ಘಟನೆಯನ್ನು ರಾಷ್ಟ್ರೀಯ ಒಟ್ಟು ವಿದ್ಯಮಾನಗಳಿಂದ ಪ್ರತ್ಯೇಕಿಸಿ ನೋಡಲಾಗುವುದಿಲ್ಲ. ಮಹಿಳೆಯರಿಗೆ ರಕ್ಷಣೆ ಇಲ್ಲದಿರುವುದು ಕೇಂದ್ರ ರಾಜ್ಯ ಸರ್ಕಾರಗಳ ನಿರ್ಲಕ್ಷ್ಯಕ್ಕೆ ಹಿಡಿದ ಕನ್ನಡಿಯಾಗಿದೆ. "ಹೆಣ್ಣು ಮಕ್ಕಳನ್ನು ಉಳಿಸಿ ಹೆಣ್ಣು ಮಕ್ಕಳನ್ನು ಓದಿಸಿ" ಎಂದು ಬರೇ ಭ್ಹಾಷಣ ಮಾಡುವ ಪ್ರಧಾನ ಮಂತ್ರಿಗಳು ರಾಷ್ಟ್ರವ್ಯಾಪಿ ಹೆಚ್ಚುತ್ತಿರುವ ಈ ದೌರ್ಜನ್ಯ ಅತ್ಯಾಚಾರ ಹೆಚ್ಚುತ್ತಿದೆ. ಮತಗಳಾಗಿ ಮಾತ್ರ ನೋಡುವ ಕಣ್ಣೋಟವನ್ನು ಬದಲಿಸಿಕೊಳ್ಳಬೇಕೆಂದು ಸಂಘಟನೆ ಎಚ್ಚರಿಸಿದೆ.



ಕಾಯ್ದೆ ಬಾಹಿರ ಆಸ್ತಿ ತೆರಿಗೆ ಏರಿಕೆ
ಕಾಂಗ್ರೆಸ್–ಬಿಜೆಪಿ ಹಗ್ಗಜಗ್ಗಾಟ ಜೆಡಿ(ಎಸ್) ಕಳ್ಳಾಟ

ಕೆ.ಎನ್. ಉಮೇಶ್

ನಾಗರಿಕರ ಮೇಲೆ ಹೊರೆ ಹೊರಿಸಿರುವ ಬಿಬಿಎಂಪಿ ಅಸ್ತಿ ತೆರಿಗೆ ಹೆಚ್ಚಳ, ವಲಯ ವರ್ಗೀಕರಣ ಪರಿಷ್ಕರಣೆ ಎಂಬ ಮಹಾ ಮೋಸವನ್ನು, ಕಾಂಗ್ರೆಸ್–ಬಿಜೆಪಿ–ಜೆಡಿ(ಎಸ್)ನ ವಂಚಕ ನೀತಿಗಳ ಫಲ ಮತ್ತು ಬೆಂಗಳೂರಿನ ಜನವಿರೋದಿ ಅಧಿಕಾರದ ಭ್ರಷ್ಟಾಚಾರವನ್ನು ಮತ್ತು ತೆರಿಗೆ ಹೆಚ್ಚಳವನ್ನು ವಿರೋಧಿಸಿ ದಿ.02.05.2016 ಬಿಬಿಎಂಪಿ ಕಛೇರಿ ಮುಂದೆ CPI(M) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಯಿಂದ ಪ್ರತಿಭಟನೆಯನ್ನು ನಡೆಸಿ ಅಧಿಕಾರಿಗಳ ಮೂಲಕ ಮುಖ್ಯ ಮಂತ್ರಿಯವರಿಗೆ ಮನವಿ ನೀಡಲಾಯಿತು ಬೆಂ.ಉ. ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಮತ್ತು ಬೆಂ. ದ. ಕಾರ್ಯದರ್ಶಿ ಕೆ.ಎನ್ ಉಮೇಶ್ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.



ದುರಾಡಳಿತ ನೀಡಿದ ಬಿಜೆಪಿ ಬಿಬಿಎಂಪಿ ಅಧಿಕಾರದಿಂದ ತೊಲಗಿತೆಂಬ ಸಮಾದಾನವನ್ನು ನಾಗರಿಕರು ಪಡುವಾಗಲೇ, ಅಧಿಕಾರಕ್ಕೇರಿದ ತಿಂಗಳಲ್ಲೇ ಕಾಂಗ್ರೆಸ್–ಜೆಡಿ(ಎಸ್) ಆಡಳಿತವು, ರಾಜ್ಯ ಸರ್ಕಾರ ಸೆಪ್ಟೆಂಬರ್ 2015 ರಲ್ಲೆ ಏರಿಕೆ ಮಾಡಿದ್ದ ಆಸ್ತಿ ತೆರಿಗೆಗೆ ಅಸ್ತು ಎಂದಿದ್ದವು. ಆ ವೇಳೆಗೆ 'ಆಸ್ತಿ ತೆರಿಗೆ ಹೆಚ್ಚಳ ಓಕೆ, ಇಷ್ಟೊಂದು ಏಕೆ' ಎಂದಿದ್ದ ಬಿಜೆಪಿ ಇದೀಗ ತೆರಿಗೆ ಹೆಚ್ಚಳ ಕುರಿತು ಕೌನ್ಸಿಲ್ ಸಭೆಯಲ್ಲಿ ಹೋರಾಟದ ನೆಪದಲ್ಲಿ ಮೇಯರ್‌ಗೆ ದಿಗ್ಬಂಧನ, ಅಹೋರಾತ್ರಿ ಧರಣಿಯನ್ನು ನಡೆಸಿವೆ. ನೂತನ ಅಧ್ಯಕ್ಷರಾದ ಯಡಿಯೂರಪ್ಪನವರ ನೇತೃತ್ವದಲ್ಲಿ ಬಿಬಿಎಂಪಿ ಗೆ ಮುತ್ತಿಗೆ ಹಾಕಿದೆ. ಈ ನಡುವೆ ಬೆಂಗಳೂರು ಅಭಿವೃದ್ಧಿ ಸಚಿವರಾದ ಕೆ.ಜೆ. ಜಾರ್ಜ್ ವಲಯ ವಗೀಕರಣ ಪರಿಷ್ಕರಣೆ ಆಧಾರಿತ ತೆರಿಗೆ ಹೆಚ್ಚಳ ಹಿಂಪಡೆಯಲು, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ರಚಿಸಿದ್ದ ಮಾಜಿ ಮೇಯರ್‌ಗಳನ್ನು ಒಳಗೊಂಡ ಸಮಿತಿ ತನ್ನ ಶಿಫಾರಸ್ಸು ಮಾಡಿದೆ. ಅದರಂತೆ ವಲಯ ವರ್ಗೀಕರಣ ಪರಿಷ್ಕರಣೆ ಹಿಂಪಡೆಯಲಾಗುವುದು ಎಂದು ಪ್ರಕಟಿಸಿದ್ದರು.

ಕೌನ್ಸಿಲ್ ಸಭೆಯಲ್ಲಿ ಮೇಯರ್ ತೆರಿಗೆ ಹೆಚ್ಚಳವನ್ನು ಹಿಂದಿನ ವಲಯ ವರ್ಗೀಕರಣದ ಆಧಾರದ ಮೇಲೆ ಹೆಚ್ಚಳವನ್ನು ವಸತಿಗೆ ಶೇ. 20 ಮತ್ತು ವಸತಿಯೇತರ ಆಸ್ತಿಗಳಿಗೆ ಶೇ. 25 ಸೀಮಿತಗೊಳಿಸಲಾಗುವುದು ಎಂದಿದ್ದಾರೆ. ಅದನ್ನು ಜೆಡಿ(ಎಸ್) ಸ್ವಾಗತಿಸಿದೆ. ಈ ತೀರ್ಮಾನ ಬಿಜೆಪಿ ವಕ್ತಾರರಾದ ಮಾಜಿ ಸಚಿವ ಸುರೇಶ್ ಕುಮಾರ್ ಒತ್ತಾಯ ಹಾಗೂ ಸಲಹೆಯಂತೆ ಮಾಡಲಾಗಿದೆ ಎಂದು ಮೇಯರ್ ಪ್ರಕಟಿಸಿದ್ದಾರೆ. ವಲಯ ವರ್ಗೀಕರಣ ಮುಂದುವರೆಯಲಿದೆ. ಆದರೆ ತೆರಿಗೆ ಹೆಚ್ಚಳ ಕೇವಲ ಶೇ. 20 ಹಾಗು ಶೇ. 25 ಕ್ಕೆ ಮಾತ್ರ ಸೀಮಿತಗೊಳಿಸಲಾಗಿದೆ. ಹಿಂದಿನ ಪ್ರಕಟಣೆಯಂತೆ ವಸತಿ ಕಟ್ಟಡಗಳಿಗೆ ಶೇ. 45 ಮತ್ತು ವಸತಿಯೇತರ ಕಟ್ಟಡಗಳಿಗೆ ಶೇ. 145 ಹೆಚ್ಚಳವಾಗುತ್ತಿತ್ತು. (ವಿವರಗಳಿಗೆ ಕೋಷ್ಟಕ 1 ನೋಡಿ) ಅದನ್ನು ಶೇ.20 ಮತ್ತು 25ಕ್ಕೆ ಸೀಮಿತಗೊಳಿಸಿದ್ದೇವೆ. ಆ ಮೂಲಕ ನಾಗರಿಕರ ನೋವಿಗೆ ಸ್ಪಂದಿಸಿದ್ದೇವೆ ಎಂದಿದ್ದಾರೆ ಮೇಯರ್. ಈ ಅರಿವು ವರ್ಷದ ಹಿಂದೆ ಮೇಯರ್‌ಗೆ, ಅಭಿವೃದ್ಧಿ ಸಚಿವರಿಗೆ, ಬಿಜೆಪಿ, ಕಾಂಗ್ರೆಸ್‌ಗೆ ಏಕೆ ಇರಲಿಲ್ಲ, ಎಂಬುದು ನಾಗರಿಕರ ಪ್ರಶ್ನೆಯಾಗಿದೆ. ಕಳೆದ ವರ್ಷ ಪಾವತಿಸಿದ್ದ ತೆ–ರಿಗೆಗಿಂತ ವಸತಿಗೆ ಶೇ. 20 ಹಾಗೂ ವಸತಿಯೇತರ ಕಟ್ಟಡಗಳಿಗೆ ಶೇ. 25 ಹೆಚ್ಚು ಆಸ್ತಿ ತೆರಿಗೆ ಪಾವತಿಸಿದರೆ ಸಾಕು ಎಂಬ ಪ್ರಕಟಣೆಯನ್ನು ಬಿಬಿಎಂಪಿ ನೀಡಿದೆ.

ಆದರೆ 13ನೇ ಹಣಕಾಸು ಆಯೋಗವು ನಗರಾಡಳಿತದ ಸ್ಥಳೀಯ ಸಂಸ್ಥೆಗಳು ಸ್ವಾವಲಂಬಿಗಳಾಗಲು ಅಗತ್ಯವಿರುವ ವೈಜ್ಞಾನಿಕ ತೆರಿಗೆ ಪದ್ದತಿ ರೂಡಿಸಿಕೊಳ್ಳಲು, ಅಗತ್ಯವಿರುವ ರಾಜ್ಯ ತೆರಿಗೆ ಮಂಡಳಿ ರಚಿಸಬೇಕೆಂದು ಶಿಫಾರಸ್ಸು ಮಾಡಿದೆ. ಅದರಂತೆ 2011ರಲ್ಲೇ ಕರ್ನಾಟಕ ಮುನ್ಸಿಪಲ್ ಕೌನ್ಸಿಲ್ ಕಾಯ್ದೆಗೆ ತಿದ್ದುಪಡಿ ಹೂಡಿ ಕಲಂ 102ಎ ಅನ್ನು ಸೇರ್ಪಡೆ ಮಾಡಲಾಗಿದೆ.

ಕೆಸಿಎಂ ಕಾಯ್ದೆ 120ಎ ಪ್ರಕಾರ 'ಕರ್ನಾಟಕ ತೆರಿಗೆ ಮಂಡಳಿ ರಚಿಸಿ, ಅದರ ಶಿಫಾರಸ್ಸಿನಂತೆ ಬಿಬಿಎಂಪಿಯನ್ನು ಸೇರಿ ರಾಜ್ಯದಲ್ಲಿನ ಇತರೆ ನಗರಾಡಳಿತದ ಸ್ಥಳೀಯ ಸಂಸ್ಥೆಗಳ ಆಸ್ತಿ ತೆರಿಗೆ ಮುಂತಾದ ತೆರಿಗೆಗಳನ್ನು ಪರಿಷ್ಕರಿಸಬೇಕಿದೆ. ಆದರೆ ತಿದ್ದುಪಡಿ ಮಾಡಿ 5 ವರ್ಷಗಳು ಕಳೆದಿವೆ. ಹಿಂದೆ ಇದ್ದ ಬಿಜೆಪಿ ಸರ್ಕಾರವಾಗಲಿ, ಹಾಲಿ ಕಾಂಗ್ರೆಸ್ ಸರ್ಕಾರವಾಗಲಿ ಮಂಡಳಿ ರಚಿಸಲು ಹಾಗು ಅದರ ನಿರ್ವಹಣೆಗೆ ಅಗತ್ಯವಿರುವ ನಿಯಮಾವಳಿಗಳನ್ನು ರೂಪಿಸಿಲ್ಲ. ಶಾಸನ ಸಭೆಯಲ್ಲಿ ಸ್ಥಾನ ಪಡೆದಿರುವ ಕಾಂಗ್ರೆಸ್, ಬಿಜೆಪಿ, ಜೆಡಿ(ಎಸ್) ಪಕ್ಷಗಳ ಯಾವ ಶಾಸಕರೂ ಈ ಕುರಿತು ಚಕಾರ ಎತ್ತಲಿಲ್ಲ. ಬಿಬಿಎಂಪಿ ವ್ಯಾಪ್ತಿಯ 27 ಶಾಸಕರಲ್ಲಿ ಅಂದಿನಿಂದ ಇಂದಿನವರೆಗೆ ಹೆಚ್ಚಿನ ಶಾಸಕರನ್ನು ಹೊಂದಿರುವ ಬಿಜೆಪಿಯಂತೂ ಈ ಬಗ್ಗೆ ಚಕಾರ ಎತ್ತಿರುವ ವರದಿಗಳೂ ಬಂದಿಲ್ಲ. ರಾಜ್ಯದಲ್ಲಿ ಅತಿ ಹೆಚ್ಚು ಬಾರಿ ಬಜೆಟ್ ಮಂಡನೆಯ ರೆಕಾರ್ಡ್ ಮಾಡಿದ ಹೆಗ್ಗಳಿಕೆಗೆ ಪಾತ್ರರಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೂ ಇದು ಏಕೆ ಹೊಳೆಯಲಿಲ್ಲ.

ಒಟ್ಟಾರೆ ಪ್ರಸಕ್ತ ಬಿಬಿಎಂಪಿ ಆಸ್ತಿ ತೆರಿಗೆ ಹೆಚ್ಚಳ ಕಾಯ್ದೆ ಬಾಹಿರವಾಗಿದೆ. ಈ ಹಿನ್ನೆಲೆಯಲ್ಲಿ ಸಿಪಿಐ(ಎಂ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ಸದರಿ ಆಸ್ತಿ ತೆರಿಗೆ ಹೆಚ್ಚಳವು ಕಾಯ್ದೆ ಬಾಹಿರವಾಗಿದೆ. ಆದ ಕಾರಣ ಕೂಡಲೇ ಆಸ್ತಿ ತೆರಿಗೆ ಹೆಚ್ಚಳ ಹಿಂಪಡೆದು, ತೆರಿಗೆ ಮಂಡಳಿ ರಚಿಸಿ, ಅದರ ಶಿಫಾರಸ್ಸಿನಂತೆ ತೆರಿಗೆ ಪರಿಷ್ಕರಣೆಗೆ ಕ್ರಮವಹಿಸಿ ಎಂದು ಒತ್ತಾಯಿಸಿ ಪ್ರತಿಭಟನೆ ನಡೆಸಿದೆ. ಮಹಾಪೌರರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದೆ.

ಕೇಂದ್ರ – ರಾಜ್ಯ ಸರ್ಕಾರಗಳಿಂದ ಅಗತ್ಯ ಅನುದಾನಕ್ಕೆ ಒತ್ತಾಯಿಸದ, ಆಸ್ತಿ ತೇರಿಗೆ ಸೇರಿದಂತೆ ಎಲ್ಲಾ ತೆರಿಗೆಗಳನ್ನು ಮುತುವರ್ಜಿಯಿಂದ ಸಂಗ್ರಹಿಸದ ಸಂಪನ್ಮೂಲ ಕ್ರೋಡಿಕರಣಕ್ಕೆ ಇರುವ ದಾರಿಗಳನ್ನು ಶೋಧಿಸದ, ಸದ್ಬಳಕೆಗೆ ಗಮನ ಹರಿಸದ (ವಿವರಗಳಿಗೆ ಕೋಷ್ಟಕ 2, 3 ನೋಡಿ) ಕಾಂಗ್ರೆಸ್–ಬಿಜೆಪಿ ನಾಗರಿಕರಿರ ಮುಂದೆ ಹಗ್ಗಜಗ್ಗಾಟ ನಡೆಸಿರುವಾಗ ಜೆಡಿ(ಎಸ್) ಕಳ್ಳಾಟವಾಡುತ್ತಿದೆ. ಹಳಸುತ್ತಿರುವ ಕಾಂಗ್ರೆಸ್–ಜೆಡಿ(ಎಸ್) ದೋಸ್ತಿ ದುರ್ಲಾಭ ಪಡೆಯಲು ಬಿಜೆಪಿ ಹೊಂಚುಹಾಕಿ ಪ್ರತಿಭಟನೆಯ ನಾಟಕ ನಡೆಸುತ್ತಿದೆ.

ಕೋಷ್ಟಕ 1

ಆಸ್ತಿ ತೆರಿಗೆಯಲ್ಲಿ ಹೆಚ್ಚಾದ ಪ್ರಮಾಣ (ಶೇಕಡಾವಾರು)			
2008 –09 ರಲ್ಲಿದ್ದ ವಲಯ	2016 –17 ರಲ್ಲಿ ಪರಿಷ್ಕೃತ ವಲಯ	ವಸತಿ	ವಸತಿಯೇತರ
ಎಫ್	ಇ	30.64	128.80
ಇ	ಡಿ	45.15	89.00
ಡಿ	ಸಿ	22.47	41.75
ಸಿ	ಬಿ	20.96	46.06
ಬಿ	ಎ	36.08	67.53

ಕೋಷ್ಟಕ 2

ಬಿಬಿಎಂಪಿಯ ದುರಾಡಳಿತಕ್ಕೆ ಕಳೆದ 5–6 ವರ್ಷಗಳ ಬಜೆಟ್ ಕೈಗನ್ನಡಿಯಾಗಿದೆ. (ಕೋಟಿ ರೂಗಳಲ್ಲಿ)				
ವರ್ಷ	ಆಯ		ವ್ಯಯ	
	ಬಜೆಟ್	ವಾಸ್ತವಿಕ (ಆರ್.ಇ)	ಬಜೆಟ್	ವಾಸ್ತವಿಕ (ಆರ್.ಇ)
2010–11	8447	3320	8861	3626
2011–12	9316	4003	9399	3840
2012–13	9730	3830	9920	4358
2013–14	8445	3093	8498	3343
2014–15	5978	2897	6026	2927
2015–16	6730	4542	6730	4554

ಆಸ್ತಿ ತೆರಿಗೆ ಅಂದಾಜು ಸಂಗ್ರಹ ವಾಸ್ತವಿಕ (ಕೋಟಿ ರೂಗಳಲ್ಲಿ)		
ವರ್ಷ	ಬಜೆಟ್	ವಾಸ್ತವಿಕ
2009–10	1100	657
2010–11	1650	823
2011–12	1500	793
2012–13	2000	1085
2013–14	3200	727
2014–15	2135	1032
2015–16	1900	1350
2016–17	2400	----

ಕೋಷ್ಟಕ 3

ಸರ್ಕಾರದ ಮೇಲಿನ ಬಿ.ಬಿ.ಎಂ.ಪಿ ಅವಲಂಬನೆ ಮತ್ತು ಬಿ.ಬಿ.ಎಂ.ಪಿ ಗೆ ಬಂದ ಅನುದಾನ (ಕೋಟಿ ರೂಗಳಲ್ಲಿ)		
ವರ್ಷ	ಬಜೆಟ್ ಪ್ರಸ್ತಾಪ	ಬಂದ ಅನುದಾನ
2011–12	2271	1295
2012–13	1799	1177
2013–14	1733	902
2014–15	2680	1561
2015–16	2891	1500
2016–17	4222	----

ಬಿ.ಬಿ.ಎಂ.ಪಿ ಬಜೆಟ್ ಗುರಿ ತಲುಪಿದ ವಿವರ (ಕೋಟಿ ರೂಗಳಲ್ಲಿ)		
ವರ್ಷ	ಬಜೆಟ್	ವಾಸ್ತವಿಕ
2010–11	8447	3320
2011–12	9401	4003
2012–13	9941	3830
2013–14	8521	3093
2014–15	6026	4205
2015–16	5394	4542
2016–17	9364	---

ಪ್ರಗತಿಪರ ಕಲಾವಿದ ಆರ್. ಚೊಕ್ಕಲಿಂಗಂ ಇನ್ನಿಲ್ಲ



ಸಮುದಾಯ ಕೆ.ಜಿ.ಎಫ್ ಘಟಕದ ಸಂಸ್ಥಾಪಕರಲ್ಲಿ ಒಬ್ಬರಾಗಿದ್ದ ಹಾಗೂ ಸಮುದಾಯ ರಾಜ್ಯ ಸಮಿತಿಯ ಸದಸ್ಯರಾಗಿ ಧೀರ್ಘಕಾಲ ಸೇವೆಸಲ್ಲಿಸಿದ್ದ ಹಿರಿಯ ರಂಗಕಲಾವಿದರಾದ ಆರ್. ಚೊಕ್ಕಲಿಂಗಂರವರು (66ವರ್ಷ) ಕೆಲದಿನಗಳ ಅನಾರೋಗ್ಯದಿಂದಾಗಿ ದಿನಾಂಕ ಮೇ 3 ರಂದು ಸಂಜೆ 5.30ಕ್ಕೆ ನಿಧನರಾಗಿದ್ದಾರೆ.

1971ರಲ್ಲಿ ತಮಿಳುನಾಡಿನ ತಂಜಾವೂರಿನಿಂದ ಬಂದು ಬಿಇಎಂಎಲ್ ನಲ್ಲಿ ಉದ್ಯೋಗಿಯಾಗಿದ್ದ ಇವರು ಹಲವಾರು ಕನ್ನಡ ರಂಗನಾಟಕಗಳು, ಬೀದಿನಾಟಕಗಳಲ್ಲಿ ನಟಿಸಿರುವುದು ಮಾತ್ರವಲ್ಲದೇ, ಹಲವಾರು ನಾಟಕಗಳಿಗೆ ಸಂಗೀತ ನಿರ್ದೇಶನ ಮತ್ತು ಬೆಳಕು ವಿನ್ಯಾಸ ಮಾಡಿರುತ್ತಾರೆ. ಸ್ವತ: ಕವಿಗಳೂ ಆಗಿದ್ದ ಶ್ರೀ ಚೊಕ್ಕಲಿಂಗಂ ರವರು ತಣ್ಣೀರ್ ತಣ್ಣೀರ್, ಸೀರುಂ ಪುಯಲಿನ್ ತಾಲಾಟ್ಟು, ವೈಗರೈ ವೆಳ್ಳೈಯಿಲೆ, ಮತ್ತಿತರ ಹಲವು ರಂಗ/ಬೀದಿ ತಮಿಳು ನಾಟಕಗಳನ್ನು ನಿರ್ದೇಶಿಸಿ ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಪ್ರಶಸ್ತಿಗಳನ್ನು ಪಡೆದಿರುತ್ತಾರೆ.

1981 ರಲ್ಲಿ 17 ದಿನಗಳ ಕಾಲ ಅವಿಭಜಿತ ಕೋಲಾರ ಜಿಲ್ಲೆಯಾದ್ಯಂತ ನಡೆದ "ರೈತನತ್ತ ಸಮುದಾಯದ ಜಾತಾ"ದ ಸಂದರ್ಭದಲ್ಲಿ ಪ್ರಮುಖ ಪಾತ್ರವನ್ನು ವಹಿಸಿರುತ್ತಾರೆ. ಕೆಜಿಎಫ್ ಸಮುದಾಯ ಸಂಘಟನೆಗೆ ಕಳೆದ ಮೂರು ವರೆ ದಶಕಗಳಿಂದ ನಿರಂತರವಾಗಿ ಮಾರ್ಗದರ್ಶನ ನೀಡುತ್ತಿದ್ದರು. ಸಮುದಾಯದ ರಾಜ್ಯ ಸಮಿತಿ ಸದಸ್ಯರಾಗಿದ್ದ ಸಂದರ್ಭದಲ್ಲಿ ರಾಜ್ಯ ಸಂಘಟನೆಗೂ ಸೂಕ್ತ ಸಲಹೆಗಳು ಅವರಿಂದ ಸಿಗುತ್ತಿತ್ತು. ಇದಲ್ಲದೇ ಸ್ಥಳೀಯ ತಮಿಳು ಮಂಡ್ರಮ್, ಕನ್ನಡ ಮಿತ್ರರು ಸಂಸ್ಥೆಯ ಆಜೀವ ಸದಸ್ಯರಾಗಿಯೂ, ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರಾಗಿಯೂ ಸೇವೆ ಸಲ್ಲಿಸಿರುತ್ತಾರೆ.

ಇವರ ಅಗಲಿಕೆಯೂ ಕೋಲಾರ ಜಿಲ್ಲೆಯ ರಂಗಚಳವಳಿಗೆ ತುಂಬಲಾರದ ನಷ್ಟವಾಗಿದೆ. ಸಮುದಾಯ–35 ಜನಸಂಸ್ಕೃತಿ ಉತ್ಸವದ ಈ ಸಂದರ್ಭದಲ್ಲಿ ಸಮುದಾಯ ಘಟಕದ ಸಂಸ್ಥಾಪಕರಲ್ಲಿ ಒಬ್ಬರಾಗಿದ್ದ ಶ್ರೀ ಚೊಕ್ಕಲಿಂಗಂ ರವರ ಅಗಲಿಕೆ ಖೇದಕರವಾದುದು. ಸಮುದಾಯದ ಕಾರ್ಯಕಾರಿ ಸಮಿತಿ ಮತ್ತು ಕೆ.ಜಿ.ಎಫ್. ಸಮುದಾಯ–35 ರ ಉತ್ಸವ ಸಮಿತಿಗಳು ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸಿವೆ.

ಕಾರ್ಪೋರೇಟ್, ಪುರೋಹಿತಶಾಹಿ-ಪಾಳೆಯಗಾರೀ ಶಕ್ತಿಗಳ ವಿರುದ್ಧ ಐಕ್ಯ ಹೋರಾಟದ ಅಗತ್ಯ

ಜಿ.ಎನ್. ನಾಗರಾಜ್

> (ಅಂಬೇಡ್ಕರ್ ಮತ್ತು ಎಡಪಂಥ ಭಾಗ 5)
> **ಹಿಂದೆ ಆದ ರೀತಿಯಲ್ಲಿ ಚಳುವಳಿ ವಿಭಜಿತವಾದ ತಪ್ಪು ಮರುಕಳಿಸದಂತೆ ದಲಿತ, ಕಮ್ಯೂನಿಸ್ಟ್, ಸಮಾಜವಾದಿ ಮೊದಲಾದ ಎಡ ಪ್ರಗತಿಪರ ಶಕ್ತಿಗಳು ಒಗ್ಗೂಡಿ ಹೋರಾಡಬೇಕಾದ ತುರ್ತು ಹಿಂದೆಂದಿಗಿಂತ ಹೆಚ್ಚಾಗಿದೆ. ಹಾಗೆಂದು ತಂತಮ್ಮ ಸಿದ್ಧಾಂತಗಳನ್ನು ಕೈಬಿಡಬೇಕೆಂಬ ಒತ್ತಾಯವೇನಿಲ್ಲ. ಎಲ್ಲರ ವಿಚಾರಗಳಲ್ಲಿರುವ ಸಮಾನ ಅಂಶಗಳ ಆಧಾರದ ಮೇಲೆ ಒಂದು ಐಕ್ಯ ಚಳುವಳಿಯನ್ನು ಕೈಗೊಳ್ಳುವ ಅವಕಾಶವನ್ನು ಈ ಸಿದ್ಧಾಂತಗಳು ಹೇರಳವಾಗಿ ಒದಗಿಸುತ್ತವೆ. ಆದರೆ ಕಮ್ಯೂನಿಸ್ಟರು ಆರ್ಥಿಕ ಹೋರಾಟಗಳಿಗೆ ನೀಡಿದ್ದ ಆದ್ಯತೆಯನ್ನು ಬೂದು ಗಾಜಿನಲ್ಲಿ ನೋಡುತ್ತಾ ಬೃಹದಾಕಾರಗೊಳಿಸಿ ಈ ಬಗ್ಗೆ ಸಿಪಿಐ(ಎಂ) ಪಕ್ಷ ಮಾಡಿಕೊಂಡಿರುವ ವಿಮರ್ಶೆಯನ್ನೂ ಮತ್ತು ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆಯ ವಿರುದ್ಧ ಕೈಗೊಳ್ಳುತ್ತಿರುವ ಹೋರಾಟಗಳನ್ನೂ, ಉಳಿದೆಲ್ಲ ಅಂಶಗಳಲ್ಲಿ ಇರುವ ಸಮಾನ ವಿಚಾರವನ್ನು ಮರೆಮಾಚಲಾಗುತ್ತಿದೆ. ಏಕೆಂದರೆ ಜಾತಿ ವ್ಯವಸ್ಥೆಯ ಬಗೆಗಿನ ವಿಶ್ಲೇಷಣೆಯಲ್ಲಿ ಅತ್ಯಂತ ಹೆಚ್ಚು ಶ್ರಮಿಸಿದವರು ಅಂಬೇಡ್ಕರ್ ರವರು ಮತ್ತು ಕಮ್ಯೂನಿಸ್ಟರೇ ಮತ್ತು ಅತ್ಯಂತ ಹೆಚ್ಚು ಸಮಾನ ತಿಳುವಳಿಕೆಯನ್ನು ಹೊಂದಿರುವುದೂ ಕೂಡ ಈ ವಿಶ್ಲೇಷಣೆಗಳೇ ಎಂಬುದು ಈ ಬರಹಗಳನ್ನು ತುಲನಾತ್ಮಕವಾಗಿ ಅಧ್ಯಯನ ಮಾಡಿದ ಯಾರಿಗಾದರೂ ಸ್ವಯಂವೇದ್ಯ. ಈ ವಿಷಯವನ್ನು ಎರಡೂ ಚಳುವಳಿಗಳು ಪರಿಗಣಿಸಿ ಜಾತಿ ವ್ಯವಸ್ಥೆಯ ನಿರ್ಮೂಲನದ ಕಠಿಣ ಮತ್ತು ಬೃಹತ್ ಕಾರ್ಯದಲ್ಲಿ ಜೊತೆಗೂಡಿ ತೊಡಗಿಸಿಕೊಳ್ಳಬೇಕಾಗಿದೆ.**

ಭೂಮಿ ಹಂಚಿಕೆಗಾಗಿನ ಹೋರಾಟಗಳು ಹಳ್ಳಿಗಳ ಪಾಳೆಯಗಾರಿ ಭೂಮಾಲೀಕರನ್ನು ದುರ್ಬಲಗೊಳಿಸುತ್ತದೆ ಮತ್ತು ಅಲ್ಲಿಯ ದಲಿತ ಮತ್ತು ದಲಿತರಲ್ಲದ ಇತರ ಕೆಳಜಾತಿಗಳಲ್ಲಿ ಸ್ವ-ವಿಶ್ವಾಸವನ್ನು ಮೂಡಿಸುತ್ತದೆ ಅದರಿಂದಾಗಿ ಪಾಳೆಯಗಾರಿ-ಪುರೋಹಿತಶಾಹಿ ಮೌಲ್ಯಗಳು ಮತ್ತು ಅವರಿಂದ ರಕ್ಷಣೆ ಪಡೆದ ಜಾತಿ ವ್ಯವಸ್ಥೆಯ ಕಟ್ಟಲೆಗಳು ದುರ್ಬಲಗೊಳ್ಳುತ್ತವೆ ಎಂಬುದು ಈ ಹೋರಾಟಗಳು ಪ್ರಬಲವಾಗಿ ನಡೆದ ಪ್ರದೇಶಗಳಲ್ಲಿ ಸ್ವಲ್ಪ ಮಟ್ಟಿಗೆ ನಿಜವಾಗಿದೆ. ಆದರೆ ಭೂ ಹೋರಾಟಗಳು ಇಡೀ ಭಾರತಕ್ಕೆ ವ್ಯಾಪಿಸದೆ ಮತ್ತು ಎಲ್ಲೆಡೆಯಲ್ಲಿ ಭೂಮಾಲಿಕರ ಹಿಡಿತವನ್ನು ಕಿತ್ತು ಹಾಕದೆ ಕೇವಲ ಕೆಲವೇ ಪ್ರದೇಶಗಳಿಗೆ ಸೀಮಿತವಾದರೆ ಒಂದು ವ್ಯವಸ್ಥೆಯಾಗಿ ಪಾಳೆಯಗಾರಿ ರಾಜಕೀಯ ಅಧಿಕಾರ, ಆರ್ಥಿಕ ಮತ್ತು ಸಾಮಾಜಿಕ ಸಂಬಂಧಗಳ ಮೇಲಿನ ಹಿಡಿತ ಮುಂದುವರೆಯುತ್ತದೆ. ಆದ್ದರಿಂದ ಜಾತಿ ವ್ಯವಸ್ಥೆಯ ನಿರ್ಮೂಲನವೂ ಕೂಡ ಇಡೀ ದೇಶದಲ್ಲಿ ಒಟ್ಟಾಗಿ ನಡೆಬಹುದಾದ ಪ್ರಕ್ರಿಯೆಯೆ ಹೊರತು ಕೇವಲ ಒಂದು ಪ್ರದೇಶ ಅಥವಾ ರಾಜ್ಯದಲ್ಲಿ ಕೈಗೊಳ್ಳಬಹುದಾದ ಕ್ರಿಯೆಯಲ್ಲ.

ಇತ್ತೀಚೆಗೆ ಎರಡು ದಶಕಗಳಿಂದ ಸಿಪಿಐ(ಎಂ) ಪಕ್ಷ ಜಾತಿ ವ್ಯವಸ್ಥೆ ಹಾಗೂ ಅಸ್ಪೃಶ್ಯತೆಯ ವಿರುದ್ಧ ಹೋರಾಟಕ್ಕೆ ಆದ್ಯತೆ ನೀಡದಿರುವ ತನ್ನ ತಪ್ಪನ್ನು ತೀವ್ರವಾದ ವಿಮರ್ಶೆಗೆ ಗುರಿಮಾಡಿದೆ. ವರ್ಗ ಪ್ರಶ್ನೆಗಳ ಮೇಲೆ ಹೋರಾಟಗಳಿಂದ, ಬದುಕಿನ ಪ್ರಶ್ನೆಗಳ ಮೇಲೆ ಮೂಡಿ ಬರುವ ಒಗ್ಗಟ್ಟು ಅವರಲ್ಲಿನ ಜಾತಿ ಬೇಧವನ್ನು ತೊಲಗಿಸುತ್ತದೆ ಎಂದುಕೊಂಡಿದ್ದ ಸರಳ ತಿಳುವಳಿಕೆ ತಪ್ಪು ಎಂದು ಅರಿತುಕೊಂಡಿದೆ. ಆಂಧ್ರ ಮತ್ತು ತಮಿಳು ನಾಡುಗಳಲ್ಲಿ ಅಸ್ಪೃಶ್ಯತೆಯ ಸಮೀಕ್ಷೆ ಕೈಗೊಂಡು ನೂರಾರು ಗ್ರಾಮಗಳಲ್ಲಿ ಅಸ್ಪೃಶ್ಯತೆಯ ವಿರುದ್ಧ ತೀಕ್ಷ್ಣ ಹೋರಾಟಗಳನ್ನು ಕೈಗೊಂಡಿದೆ.

ಮತ್ತೊಂದು ಎಡ ಪಂಥೀಯ ಚಳುವಳಿಯಾದ ಸಮಾಜವಾದಿಗಳು ಅಂಬೆಡ್ಕರ್‌ರವರು ಮಂಡಿಸಿದ ಈ ಮುನ್ನೋಟದ ಎಲ್ಲ ಅಂಶಗಳನ್ನಲ್ಲವಾದರೂ ಕೆಲ ಅಂಶಗಳ ಬಗ್ಗೆ ಸಹಮತ ಹೊಂದಿದ್ದಾರೆ. ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಭೂಮಿ ಹೋರಾಟ, ಜಾತಿ ವಿನಾಶ ಕರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ ಮತ್ತು ಮೀಸಲಾತಿಯನ್ನು ಪ್ರತಿಪಾದಿಸಿದ್ದಾರೆ. ಹಿಂದುಳಿದ ಜಾತಿಗಳಿಗೆ ಅದನ್ನು ವಿಸ್ತರಿಸಲು ತಾವು ಆಳಿದ ಕೆಲ ರಾಜ್ಯಗಳಲ್ಲಿ ಪ್ರಯತ್ನಿಸಿದ್ದಾರೆ. ಆದರೆ ಇಂದು ಸಮಾಜವಾದಿಗಳು ಕಾಂಗ್ರೆಸ್ ಮತ್ತು ಪ್ರಾದೇಶಿಕ ಪಕ್ಷಗಳಲ್ಲಿ ಮಾತ್ರವಲ್ಲದೆ ಬಿಜೆಪಿ ಪಕ್ಷಗಳೊಳಗೆ ಸೇರಿ ತಮ್ಮ ತಾತ್ವಿಕ, ರಾಜಕಿಯ ಶಕ್ತಿಯನ್ನು ಕಳೆದುಕೊಂಡಿದ್ದಾರೆ. ಒಂದು ಸಿದ್ಧಾಂತವಾಗಿ ದೇಶದ ಕೆಲ ಕಡೆಗಳಲ್ಲಿ ಸಾಂಸ್ಕೃತಿಕ ಹಾಗೂ ಸಾಮಾಜಿಕ ರಂಗದಲ್ಲಿ ಕ್ರಿಯಾಶೀಲರಾಗಿದ್ದಾರೆ.

ಬಲಪಂಥೀಯ ಪಕ್ಷಗಳು ಏನು ಮಾಡಿದವು?

ಆದರೆ ಕಾಂಗ್ರೆಸ್ ಮತ್ತು ಇತರ ಬಲಪಂಥೀಯ ಪಕ್ಷಗಳು ಏನು ಮಾಡಿದವು? ಸ್ವಾತಂತ್ರ್ಯಾನಂತರ ಭಾರತದಲ್ಲಿ ಸ್ವಾತಂತ್ರ್ಯಕ್ಕೆ ಮೊದಲು ಬ್ರಿಟಿಷರನ್ನು ಬೆಂಬಲಿಸುತ್ತಿದ್ದ ಮತ್ತು ಅವರಿಂದ ಬೆಂಬಲ ಪಡೆದಿದ್ದ ರಾಜ-ನವಾಬರುಗಳನ್ನು, ಪಾಳೆಯಗಾರಿ-ಪುರೋಹಿತಶಾಹಿ ಭೂಮಾಲಕ ಶಕ್ತಿಗಳನ್ನು ನಾಶ ಮಾಡದೆ ಈ ಶಕ್ತಿಗಳು ಪೋಷಿಸುತ್ತಿದ್ದ ಅಸಮಾನತೆಯೇ ಆಧಾರವಾದ ಜಾತಿ ವ್ಯವಸ್ಥೆಯನ್ನು ನಾಶ ಮಾಡದೆ ಪ್ರಜಾಪ್ರಭುತ್ವ ಸಶಕ್ತವಾಗುವುದು ಸಾಧ್ಯವಿಲ್ಲ. ಇದು ವಿಶ್ವದೆಲ್ಲೆಡೆಯಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಯ ಜೊತೆ ಜೊತೆಯಲ್ಲಿಯೇ ನಡೆದ ಪ್ರಕ್ರಿಯೆ. ಸ್ವಾತಂತ್ರ್ಯಾನಂತರ ಆಡಳಿತ ವಹಿಸಿಕೊಂಡ ಮತ್ತು ಅಂಬೇಡ್ಕರ್ ರವರ ನೆರವಿನಿಂದ ರಚಿಸಿದ ಸಂವಿಧಾನಬದ್ಧ ಪ್ರಜಾಪ್ರಭುತ್ವವನ್ನು ಸಾಕಾರಗೊಳಿಸಬೇಕಾದ ಕಾಂಗ್ರೆಸ್ ಪಕ್ಷ ಅದ-ಕ್ಕೆ ಪೂರ್ಣ ವಿರುದ್ಧ ದಿಕ್ಕಿನಲ್ಲಿ ಸಾಗಿ ಈ ರಾಜ-ನವಾಬರುಗಳನ್ನು, ಜಾಹಗೀರುದಾರರುಗಳನ್ನು ಆತುರಾತುರವಾಗಿ ಸೇರಿಸಿಕೊಂಡು ಗೌರವದ ಸ್ಥಾನಗಳನ್ನು ನೀಡಿತು. ಸಂಸತ್ ಸದಸ್ಯರುಗಳನ್ನಾಗಿ ಮಾಡಿತು. ಜನಸಂಘ ಮತ್ತು ಅದರ ಇತ್ತೀಚಿನ ರೂಪ ಬಿಜೆಪಿ ಮತ್ತಿತರ ಪಕ್ಷಗಳಲ್ಲೂ ಈ ಶಕ್ತಿಗಳು ವಿಜೃಂಭಿಸಿದರು.

ಕಾಂಗ್ರೆಸ್ ಅಂಬೇಡ್ಕರ್ ಮತ್ತು ಅವರು ದಲಿತರಲ್ಲಿ ಮೂಡಿಸಿದ ಎಚ್ಚರದಿಂದಾಗಿ ಮೀಸಲಾತಿಯನ್ನು ಸಂವಿಧಾನ ಬದ್ಧ ಹಕ್ಕನ್ನಾಗಿ ಮಾಡಲು ಒಪ್ಪಿದರೂ ಕೂಡ ಅದನ್ನು ಗಣರಾಜ್ಯ ಘೋಷಿಸಿದ ಕೂಡಲೇ ಕೆಲವೇ ವರ್ಷಗಳಲ್ಲಿ ಪೂರ್ಣವಾಗಿ ಜಾರಿಗೊಳಿಸಲು ಬೇಕಾದ ದಲಿತ ಕೂಲಿಕಾರರಿಗೆ ವ್ಯಾಪಕ ಶಿಕ್ಷಣದ ಅವಕಾಶಗಳು, ಉನ್ನತ ತರಬೇತಿಗಳನ್ನು ಸಮರೋಪಾದಿಯಲ್ಲಿ ಜಾರಿಗೆ ತರಲಿಲ್ಲ. ಮಾತ್ರವಲ್ಲ ಶಿಕ್ಷಣ ವ್ಯವಸ್ಥೆಯ ಒಂದೊಂದು ಮೆಟ್ಟಿಲನ್ನೂ ಗ್ರಾಮೀಣ ದಲಿತ ಮತ್ತಿತರ ಶ್ರಮಿಕ ಜಾತಿಗಳ ಪ್ರವೇಶಕ್ಕೆ ಕಠಿಣಗೊಳಿಸಿತು. ಪುರೋಹಿತಶಾಹಿ ಪರ ಮೆರಿಟ್ ನ ಪರಿಕಲ್ಪನೆಯ ಮೂಲಕವೇ ದಲಿತರು ಪಡೆದಿದ್ದ ಕೌಶಲ್ಯಗಳು ಮತ್ತು ಅನುಭವಗಳಿಗೆ, ಕಲೆಗೆ, ಸಹಜ ಬುದ್ಧಿವಂತಿಕೆಗೆ ಬೆಲೆಯೇ ಇಲ್ಲದಂತೆ ಮಾಡಿತು. ಹೀಗೆ ಮೀಸಲಾತಿಯ ಪ್ರಯೋಜನ ಬಹುಸಂಖ್ಯಾತ ದಲಿತ ಮತ್ತಿತರ ಶ್ರಮಿಕ ಜಾತಿಗಳಿಗೆ ದಕ್ಕದಂತೆ ಮಾಡಿತು. ಶಿಕ್ಷಣದ ಮತ್ತು ಆಡಳಿತದ ಹಲವು ರಂಗಗಳನ್ನು ಮೆರಿಟ್ ನ ಹೆಸರಿನಲ್ಲಿ ಬಹಳ ಕಾಲ ಮೀಸಲಾತಿಯಿಂದ ಹೊರಗಿಟ್ಟಿತು. ಜೊತೆಗೆ ಬಲಪಂಥೀಯ ಶಕ್ತಿಗಳು ಆಗಾಗ್ಗೆ ಮೀಸಲಾತಿ ವಿರೋಧೀ ಹೋರಾಟಗಳ ಮೂಲಕ



ಸಮಾಜದಲ್ಲಿ ದಲಿತ ಮತ್ತು ಶೂದ್ರ ವಿರೋಧೀ ಭಾವನೆಯನ್ನು ಬೆಳೆಸಿ ಸಾಮಾಜಿಕ ಜೀವನವನ್ನು ವಿಷಮಗೊಳಿಸಿತು.

ಅದೇ ರೀತಿಯಲ್ಲಿ ನಮ್ಮ ರಾಜ್ಯದಲ್ಲಿ ಕಮ್ಯೂನಿಸ್ಟ್ ಮತ್ತು ಸಮಾಜವಾದಿ ಚಳುವಳಿಯ ಒತ್ತಡಕ್ಕೆ ಮಣಿದು ಭೂಸುಧಾರಣೆಯನ್ನು ಜಾರಿಗೆ ತಂದರೂ ಅದು ಕೇವಲ ಭೂಹಂಚಿಕೆಯನ್ನು ಹೆಸರಿಗೆಂಬಂತೆ ಎನ್ನಿಸಿ ಕೋಟ್ಯಾಂತರ ದಲಿತರನ್ನು ಭೂಹೀನರನ್ನಾಗಿಯೇ ಇರಿಸಿದೆ. ಮಾತ್ರವಲ್ಲ ಹಳ್ಳಿಗಳಲ್ಲಿ ಹೊಸ ರೀತಿಯ ಭೂಮಾಲಕರನ್ನು ಸೃಷ್ಟಿಸಿ ಜಾತಿ ವ್ಯವಸ್ಥೆಯ ಮೇಲೆ ಅವರ ಹಿಡಿತವನ್ನು ಬಲಗೊಳಿಸಿದೆ. ಅಸ್ಪೃಶ್ಯತೆಯ ಆಚರಣೆಗಳನ್ನು ಅದರ ನೆಪದಲ್ಲಿ ದಲಿತರ ಮೇಲೆ ದೌರ್ಜನ್ಯಗಳನ್ನು ಹೆಚ್ಚಿಸಿದೆ. ಅವರಿಗೆ ಜೀವನದ ಕನಿಷ್ಟ ಸೌಲಭ್ಯಗಳು ಕೂಡ ಲಭ್ಯವಿಲ್ಲದಂತೆ ಮಾಡಿದೆ. ಇದರಿಂದಾಗಿ ಇನ್ನೂ ಕೂಡ ಶಾಲಾ ಹಂತದಲ್ಲಿಯೇ ಡ್ರಾಪ್ ಔಟ್ ಆಗುವವರಲ್ಲಿ ದಲಿತರು ಮತ್ತಿತರ ಹಿಂದುಳಿದ ಜಾತಿಗಳೇ ಹೆಚ್ಚು. ಈ ಪರಿಸ್ಥಿತಿಯಲ್ಲಿ ಕೇವಲ ಶೇ. 1 ರಷ್ಟು ದಲಿತರು ಮಾತ್ರ ಪದವೀಧರರಾಗಿದ್ದಾರೆ. ಕೈಗಾರಿಕೆಗಳ ಬೆಳವಣಿಗೆ ಕೂಡ ಸ್ವಾತಂತ್ರ್ಯ ಬಂದ ಒಂದೆರಡೇ ದಶಕಗಳಲ್ಲಿ ಕುಂದಿ ಹೋಗಿದ್ದರಿಂದ ಭೂಹೀನ ದಲಿತರಿಗೆ ಖಾಯಂ ಉದ್ಯೋಗಾವಕಾಶಗಳು ಕೂಡ ಕುಂದಿಹೋದವು.

ಜಾಗತೀಕರಣದ ನಂತರ

ಖಾಸಗೀಕರಣ ಮತ್ತು ಜಾಗತೀಕರಣಗಳ ನಂತರವಂತೂ ಮೀಸಲಾತಿ ಸೌಲಭ್ಯಗಳು ಇದ್ದೂ ಇಲ್ಲದಂತಾಗಿದೆ. ಖಾಸಗಿ ರಂಗದಲ್ಲಿ ಪುರೋಹಿತಶಾಹಿ ಹಿಡಿತ ಬಲಗೊಂಡಿದೆ. ಇಂದು ದೇಶದ ಅತಿ ದೊಡ್ಡ ಸಾವಿರ ಕಂಪನಿಗಳ ಆಡಳಿತ ಮಂಡಳಿಗಳ ಜಾತಿ ರಚನೆಯನ್ನು ನೋಡಿದ-ರೆ ಈ ಅಂಶ ಖಾಸಗಿ ರಂಗದಲ್ಲಿ ಉದ್ಯೋಗ ಸಾಧ್ಯತೆಗಳನ್ನು ನಿಯಂತ್ರಿಸುವಲ್ಲಿ ಎಷ್ಟೊಂದು ಮಹತ್ವದ್ದು ಎಂಬುದನ್ನು ನೋಡಬಹುದು :

ಬ್ರಾಹ್ಮಣರು-ಶೇ.46.6, ವೈಶ್ಯರು-44.6, ಒಟ್ಟು ಮೇಲ್ಜಾತಿಗಳು-92.6, ದಲಿತರು-3.4

ದೇಶದ ಉದ್ಯಮ ರಂಗದ ಮೇಲೆ ವಿದೇಶಿ ಹಾಗೂ ದೇಶಿ ಬೃಹತ್ ಕಾರ್ಪೋರೇಟ್ ಹಿಡಿತ ಬಲವಾಗುತ್ತಿದೆ, ದಲಿತ ಭೂಹೀನರಿಗೆ ಭೂ ಹಂಚಿಕೆಗೆ ಬದಲಾಗಿ ಭೂಮಿ, ನೀರು, ಅರಣ್ಯ, ಖನಿಜ ಮೊದಲಾದ ಸಂಪತ್ತುಗಳನ್ನು ಇವರಿಗೆ ಧಾರೆಯೆ-ರೆದು ಕೊಡಲಾಗುತ್ತಿದೆ. ಹಳ್ಳಿಗಳಲ್ಲಿ ಬದುಕು ಅಷ್ಟಿಷ್ಟು ಆಸ್ತಿಯುಳ್ಳವರಿಗೂ ಸಂಕಟಕರವಾಗಿದೆ. ವೈದ್ಯಕೀಯ, ಇಂಜನಿಯರಿಂಗ್, ಮ್ಯಾನೇಜ್ ಮೆಂಟ್, ಕಾನೂನು ಮೊದಲಾದ ಶಿಕ್ಷಣದ ಅನೇಕ ರಂಗಗಳಲ್ಲಿ ಖಾಸಗಿ ರಂಗವೇ ಪ್ರಧಾನವಾಗಿವೆ. ಖಾಸಗಿ ಕಂಪನಿಗಳಲ್ಲಿ ಶೇ 99 ರಷ್ಟು ಖಾಯಂ ಉದ್ಯೋಗ ನೀಡುವ ಕಂಪನಿಗಳ ಆಡಳಿತ ಮಂಡಳಿಗಳ ಜಾತಿ ಸಂಯೋಜನೆ ಪುರೋಹಿತಶಾಹಿ ಹಿಡಿತದಲ್ಲಿದೆ. ದಿನದಿಂದ ದಿನಕ್ಕೆ ದೇಶದ ಸಾಮಜಿಕ, ರಾಜಕೀಯ, ಆರ್ಥಿಕ ಬದುಕು ಹೆಚ್ಚು ಹೆಚ್ಚು ಸಂಕೀರ್ಣವಾಗುತ್ತ ನಡೆದಿದೆ. ದಲಿತ ಮತ್ತು ಹಿಂದುಳಿದ ಜಾತಿಗಳ ಭವಿಷ್ಯ ಭಾರತದ ದಲಿತ ಮತ್ತು ಹಿಂದುಳಿದ ಜಾತಿಗಳ ಜೀವನ ಈಗ ಮಾತ್ರವಲ್ಲ ಮುಂದಕ್ಕೂ ಬಹಳಷ್ಟು ಅನಿಶ್ಚಿತವಾಗಿದೆ. ಸ್ವಾತಂತ್ರ್ಯಾನಂತರ ದೇಶದಲ್ಲಿ ಕ್ರಿಯಾಶೀಲವಾಗಿದ್ದ ಎಡ ಶಕ್ತಿಗಳಾದ ಕಮ್ಯೂನಿಸ್ಟ್, ಸಮಾಜವಾದೀ ಮತ್ತು ದಲಿತ ಚಳುವಳಿಗಳು ಒಗ್ಗೂಡಿ ಎಂತಹ ಬೃಹತ್ ಚಳುವಳಿಗಳನ್ನು ಹೂಡಬಹುದಿತ್ತು ಮತ್ತು ಕಾಂಗ್ರೆಸ್ ಮತ್ತು ಬಿಜೆಪಿ ಮೊದಲಾದ ಪ್ರತಿಗಾಮೀ ಶಕ್ತಿಗಳ ಬೆಳವಣಿಗೆಯನ್ನು ತಡೆಯಬಹುದಿತ್ತು ಎಂಬುದರ ಬಗ್ಗೆ ಒಂದು ಊಹೆಯನ್ನಾದರೂ ಮಾಡಿಕೊಂಡರೆ ಭಾರತದ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಬದಲಾವಣೆಯ ಸಾಧನೆಯಲ್ಲಿ ಕಳೆದುಕೊಂಡ ಅವಕಾಶಗಳ ಬಗ್ಗೆ ಒಂದು ಅಂ-ದಾಜು ಮಾಡಿಕೊಳ್ಳಬಹುದು.

ಐಕ್ಯ ಹೋರಾಟದ ಅಗತ್ಯ

ಇಂದು ಗುರುತರ ಸವಾಲುಗಳನ್ನು ಎದುರಿಸಬೇಕಾಗಿದೆ. ಇಂತಹ ಸಮಯದಲ್ಲಿ ಅಂಬೇಡ್ಕರ್ ರವರ ವಿಚಾರವೂ ಸೇರಿ ಎಲ್ಲ ಎಡ ವಿಚಾರಗಳೂ ತಮ್ಮ ಚಿಂತನೆಗಳನ್ನು ಮತ್ತಷ್ಟು ಹರಿತಗೊಳಿಸಿಕೊಳ್ಳಬೆಕಾಗಿದೆ. ಈ ಮಹತ್ತರ ಸವಾಲುಗಳು ಮತ್ತು ಕಾರ್ಪೋರೇಟ್, ಪುರೋಹಿತಶಾಹಿ-ಪಾಳೆಯಗಾರೀ ಶಕ್ತಿಗಳ ಎದುರು ಒಟ್ಟಾಗಿ ಹೋರಾಡಬೇಕಾದ ಅನಿವಾರ್ಯತೆ ಒದಗಿದೆ.

ಇದೇ ಸಮಯದಲ್ಲಿ ಆರೆಸ್ಸೆಸ್-ಬಿಜೆಪಿ ಆಡಳಿತದಲ್ಲಿ ದೇಶದೆಲ್ಲ ಪ್ರಗತಿಪರ ಚಿಂತನೆಗಳ ಮೇಲೆ, ಅಲ್ಪ ಸಂಖ್ಯಾತರ ಜೊತೆಗೆ ದಲಿತರು ಮತ್ತು ಕಮ್ಯೂನಿಸ್ಟರ ಮೇಲೆ ವ್ಯವಸ್ಥಿತ ಧಾಳಿಗಳನ್ನು ನಡೆಸಲಾಗುತ್ತಿದೆ. ವಿಶ್ವ ವಿದ್ಯಾಲಯಗಳು ಪೋಲೀಸ್ ದಬ್ಬಾಳಿಕೆ ತುತ್ತಾಗಿವೆ. ಇವುಗಳ ವಿರುದ್ದವಾಗಿ ದಲಿತ, ಕಮ್ಯೂನಿಸ್ಟ್ ಎಲ್ಲ ಎಡ ಚಿಂತನೆಗಳ ಮತ್ತು ಪ್ರಗತಿಪರ ಚಿಂತನೆಗಳ ಚಳುವಳಿಗಳು, ಸಂಘಟನೆಗಳು, ವ್ಯಕ್ತಿಗಳು ಒಟ್ಟಾಗಿ ಪ್ರತಿಭಟನೆಗಿಳಿದಿವೆ. ಈ ಪ್ರತಿಭಟನೆಗಳ ಅಲೆ ನಮಗೆ ಹೊಸದೊಂದು ಪಾಠವನ್ನು, ಒಗ್ಗೂಡಿ ಹೋರಾಡುವ ಪಾಠವನ್ನು ಕಲಿಸುತ್ತಿವೆ. ಹಿಂದೆ ಆದ ರೀತಿಯಲ್ಲಿ ಚಳುವಳಿ ವಿಭಜಿತವಾದ ತಪ್ಪು ಮರುಕಳಿಸದಂತೆ ದಲಿತ, ಕಮ್ಯೂನಿಸ್ಟ್, ಸಮಾಜವಾದಿ ಮೊದಲಾದ ಎಡ ಪ್ರಗತಿಪರ ಶಕ್ತಿಗಳು ಒಗ್ಗೂಡಿ ಹೋರಾಡಬೇಕಾದ ತುರ್ತು ಹಿಂದೆಂದಿಗಿಂತ ಹೆಚ್ಚಾಗಿದೆ. ಹಾಗೆಂದು ತಂತಮ್ಮ ಸಿದ್ಧಾಂತಗಳನ್ನು ಕೈಬಿಡಬೇಕೆಂಬ ಒತ್ತಾಯವೇನಿಲ್ಲ. ಎಲ್ಲರ ವಿಚಾರಗಳಲ್ಲಿರುವ ಸಮಾನ ಅಂಶಗಳ ಆಧಾರದ ಮೇಲೆ ಒಂದು ಐಕ್ಯ ಚಳುವಳಿಯನ್ನು ಕೈಗೊಳ್ಳುವ ಅವಕಾಶವನ್ನು ಈ ಸಿದ್ಧಾಂತಗಳು ಹೇರಳವಾಗಿ ಒದಗಿಸುತ್ತವೆ .

ಆದರೆ ಕಮ್ಯೂನಿಸ್ಟರು ಆರ್ಥಿಕ ಹೋರಾಟಗಳಿಗೆ ನೀಡಿದ್ದ ಆದ್ಯತೆಯನ್ನು ಬೂದು ಗಾಜಿನಲ್ಲಿ ನೋಡುತ್ತಾ ಬೃಹದಾಕಾರಗೊಳಿಸಿ ಈ ಬಗ್ಗೆ ಸಿಪಿಐ(ಎಂ) ಪಕ್ಷ ಮಾಡಿಕೊಂಡಿರುವ ವಿಮರ್ಶೆಯನ್ನೂ ಮತ್ತು ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆಯ ವಿರುದ್ಧ ಕೈಗೊಳ್ಳುತ್ತಿರುವ ಹೋರಾಟಗಳನ್ನೂ, ಉಳಿದೆಲ್ಲ ಅಂಶಗಳಲ್ಲಿ ಇರುವ ಸಮಾನ ವಿಚಾರವನ್ನು ಮರೆಮಾಚಲಾಗುತ್ತಿದೆ. ಏಕೆ-ಂದರೆ ಜಾತಿ ವ್ಯವಸ್ಥೆಯ ಬಗೆಗಿನ ವಿಶ್ಲೇಷಣೆಯಲ್ಲಿ ಅತ್ಯಂತ ಹೆಚ್ಚು ಶ್ರಮಿಸಿದವರು ಅಂಬೇಡ್ಕರ್ ರವರು ಮತ್ತು ಕಮ್ಯೂನಿಸ್ಟರೇ ಮತ್ತು ಅತ್ಯಂತ ಹೆಚ್ಚು ಸಮಾನ ತಿಳುವಳಿಕೆಯನ್ನು ಹೊಂದಿರುವುದೂ ಕೂಡ ಈ ವಿಶ್ಲೆಷಣೆಗಳೇ ಎಂಬುದು ಈ ಬರಹಗಳನ್ನು ತುಲನಾತ್ಮಕವಾಗಿ ಅಧ್ಯಯನ ಮಾಡಿದ ಯಾರಿಗಾದರೂ ಸ್ವಯಂವೇದ್ಯ. ಈ ವಿಷಯವನ್ನು ಎರಡೂ ಚಳುವಳಿಗಳು ಪರಿಗಣಿಸಿ ಜಾತಿ ವ್ಯವಸ್ಥೆಯ ನಿರ್ಮೂಲನದ ಕಠಿಣ ಮತ್ತು ಬೃಹತ್ ಕಾರ್ಯದಲ್ಲಿ ಜೊತೆಗೂಡಿ ತೊಡಗಿಸಿಕೊಳ್ಳಬೇಕಾಗಿದೆ. ಜೊತೆ-ಗೆ ದಲಿತ ಮತ್ತು ಹಿಂದುಳಿದ ಜಾತಿಗಳ ದುಡಿವ ಜನರಿಗೆ ಉತ್ತಮ ಶಿಕ್ಷಣ, ಉದ್ಯೋಗದ ಅವಕಾಶಗಳು ದೊರೆಯುವಂತೆ ಮಾಡುವ; ಆ ಮೂಲಕ ಸಮಾನ ಮತ್ತು ಉತ್ತಮ ಜೀವನ ದೊರೆಯುವಂತೆ ಮಾಡುವ ಹೊಣೆಯನ್ನು ಈ ಎಲ್ಲಾ ಎಡ ಮತ್ತು ಪ್ರಗತಿಪರರು ಹೊರಬೇಕಾಗುತ್ತದೆ.

(ಈ ಲೇಖನಮಾಲೆ ಮುಗಿಯಿತು)

■



ಲೋಕಸಭಾ ಚುನಾವಣೆಗಳಲ್ಲಿ ನರೇಂದ್ರ ಮೋದಿ ಮತ್ತು ಬಿಜೆಪಿ ದೊಡ್ಡ ಪ್ರಮಾಣದಲ್ಲಿ ಉದ್ಯೋಗ ನಿರ್ಮಾಣವನ್ನು ತಮ್ಮ ಪ್ರಧಾನ ಚುನಾವಣಾ ಆಶ್ವಾಸನೆಯಾಗಿ ಮಾಡಿದ್ದರು. ಮೋದಿ ಸರಕಾರದ ಎರಡು ವರ್ಷಗಳ ನಂತರ ಉದ್ಯೋಗ ರಂಗದಲ್ಲಿನ ಶೋಚನೀಯ ದಾಖಲೆ ಎದ್ದು ಕಾಣುತ್ತಿದೆ. ನವ-ಉದಾರವಾದಿ ಬೆಳವಣಿಗೆ ಉದ್ಯೋಗಗಳನ್ನು ನಿರ್ಮಿಸುವುದಿಲ್ಲ, ಬದಲಿಗೆ ಉದ್ಯೋಗಗಳನ್ನು ಕೊಲ್ಲುತ್ತದೆ. ಧೋರಣೆಗಳಲ್ಲಿ ಮೂಲಭೂತ ಬದಲಾವಣೆ ತರದೆ ಕೇವಲ ವ್ಯವಸ್ಥೆಗೆ ಎಷ್ಟೇ ತೇಪೆ ಹಾಕಿದರೂ ನಿರುದ್ಯೋಗದ ಸಮಸ್ಯೆ ಪರಿಹಾರವಾಗುವುದಿಲ್ಲ.

ಈಗ ಬೇಕಾಗಿರುವುದು ಒಂದು ಪರ್ಯಾಯ ಬೆಳವಣಿಗೆಯ ಪಥ, ಎಲ್ಲ ವಲಯಗಳಲ್ಲೂ ಉದ್ಯೋಗಾವಕಾಶಗಳನ್ನು ನಿರ್ಮಿಸಬಲ್ಲ ದಿಕ್ಕು. ಕೃಷಿಯಲ್ಲಿ ಮತ್ತು ಮೂಲರಚನೆಗಳ ಅಭಿವೃದ್ಧಿಯಲ್ಲಿ ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸಬೇಕಾಗಿದೆ. ಏಕೆಂದರೆ ಇವೇ ಉದ್ಯೋಗಗಳನ್ನು ನಿರ್ಮಿಸುವಂತವು.



ಉದ್ಯೋಗಗಳು ಎಲ್ಲಿವೆ ?!

ಪ್ರಕಾಶ ಕಾರಟ್

ಇತ್ತೀಚೆಗೆ ಕಾರ್ಪೊರೇಟ್ ಮಾಧ್ಯಮಗಳು ದೇಶದಲ್ಲಿ ಹೆಚ್ಚುತ್ತಿರುವ ಉದ್ಯೋಗಹೀನತೆ ಮತ್ತು ಉದ್ಯೋಗಾವಕಾಶ ಬೆಳವಣಿಗೆಯ ಕೊರತೆ-ಯ ಸಮಸ್ಯೆಯನ್ನು ಚರ್ಚಿಸುತ್ತಿವೆ. ಬಹುಶಃ ಲೇಬರ್ ಬ್ಯೂರೊ ನಡೆಸುತ್ತಿರುವ ಎಂಟು ಹೆಚ್ಚಿನ ಉದ್ಯೋಗಾವಕಾಶಗಳು ಬೇಕಾಗುವ ಉದ್ದಿಮೆಗಳ ತ್ರೈಮಾಸಿಕ ಉದ್ಯೋಗ ಸರ್ವೆಯಿಂದ ಇದು ಸ್ಫುರಿಸಿರಬೇಕು. ಜವಳಿ, ಗಾರ್ಮೆಂಟ್, ಆಭರಣ ತಯಾರಿ, ಮಾಹಿತಿ ತಂತ್ರಜ್ಞಾನ, ಚರ್ಮ, ಕೈಮಗ್ಗ, ಲೋಹಗಳು ಮತ್ತು ವಾಹನಗಳು ಈ ಎಂಟು ಉದ್ದಿಮೆಗಳಲ್ಲಿ 2015ರಲ್ಲಿ ಕೇವಲ 1.35 ಲಕ್ಷ ಉದ್ಯೋಗಗಳು ನಿರ್ಮಾಣವಾದವು, 2014ರಲ್ಲಿ ಇದು 4.9ಲಕ್ಷ ಇತ್ತು, 2009ರಲ್ಲಿ 12.5 ಲಕ್ಷ ಇತ್ತು ಎಂದು ಈ ಸರ್ವೆಗಳು ತೋರಿಸಿವೆ.

ಗ್ರಾಮೀಣ ಉದ್ಯೋಗಗಳಿಗೆ ಸಂಬಂಧ ಪಟ್ಟಂತೆ ಪರಿಸ್ಥಿತಿ ಇನ್ನೂ ಕೆಟ್ಟದಾಗಿದೆ. ದೇಶದ ಒಟ್ಟು ಆಂತರಿಕ ಉತ್ಪನ್ನ(ಜಿಡಿಪಿ)ದಲ್ಲಿ ಕೃಷಿಯ ಪಾಲು ಇಳಿಮುಖವಾಗುತ್ತಿದೆ. ಗ್ರಾಮೀಣ ಬಡವರು ಮತ್ತು ಯುವಜನತೆಗೆ ಕೃಷಿ ಬಿಟ್ಟು ಬೇರೆ ಉದ್ಯೋಗಗಳನ್ನು ಒದಗಿಸಬಲ್ಲ ಕ್ರಮಗಳಿಲ್ಲ. ಈ ವರ್ಷದ ಮಾರ್ಚ್ ತಿಂಗಳ ಮೂರನೇ ವಾರದ ವರೆಗೆ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಉದ್ಯೋಗಕ್ಕೆ ಅರ್ಜಿ ಹಾಕಿದವರ ಸಂಖ್ಯೆ 8.4 ಕೋಟಿ. ಇದು ಗ್ರಾಮೀಣ ನಿರುದ್ಯೋಗ ಯಾವ ಪ್ರಮಾಣದಲ್ಲಿ ಇದೆ ಎಂಬುದನ್ನು ತೋರಿಸುತ್ತದೆ.

ಹುಸಿಯಾದ ಚುನಾವಣಾ ಆಶ್ವಾಸನೆ

ಲೋಕಸಭಾ ಚುನಾವಣೆಗಳಲ್ಲಿ ನರೇಂದ್ರ ಮೋದಿ ಮತ್ತು ಬಿಜೆಪಿ ದೊಡ್ಡ ಪ್ರಮಾಣದಲ್ಲಿ ಉದ್ಯೋಗ ನಿರ್ಮಾಣವನ್ನು ತಮ್ಮ ಪ್ರಧಾನ ಚುನಾವಣಾ ಆಶ್ವಾಸನೆಯಾಗಿ ಮಾಡಿದ್ದರು. ಮೋದಿ ಸರಕಾರದ ಎರಡು ವರ್ಷಗಳ ನಂತರ ಉದ್ಯೋಗ ರಂಗದಲ್ಲಿನ ಶೋಚನೀಯ ದಾಖಲೆ ಎದ್ದು ಕಾಣುತ್ತಿದೆ. ಸರಕಾರ 7.5ಶೇ. ಜಿಡಿಪಿ ಬೆಳವಣಿಗೆಯಾಗಿದೆ ಎನ್ನುತ್ತದೆ. ಈ ದಾವೆಯೇ ನಂಬಲರ್ಹವಲ್ಲ. ಆದರೂ ಇಂತಹ ನವ-ಉದಾರವಾದಿ ಬೆಳವಣಿಗೆ ಉದ್ಯೋಗಾವಕಾಶ ಗಳನ್ನು ನಿರ್ಮಿಸಲಾರದು ಎಂಬುದು ಸ್ವಯಂವೇದ್ಯ.

ಸರಳ ಸಂಗತಿಯೆಂದರೆ ನವ-ಉದಾರವಾದಿ ಬೆಳವಣಿಗೆ ಉದ್ಯೋಗಗಳನ್ನು ನಿರ್ಮಿಸುವುದಿಲ್ಲ, ಬದಲಿಗೆ ಉದ್ಯೋಗಗಳನ್ನು ಕೊಲ್ಲುತ್ತದೆ. ಧೋರಣೆಗಳಲ್ಲಿ ಮೂಲಭೂತ ಬದಲಾವಣೆ ತರದೆ ಕೇವಲ ವ್ಯವಸ್ಥೆಗೆ ಎಷ್ಟೇ ತೇಪೆ ಹಾಕಿದರೂ ನಿರುದ್ಯೋಗದ ಸಮಸ್ಯೆ ಪರಿಹಾರವಾಗುವುದಿಲ್ಲ.

ಖಾಸಗಿ ಹೂಡಿಕೆ ಮತ್ತು ಖಾಸಗೀಕರಣವನ್ನು ಹೆಚ್ಚೆಚ್ಚು ಅವಲಂಬಿಸು ವುದರಿಂದ ಉದ್ಯೋಗಾವಕಾಶಗಳೇನೂ ಹುಟ್ಟಿಕೊಳ್ಳುವುದಿಲ್ಲ. ಏಕೆಂದರೆ ನವ-ಉದಾರವಾದಿ ಅರ್ಥಶಾಸ್ತ್ರ ಹೂಡಿಕೆಗಳು ಬಂಡವಾಳ ಹೆಚ್ಚಾಗಿ ಬೇಕಾಗುವ, ಶ್ರಮ ಉಳಿಸುವ ತಂತ್ರಜ್ಞಾನವನ್ನು ಅವಲಂಬಿಸುವ, ಆಮೂಲಕ ದೊಡ್ಡ ಪ್ರಮಾಣದಲ್ಲಿ ದುಡಿಮೆಗಾರರ ಪಡೆಯ ಅಗತ್ಯವಿಲ್ಲದ ಕ್ಷೇತ್ರಗಳಿಗೆ ಹೋಗುವಂತೆ ಮಾಡುತ್ತದೆ. ಅಲ್ಲದೆ ಉದ್ಯೋಗ ಕಾಂಟ್ರಾಕ್ಟ್ ಆಧಾರದಲ್ಲಿ ಮಾತ್ರವೇ ಲಭ್ಯವಾಗುವಂತೆ ಮಾಡುತ್ತದೆ. ಆಮೂಲಕ ಉದ್ಯೋಗಗಳು ಅಭದ್ರ ಮತ್ತು ಅಲ್ಪಕಾಲದ್ದಾಗಿರುವಂತೆ ಮಾಡುತ್ತದೆ.

ಔದ್ಯೋಗೀಕರಣದ ನಾಶ

ಅನೌಪಚಾರಿಕ ವಲಯ ನಮ್ಮ ದೇಶದಲ್ಲಿ ಅತಿ ಹೆಚ್ಚು ಉದ್ಯೋಗಗಳನ್ನು ಒದಗಿಸುವ ವಲಯ. ಇಲ್ಲಿಯೂ ಕೂಡ ಉದ್ಯೋಗಾವಕಾಶಗಳು 2004-05ರಿಂದ 2011-12ರ ನಡುವೆ 6ಶೇ.ದಷ್ಟು ಇಳಿಮುಖಗೊಂಡವು.

ಹೀಗೆ ನವ-ಉದಾರವಾದಿ ಬೆಳವಣಿಗೆಯ ಆದ್ಯತೆಗಳು ಶ್ರಮ ಹೆಚ್ಚಾಗಿ ಬೇಕಾಗುವ ಉದ್ದಿಮೆಗಳೂ ಅಲ್ಲ, ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳ ಅಭಿವೃದ್ಧಿಯೂ ಅಲ್ಲ. ವ್ಯಾಪಾರ ಉದಾರೀಕರಣ ವಿದೇಶಗಳಿಂದ ಬರುವ ಕೈಗಾರಿಕಾ ಸರಕುಗಳಿಗೆ ಸುಂಕದರಗಳನ್ನು ಇಳಿಸುತ್ತಿದೆ. ಇದರಿಂದಾಗಿ ಹಲವು ವಲಯಗಳಲ್ಲಿ ಔದ್ಯೋಗೀಕರಣ ಇಲ್ಲವಾಗುತ್ತಿದೆ.

ನವ-ಉದಾರವಾದಿ ಧೋರಣೆಗಳಲ್ಲಿ ಸರಕಾರ ದೊಡ್ಡ ಕಾರ್ಪೊರೇಟ್‌ಗಳಿಗೆ ಮತ್ತು ಶ್ರೀಮಂತ ವಲಯಗಳುಗೆ ಸಾವಿರಾರು ಕೋಟಿ ರೂ.ಗಳಷ್ಟು ಸಬ್ಸಿಡಿಗಳನ್ನು ಒದಗಿಸುತ್ತದೆ, ವರು ತೆರಬೇಕಾದ ತೆರಿಗೆಗಳನ್ನು ಬಿಟ್ಟುಕೊಡುತ್ತದೆ, ಆದರೆ ಕೈಮಗ್ಗ, ಗೇರು, ನಾರು ಮತ್ತು ಕೈಕಸಬುಗಳಂತಹ ಲಕ್ಷಾಂತರ ದುಡಿಯುವ ಗಂಡಸರು ಮತ್ತು ಹೆಂಗಸರಿಗೆ ಜೀವನಾಧಾರ ಕಲ್ಪಿಸುವ ಮತ್ತು ಉದ್ಯೋಗಗಳನ್ನು ಒದಗಿಸುವ ಪಾರಂಪರಿಕ ಉದ್ದಿಮೆಗಳಿಗೆ ಬೆಂಬಲ ಕೊಡಲು ನಿರಾಕರಿಸುತ್ತದೆ. ಕೃಷಿಯಲ್ಲಿ ಹೂಡಿಕೆಯ ಕಡಿತ ಮತ್ತು ಸಾಮಾಜಿಕ ವಲಯಗಳಿಗೆ- ಶಿಕ್ಷಣ, ಆರೋಗ್ಯ ಮತ್ತು ಮನರೇಗ-ಹಣನೀಡಿಕೆಯಲ್ಲಿ ತೀವ್ರ ಕಡಿತ ಕೂಡ ದೇಶದಲ್ಲಿ ಉದ್ಯೋಗಾವಕಾಶ ನಿರ್ಮಾಣದ ಸಾಧ್ಯತೆಯನ್ನು ಸಂಕುಚಿತ ಗೊಳಿಸಲು ಕಾರಣವಾಗುತ್ತದೆ.

ಪರ್ಯಾಯ ದಿಕ್ಕು

ಈಗ ಬೇಕಾಗಿರುವುದು ಒಂದು ಪರ್ಯಾಯ ಬೆಳವಣಿಗೆಯ ಪಥ, ಎಲ್ಲ ವಲಯಗಳಲ್ಲೂ ಉದ್ಯೋಗಾವಕಾಶಗಳನ್ನು ನಿರ್ಮಿಸಬಲ್ಲ ದಿಕ್ಕು. ಕೃಷಿಯಲ್ಲಿ ಮತ್ತು ಮೂಲರಚನೆಗಳ ಅಭಿವೃದ್ಧಿಯಲ್ಲಿ ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸಬೇಕಾಗಿದೆ. ಏಕೆಂದರೆ ಇವೇ ಉದ್ಯೋಗಗಳನ್ನು ನಿರ್ಮಿಸುವಂತವು.

ಶ್ರಮ ಹೆಚ್ಚಾಗಿ ಬೇಕಾಗುವ ಕೈಗಾರಿಕೆಗಳು, ಸಣ್ಣ ಪ್ರಮಾಣದ ಉದ್ದಿಮೆಗಳು ಮತ್ತು ಕೃಷಿ ಸಂಸ್ಕರಣ ಉದ್ದಿಮೆಗಳಿಗೆ ಪ್ರೋತ್ಸಾಹ, ಉತ್ತೇಜಕಗಳನ್ನು ನೀಡಬೇಕು.

ಶಿಕ್ಷಣ ಮತ್ತು ಆರೋಗ್ಯ ವಲಯಗಳಲ್ಲಿ ಸಾರ್ವಜನಿಕ ಹೂಡಿಕೆಯನ್ನು ಗಮನಾರ್ಹವಾಗಿ ಹೆಚ್ಚಿಸಿದರೆ ಅದರಿಂದ ಸಾರ್ವಜನಿಕ ಶಿಕ್ಷಣ ಮತ್ತು ಆರೋಗ್ಯ ವ್ಯವಸ್ಥೆಗಳು ವಿಸ್ತರಿಸಿ, ಗುಣಾತ್ಮವಾಗಿ ಉತ್ತಮಗೊಂಡು ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತವೆ.

ಇದರೊಂದಿಗೆ ಯುವಜನರಿಗೆ ವೃತ್ತಿಪರವಾದ ಮತ್ತು ಕುಶಲತೆಯನ್ನು ಅಭಿವೃದ್ಧಿಗೊಳಿಸುವುದಕ್ಕೆ ಗಮನ ಕೇಂದ್ರೀಕರಿಸುವ ಕಾರ್ಯಕ್ರಮಗಳು ಹೊಸದಾಗಿ ತೆರೆದುಕೊಳ್ಳುವ ವಿಧ-ವಿಧವಾದ ಕೆಲಸಗಳನ್ನು ನಿರ್ವಹಿಸಲು ಅವರನ್ನು ಸಜ್ಜುಗೊಳಿಸುತ್ತದೆ.

ಬಂಗಾಲದ ಜನತೆ ನಮಗೆ ಮತ ನೀಡುತ್ತಿದ್ದಾರೆ ಎಂಬ ಸೂಚನೆಗಳು ಸಿಗುತ್ತಿವೆ- ಯೆಚೂರಿ

ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಪಶ್ಚಿಮ ಬಂಗಾಳದಲ್ಲಿ ವಿಧಾನಸಭಾ ಚುನಾವಣೆಗಳಿಗೆ ಮತದಾನದ ಎಲ್ಲ ಹಂತಗಳು ಪೂರ್ಣಗೊಂಡಿವೆ. ಸುಮಾರಾಗಿ ಎಲ್ಲ ಹಂತಗಳಲ್ಲೂ ಮತದಾನ 80ಶೇ. ದಷ್ಟಿತ್ತು. ಮಾಧ್ಯಮ ವರದಿಗಳ ಪ್ರಕಾರ ಮತದಾನದ ಶೇಕಡಾವಾರು ಹೀಗಿದೆ:

ಹಂತ 1ಎ:80.0; 1ಬಿ:79.5; 2:79.7; 3:79.2; 4:78.1;5:81.6 ಮತ್ತು ಹಂತ 6: 84.2

ಚುನಾವಣೆ ಆರಂಭವಾಗುವ ಮೊದಲು ಟಿಎಂಸಿ ಸರಕಾರದ ಕಾರ್ಯವೈಖರಿ ಏನೇ ಇರಲಿ, ಅದು ಮತ್ತೆ ಅಧಿಕಾರಕ್ಕೆ ಬರುತ್ತದೆ, ಬಹುಶಃ ಸಂಖ್ಯಾಬಲ ತುಸು ಇಳಿಯಬಹುದು ಎಂದು ಒಪಿನಿಯನ್ ಪೋಲ್‌ಗಳು ಹೇಳುತ್ತವೆ ಎನ್ನಲಾಗುತ್ತಿತ್ತು. ಆದರೆ ಮತದಾನ ಮುಗಿಯುವ ವೇಳೆಗೆ ಚಿತ್ರ ಬದಲಾದಂತೆ ಕಾಣುತ್ತದೆ. ಮಾಧ್ಯಮಗಳು ಎಡರಂಗ ಮತ್ತು ಕಾಂಗ್ರೆಸ್ ಸರಕಾರ ರಚಿಸುವ ಬಗ್ಗೆ ಮಾತನಾಡುತ್ತಿವೆ. ಕೊಲ್ಕತಾದ ಪ್ರಮುಖ ದೈನಿಕ 'ದಿ ಟೆಲಿಗ್ರಾಫ್' ಈ ಬಗ್ಗೆ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿಯವರನ್ನು ಸಂದರ್ಶಿಸಿ ಕೇಳಿದ ಪ್ರಶ್ನೆಗೆ ಉತ್ತರಿಸುತ್ತ "ನಮ್ಮ ವರದಿಗಳು ಜನರು ನಮಗೆ ಮತ ನೀಡುತ್ತಿದ್ದಾರೆ ಎಂದು ಸೂಚಿಸುತ್ತಿವೆ. ಗ್ರಾಮೀಣ ಪ್ರದೇಶಗಳಲ್ಲಿ ಪ್ರಚಾರ ಮಾಡುವಾಗ ಶಾರದಾ ಚಿಟ್‌ಫಂಡ್ ವಿಷಯ ಬಂದಾಗಲೆಲ್ಲ ಆಕ್ರೋಶ ವ್ಯಕ್ತವಾಗುತ್ತಿತ್ತು. ಹಳ್ಳಿಗರಿಗೆ ತಮ್ಮ ಜೀವನಪರ್ಯಂತದ ಉಳಿತಾಯಗಳನ್ನು ಕಳಕೊಳ್ಳುವುದು ಒಂದು ದೊಡ್ಡ ಸಂಗತಿಯೇ ಸರಿ. ನಾರದಾ ಕುಟುಕು ಕಾರ್ಯಾಚರಣೆದ ಪ್ರಭಾವ ಎಷ್ಟಿದೆಯೆಂದು ಹೇಳಲಾರೆ. ಆದರೆ ಶಾರಧಾ ಚಿಟ್‌ಫಂಡ್ ಒಂದು ಪ್ರಶ್ನೆಯಂತೂ ಆಗಿದೆ" ಎಂದರು.

ಸಿಪಿಐ(ಎಂ) ಮುಖಂಡರಾದ ಬುದ್ಧದೇಬ್ ಭಟ್ಟಾಚಾರ್ಯ ಮತ್ತು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಒಂದೇ ವೇದಿಕೆಯಲ್ಲಿ ಪ್ರಚಾರ ನಡೆಸಿದ್ದರ ಬಗ್ಗೆ ಕೇಳಿದಾಗ "ಇದು ಮುಖ್ಯವಾಗಿ ಕೆಳಗಿನಿಂದ ಉಂಟಾದ ಪ್ರಭಾವದಿಂದಾಗಿ ಸಂಭವಿಸಿತು. ಮೇಲಿನಿಂದ ಯಾರೂ ಇದನ್ನು ಮಾಡಲಿಲ್ಲ. ಜನತೆಯಿಂದ ಎದ್ದು ಬಂದ ಭಾವನೆಗಳಿಂದಾಗಿ ಇದು ಏರ್ಪಟ್ಟಿತು. ಇಲ್ಲವಾದರೆ ಕಾಂಗ್ರೆಸ್‌ನೊಂದಿಗೆ ಬುದ್ಧದಾ ಅವರನ್ನು ಊಹಿಸಿಕೊಳ್ಳಲು ಸಾಧ್ಯವೇ" ಎಂದು ಪ್ರಶ್ನಿಸಿದರು.

ಈ ಸಭೆಯ ವೇಳೆಗೆ ಅದಾಗಲೇ 294ರಲ್ಲಿ 216 ಸ್ಥಾನಗಳಲ್ಲಿ ಚುನಾವಣೆ ಮುಗಿದಿತ್ತು. ಇದನ್ನು ಮೊದಲೇ ಮಾಡಿದ್ದರೆ ಪ್ರಭಾವ ಇನ್ನೂ ಹೆಚ್ಚಾಗುತ್ತಿತ್ತಲ್ಲವೇ ಎಂದು ಕೇಳಿದಾಗ ಯೆಚೂರಿ "ಹಾಗನ್ನುವುದು ಸರಿಯಾಗದು. ವಾಸ್ತವವಾಗಿ ಆಗಲೇ ಪ್ರಭಾವ ಉಂಟಾದ್ದ-ರಿಂದ ಇದು ಸಂಭವಿಸಿತು, ಇದರ ಕೀರ್ತಿ ಬಂಗಾಲದ ಜನತೆಗೆ ಸಲ್ಲಬೇಕು" ಎಂದರು.

ಎಡರಂಗ ಕಾಂಗ್ರೆಸಿನೊಂದಿಗೆ ಸೇರಿ ಸರಕಾರ ರಚಿಸುವ ಬಗ್ಗೆ ಕೇಳಿದಾಗ ಅದಿನ್ನೂ ನಮ್ಮ ಅಜೆಂಡಾದಲ್ಲಿ ಚರ್ಚೆಗೆ ಬಂದಿಲ್ಲ, ನಾವು ಆ ಬಗ್ಗೆ ಯೋಚಿಸಿಲ್ಲ ಈ ಸಮರ ಮುಗಿಯಲಿ ಎಂದರು.

ಕೆಲವು ಪ್ರದೇಶಗಳಲ್ಲಿ ಅಭಿವೃದ್ಧಿಯ ಭಾಗವಾಗಿ ಜಮೀನು ಕಳಕೊಂಡವರಿಗೆ ಜೀವನಾಧಾರ ಕಲ್ಪಿಸಲು ಹುಟ್ಟಿಕೊಂಡ 'ಸಿಂಡಿಕೇಟ್'ಗಳು ಈಗ ಟಿಎಂಸಿ ಆಳ್ವಿಕೆಯಲ್ಲಿ ಮಾಫಿಯಾಗಳಾಗಿ ಬಿಟ್ಟಿವೆ, ಇದರ ವಿರುದ್ಧ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಮಾತಾಡಿದ್ದಾರೆ, ಪ್ರಧಾನ ಮಂತ್ರಿಗಳೂ ಮಾತಾಡಿದ್ದಾರೆ, ಸಿಪಿಐ(ಎಂ)ನ ನಿಲುವೇನು ಎಂದು ಕೇಳಿದಾಗ, ಸೀತಾರಾಮ್ ಯೆಚೂರಿಯವರು "ನಾವು ಅದನ್ನು ಎದುರಿಸಿ ನಿಲ್ಲಬೇಕಾಗಿದೆ, ಅದನ್ನು ನಿಲ್ಲಿಸಿ ಬಿಡಬೇಕಾಗಿದೆ. ಅವುಗಳ ಕಾರ್ಯಾಚರಣೆ ಈಗ ಮಾಫಿಯಾದಂತೆಯೇ ಇದೆ. ಎಡರಂಗ ಆಳ್ವಿಕೆಯ ಕೊನೆಯ ಭಾಗದ ವೇಳೆಗೆ ಈ ಪ್ರವೃತ್ತಿಗಳು ಕಾಣಲಾರಂಭಿಸಿದ್ದವು. 20ವರ್ಷಗಳ ನಮ್ಮ ಸರಕಾರದ ನಂತರ ಹಲವು ಮಂದಿ ನಮ್ಮತ್ತ ಬರಲಾರಂಭಿಸಿದ್ದರು, ನಮ್ಮ ಸಿದ್ಧಾಂತದಿಂದಾಗಿ ಅಲ್ಲ,, ಬದಲಾಗಿ, ನಾವು ಅಧಿಕಾರದಲ್ಲಿ ಇದ್ದುದರಿಂದಾಗಿ. ಅವರು ನಿಜವಾಗಿ ಏನು ಮಾಡುತ್ತಿದ್ದಾರೆ ಎಂದು ಅರಿಯಲು ಸಮಯ ಹಿಡಿಯಿತು. ಆದರೆ ಆ ವೇಳೆಗಾಗಲೇ ಕೇಡು ಉಂಟಾಗಿತ್ತು, ಅದಕ್ಕೆ ನಾವು ಬೆಲೆ ತೆತ್ತಿದ್ದೇವೆ. ಅದನ್ನು ಕೈಗೆತ್ತಿಕೊಳ್ಳಲೇಬೇಕು, ಅದೊಂದು ಮಾಫಿಯಾ ಎಂಬ ಕಾರಣಕ್ಕಷ್ಟೇ ಅಲ್ಲ, ಅದು ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡುವ ಅತಿ ದೊಡ್ಡ ಅಂಶ ಎಂಬ ಕಾರಣಕ್ಕಾಗಿ. ಕಾನೂನು-ವ್ಯವಸ್ಥೆಯನ್ನು ಮತ್ತೆ ತರಲು ಅದನ್ನು ನೇರವಾಗಿ ಎದುರಿಸಲೇ ಬೇಕು" ಎಂದರು.

ಮತ್ತೆ ಅಧಿಕಾರಕ್ಕೆ ಬಂದರೆ ಆದ್ಯತೆಗಳೇನು ಎಂದು ಕೇಳಿದಾಗ ಕೈಗಾರಿಕೀಕರಣವಿಲ್ಲದೆ ಉದ್ಯೋಗಾವಕಾಶ ನಿರ್ಮಾಣ ಮಾಡದೆ ಮುನ್ನಡೆ ಸಾಧ್ಯವಿಲ್ಲ. ಅದು ಸರಿಯಾದ ಧೋರಣೆಯಾಗಿತ್ತು ಎಂದು ಭಾವಿಸುತ್ತೇನೆ, ಅದು ಹಾಗೆಯೇ ಮುಂದುವರೆಯುತ್ತದೆ ಎಂದು ಯೆಚೂರಿ ಉತ್ತರಿಸಿದರು. ಈಗ ಬಂಗಾಲದ ಭವಿಷ್ಯಕ್ಕೆ ಉದ್ಯೋಗಗಳ ಸೃಷ್ಟಿ ಬೃಹತ್ ಪ್ರಮಾಣದಲ್ಲಿ ನಡೆಯಬೇಕಾಗಿದೆ, ಬಂಗಾಲದ ಯುವಜನರಿಗೆ ಇಲ್ಲಿ ದಾರಿಗಳನ್ನು ತೆರೆದು ಕೊಡಬೇಕಾಗಿದೆ. ಮತ್ತು ಮಹಿಳೆಯರ ಸುರಕ್ಷಿತತೆಯ ಪ್ರಶ್ನೆಯೂ ಇದೆ. ತಮ್ಮ ವಿದ್ಯಾರ್ಥಿ ದೆಸೆಯ ದಿನಗಳಲ್ಲಿ ಇದೊಂದು ಸಮಸ್ಯೆಯೇ ಆಗಿರಲಿಲ್ಲ ಎಂದು ಹೇಳಿದರು.

ತೆಭಾಗ ರೈತ ಹೋರಾಟದ ಭೂಮಿ ನಮ್ಮಾನದಲ್ಲಿ – ಟಿಎಂಸಿ ಆಳ್ವಿಕೆಯಲ್ಲಿ ಇಲ್ಲಿ ರೈತರ ಆತ್ಮಹತ್ಯೆಗಳು ನಡೆದಿವೆ.



ಒಣಗಿದ ಭೂಮಿ, ಈಡೇರದ ಭರವಸೆಗಳು....

ಮಹಾರಾಷ್ಟ್ರದ ಬರಪೀಡಿತ ಮರಾಠವಾಡಾ ಪ್ರದೇಶದಲ್ಲಿ ಕಿಸಾನ್ ಸಭಾ ವಿಪರೀತ ಕರ್ಷಕ ಸಂಕಟದ ಪ್ರಶ್ನೆಯ ಮೇಲೆ ನಡೆಸುತ್ತಿರುವ ಪ್ರಚಾರಾಂದೋಲನದಲ್ಲಿ ಭಾಗವಹಿಸಲು ಹೋಗಿದ್ದ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯೆ ಬೃಂದಾ ಕಾರಟ್ 15–20 ಹಳ್ಳಿಗಳಲ್ಲಿ ಸಂಚರಿಸಿದರು, ಔರಂಗಾಬಾದ್, ಬೀಡ್ ಮತ್ತು ಜಾಲ್ನಾ ಜಿಲ್ಲೆಗಳಲ್ಲಿ ರೈತರನ್ನು ಮತ್ತು ರೇಗಾ ಕಾರ್ಮಿರಕನ್ನು ಭೇಟಿಯಾದರು. ನಂತರ ಸಿಪಿಐ(ಎಂ) ಕೇಂದ್ರ ಕಾರ್ಯಕಾರಿ ಮಂಡಳಿಯ ಸದಸ್ಯ ಅಶೋಕ ಧವಳೆ ಮತ್ತಿತರ ಮುಖಂಡರೊಂದಿಗೆ ಔರಂಗಾಬಾದ್ ಜಿಲ್ಲಾ ಕಮಿಶನರ್ ಅವರನ್ನು ಭೇಟಿ ಮಾಡಿ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳ ವೇಳೆ ಪ್ರಧಾನಿ ನರೇಂದ್ರ ಮೋದಿ ಮರಾಠವಾಡ ರೈತರು ಮತ್ತು ಜನರಿಗೆ ಭರವಸೆಗಳ ಮಹಾಪೂರವನ್ನೇ ಹರಿಸಿದ್ದರು. ಅವುಗಳಲ್ಲಿ ಯಾವುದೂ ಈಡೇರಿಲ್ಲ. ಮೋದಿಯವರು ವಿದೇಶ ಪ್ರವಾಸಕ್ಕೆ ಸ್ವಲ್ಪ ಬಿಡುವು ಕೊಟ್ಟು ಇಲ್ಲಿನ ಪರಿಸ್ಥಿತಿಯ ಅಧ್ಯಯನಕ್ಕಾಗಿ ಇಲ್ಲಿಗೆ ಭೇಟಿ ಕೊಡುವುದು ಅಗತ್ಯ. ಸರಕಾರದ ಹೇಳಿಕೆಗಳು ಅಪ್ಪಟ ಸುಳ್ಳು ಎಂದು ಜನಾಬಾಯಿ ಮತ್ತು ಭುಮ್ರೆ ಯಾಕೆ ಹೇಳುತ್ತಾರೆ ಎನ್ನುವುದನ್ನು ತಿಳಿಯಲು ಮೋದಿಯವರಿಗೆ ಇದು ನೆರವಾಗುತ್ತದೆ ಎನ್ನುತ್ತಾರೆ **ಬೃಂದಾ ಕಾರಟ್** ಈ ಭೇಟಿಯ ಆಧಾರದಲ್ಲಿ ಬರೆದಿರುವ ಈ ಲೇಖನದಲ್ಲಿ. ಅನು: ವಿಶ್ವ, ಕೋಲಾರ



ಭಾರತದಾದ್ಯಂತ ವಿವಿಧ ರಾಜ್ಯಗಳಲ್ಲಿ ಹರಡಿರುವ 257 ಜಿಲ್ಲೆಗಳಲ್ಲಿನ ಗಂಭೀರ ಬರ ಪರಿಸ್ಥಿತಿಯನ್ನು ನಿಭಾಯಿಸಲು ಕೇಂದ್ರ ಸರಕಾರ ಸಾಧ್ಯವಾದುದೆಲ್ಲವನ್ನೂ ಮಾಡುತ್ತಿದೆ ಎಂದು ರಾಜ್ಯಸಭೆಯಲ್ಲಿ ಸರಕಾರ ಹೇಳಿರುವುದಕ್ಕೆ ಜನಾಬಾಯಿ ಕೊರ್ಡೆ ಅಥವಾ ಪ್ರಭಾಕರ ಭುಮ್ರೆ ಹೇಗೆ ಪ್ರತಿಕ್ರಿಯಿಸಬಹುದು? ಈ ಇಬ್ಬರೂ ಮಹಾರಾಷ್ಟ್ರದ ಮರಾಠವಾಡಾ ಪ್ರದೇಶದ ಬೀಡ್ ಮತ್ತು ಜಾಲ್ನಾದ ನಿವಾಸಿಗಳು. ಈ ಪ್ರದೇಶದಲ್ಲಿ ಎಂಟು ಜಿಲ್ಲೆಗಳಿದ್ದು ಅಲ್ಲಿ ಕಳೆದ ಮೂರು ವರ್ಷಗಳಿಂದ ತಾಂಡವವಾಡುತ್ತಿರುವ ಬರಗಾಲ ಇದೀಗ ಪರಾಕಾಷ್ಠೆ ಮುಟ್ಟಿದೆ.

ಜನಾಬಾಯಿ ಕೊರ್ಡೆ ಬೀಡ್‌ನ ಒಂದು ಗ್ರಾಮದ ಸರಪಂಚರು. ಮರಾಠವಾಡ ಪ್ರದೇಶದಲ್ಲಿ ಕಿಸಾನ್ ಸಭಾದ ಪ್ರಚಾರಾಂದೋಲನದ ವೇಳೆ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ (ರೇಗಾ) ಕೆಲಸದ ಸ್ಥಳಗಳಲ್ಲಿ ಕಾರ್ಮಿಕರೊಂದಿಗೆ ಸಂವಾದಿಸುತ್ತಿದ್ದಾಗ ನಮ್ಮ ತಂಡ ಜನಾಬಾಯಿ ಅವರನ್ನು ಭೇಟಿ ಮಾಡಿತ್ತು. ಕೃಷಿ ಸಂಬಂಧಿ ಕೆಲಸಗಳು ಪೂರ್ಣ ಸ್ಥಗಿತಗೊಂಡಿರುವುದರಿಂದ ಇಲ್ಲಿ ರೇಗಾ ಒಂದೇ ಉಳಿದಿರುವ ಜೀವನ ಮಾರ್ಗವಾಗಿದೆ. ಎಲ್ಲಾ ಬರಪೀಡಿತ ಪ್ರದೇಶಗಳಲ್ಲಿ ರೇಗಾ ಕೆಲಸದ ಅವಧಿಯನ್ನು ನೂರು ದಿನಗಳಿಂದ 150 ದಿನಗಳಿಗೆ ವಿಸ್ತರಿಸುವುದಾಗಿ ಕೇಂದ್ರ ಸರಕಾರ ಘೋಷಿಸಿದೆ. ಆದರೆ ಅದು ಇನ್ನೂ ಜಾರಿಯಾಗಿಲ್ಲ. ಗ್ರಾಮೀಣಾಭಿವೃದ್ಧಿ ಸಚಿವಾಲಯದ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಮಾಹಿತಿ ಪ್ರಕಾರ 2015–16ರಲ್ಲಿ ಮರಾಠವಾಡ ಪ್ರದೇಶದ ಎಂಟು ಜಿಲ್ಲೆಗಳ ಪೈಕಿ ಐದರಲ್ಲಿ–ಔರಂಗಾಬಾದ್, ಜಾಲ್ನಾ, ನಾಂದೇಡ್, ಒಸ್ಮಾನಾಬಾದ್ ಮತ್ತು ಹಿಂಗೋಲಿ–ಪ್ರತಿ ಜಿಲ್ಲೆಯಲ್ಲಿ ಸರಾಸರಿ ಕೆಲಸದ ದಿನಗಳು ಕೇವಲ 47 ದಿನಗಳು ಅಥವಾ ಅದಕ್ಕಿಂತಲೂ ಕಡಿಮೆ ಆಗಿದ್ದವು. ಲಾತುರ್‌ನಲ್ಲಿ 72 ದಿನಗಳು ಹಾಗೂ ಬೀಡ್‌ನಲ್ಲಿ 81 ದಿನಗಳು.

ಉದ್ಯೋಗ ಖಾತರಿ ಯೋಜನೆಗೆ ಕಡಿಮೆ ಹಣ

ಲಕ್ಷಾಂತರ ಭೂರಹಿತ ಕೃಷಿ ಕಾರ್ಮಿಕರು, ಕಬ್ಬು ಕಟಾವು ಮಾಡುವವರು ಮತ್ತು ಸಣ್ಣ ರೈತರು ಕೆಲಸಕ್ಕಾಗಿ ಹತಾಶೆಯೊಂದ ಎದುರು ನೋಡುತ್ತಿದ್ದರೂ ಪ್ರತಿ ಜಿಲ್ಲೆಯಲ್ಲಿ ಕಳೆದ ವರ್ಷ ರೇಗಾದಡಿ ಕೆಲಸ ಸಿಕ್ಕಿದ್ದು 70000 ಜನರಿಗೆ ಮಾತ್ರ. ಬೀಡ್ ಮಾತ್ರ ಇದಕ್ಕೆ ಅಪವಾದವಾಗಿದ್ದು ಅಲ್ಲಿ 1.19 ಲಕ್ಷ ಜನರಿಗೆ ಉದ್ಯೋಗ ಸಿಕ್ಕಿದೆ. ಇದೀಗ ಬೇಡಿಕೆ ಪರಾಕಾಷ್ಠೆ ಮುಟ್ಟಿರುವ ಈ ತಿಂಗಳಲ್ಲಿ ಪ್ರತಿ ಜಿಲ್ಲೆಯಲ್ಲಿ ಉದ್ಯೋಗ ಸಿಕ್ಕಿರುವವರ ಸರಾಸರಿ ಸಂಖ್ಯೆ ಕೇವಲ 4000. ಸಾಕಷ್ಟು ಹಣ ಬಿಡುಗಡೆ ಮಾಡಲು ಕೇಂದ್ರ ಸರಕಾರ ನಿರಾಕರಿಸುತ್ತಿರುವುದು ಇದಕ್ಕೆ ಮುಖ್ಯ ಕಾರಣ ಎಂದು ಅಧಿಕಾರಿಗಳು ಅನಧಿಕೃತವಾಗಿ ಹೇಳುತ್ತಾರೆ. ಇಡೀ ಮಹಾರಾಷ್ಟ್ರ ರಾಜ್ಯಕ್ಕೆ ಸಂಬಂಧಿಸಿ ಹೇಳುವುದಾದರೆ, ಬರಗಾಲ–ಪೂರ್ವ ವರ್ಷವಾದ 2012–13ರಲ್ಲಿ ರೇಗಾಕ್ಕೆ ಕೇಂದ್ರ ಮಂಜೂರು ಮಾಡಿದ್ದಕ್ಕಿಂತ 212 ಕೋಟಿ ರೂಪಾಯಿಯಷ್ಟು ಕಡಿಮೆ ಹಣವನ್ನು 2015–16ರಲ್ಲಿ ಮಂಜೂರು ಮಾಡಲಾಗಿದೆ.

ಇನ್ನೂ ಆಘಾತಕರ ಸಂಗತಿಯೆಂದರೆ, ಕೆಲಸ ಸಿಕ್ಕಿದರೂ ಅನೇಕ ಜನರಿಗೆ ಕೂಲಿಯೇ ಸಿಗುವುದಿಲ್ಲ. ಕೆಲಸ ಒದಗಿಸುವಲ್ಲಿ ತುಲನಾತ್ಮಕವಾಗಿ ಉತ್ತಮ ಸ್ಥಿತಿಯಲ್ಲಿರುವ ಬೀಡ್ ಜಿಲ್ಲೆ, ಕೂಲಿ ವಿತರಿಸುವಲ್ಲಿ ತೀರಾ ಕೆಟ್ಟ ಸ್ಥಿತಿಯಲ್ಲಿದೆ. ಕಳೆದ ವರ್ಷ ಈ ಜಿಲ್ಲೆಯಲ್ಲಿ ಸರಕಾರ ರೇಗಾ ಕಾರ್ಮಿಕರಿಗೆ ಕೊಡಬೇಕಾದ ಬಾಕಿ ಕೂಲಿ ಹಣ 5.58 ಕೋಟಿ ರೂಪಾಯಿಗಳು. ನಾವು ಜನಾಬಾಯಿ ಅವರನ್ನು ಭೇಟಿ ಮಾಡಿದ ಆಕೆಯ ಗ್ರಾಮ ತಕರ್ವಾನ್‌ನಲ್ಲಿ ಒಂದುವರೆ ತಿಂಗಳ ಹಿಂದೆ ಕೆಲಸ ಆರಂಭವಾದರೂ ಇದುವರೆಗೂ 150 ಕಾರ್ಮಿಕರಿಗೆ ಒಂದು ಪೈಸೆ ಕೂಲಿಯನ್ನೂ ಕೊಟ್ಟಿಲ್ಲ. ಸುಡು ಬಿಸಿಲಿನಲ್ಲಿ, ಕುಡಿಯಲು ಸಾಕಷ್ಟು ನೀರು ಕೂಡ ಇಲ್ಲದ ಸ್ಥಿತಿಯಲ್ಲಿ ಮಹಿಳೆಯರು ಎಂಟು ಗಂಟೆಗಳ ಒಂದು ಕೆಲಸದ ದಿನದಲ್ಲಿ ನೆಲ ಅಗೆದು 5000 ಕೆಜಿ ಮಣ್ಣನ್ನು ಹೊರಬೇಕು. ಇದಕ್ಕಿಂತ ಅಮಾನವೀಯವಾದ ಕೆಲಸದ ನಿಯಮ ಬೇರೆ ಯಾವುದಾದರೂ ಇದ್ದೀತೇ? ಇದೊಂದು ಅಸಾಧ್ಯ ಕೆಲಸ.

ಬರಗಾಲದಿಂದಾಗಿ ಮಣ್ಣು ಗಟ್ಟಿಯಾಗಿದೆ ಹಾಗೂ ಕಲ್ಲಿನಂತಾಗಿದೆ ಎಂದು ಅಧಿಕಾರಿಗಳೇ ಒಪ್ಪುತ್ತಾರೆ. ಆದರೆ ಕೂಲಿ ದರದಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಇದರ ಪರಿಣಾಮವಾಗಿ ಕಾರ್ಮಿಕರು ಪಡೆಯಬೇಕಾದ ಕನಿಷ್ಟ ಕೂಲಿಗಿಂತ ಶೇಕಡಾ 30ರಷ್ಟು ಕಡಿಮೆ ಕೂಲಿ ಪಡೆಯುವಂತಾಗಿದೆ. ಅವರು 11ರಿಂದ 12 ಗಂಟೆ ಕಾಲ ದುಡಿದರೆ ಮಾತ್ರ ದಿನದ ಕನಿಷ್ಟ ಕೂಲಿ ಸಿಗುತ್ತದೆ. ಜನಾಬಾಯಿ ಈ ಕಾರ್ಮಿಕರ ಪರವಾಗಿ ಹೋರಾಡುತ್ತಿದ್ದಾರೆ. ನಿರ್ಣಾಯಕವಾದ ಆಹಾರ ಭದ್ರತೆ ವಿಷಯವನ್ನೂ ಅವರು ಕೈಗೆತ್ತಿಕೊಂಡಿದ್ದಾರೆ. ಸಾರ್ವಜನಿಕ ವಿತರಣೆ ವ್ಯವಸ್ಥೆ ಮೂಲಕ ಆಹಾರ ಪದಾರ್ಥಗಳನ್ನು ವಿತರಿಸಲು ತುರ್ತು ಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಎಂದೂ ಜನಾಬಾಯಿ ಹೇಳುತ್ತಾರೆ. ಆದರೆ ಅವರ ಮಾತನ್ನು ಕೇಳುವವರಾರು?.

ದಲಿತರೇ ಹೆಚ್ಚಾಗಿರುವ ಭೂರಹಿತರು ಮತ್ತು ಕೃಷಿಕೂಲಿಗಾರರು ನಿಸ್ಸಂಶಯವಾಗಿಯೂ ಹೆಚ್ಚು ಬಾಧಿತರಾಗಿದ್ದು ರೈತರ ಪರಿಸ್ಥಿತಿ ಕೂಡ ಭಿನ್ನವಾಗಿಯೇನೂ ಇಲ್ಲ.

ರೈತರ ಹತಾಶೆ

ಪ್ರಭಾಕರ ಭುಮ್ರೆ ಜಾಲ್ನಾ ಜಿಲ್ಲೆಯ ಒಬ್ಬ ರೈತ. ಇಲ್ಲಿನ ಅನೇಕ ಜನರಂತೆ ಆತ ಕೂಡ ಹಣ್ಣು ಬೆಳೆಗಾರನಾಗಿದ್ದು 400 ಕಿತ್ತಳೆ ಮರಗಳನ್ನು ಬೆಳೆದಿದ್ದಾನೆ. ಆತ ಕಳೆದ ಎರಡು ವರ್ಷಗಳಲ್ಲಿ ಎರಡು ಲಕ್ಷ ರೂಪಾಯಿ ಸಾಲ ಪಡೆದಿದ್ದ. ನೀರು ಸರಬರಾಜಿಗಾಗಿ ಖಾಸಗಿ ಕಂಪೆನಿಗಳಿಗೆ ಆತ ತುಂಬಾ ಹಣ ನೀಡಿದ್ದರೂ ತನ್ನ ಕಿತ್ತಳೆ ಮರಗಳನ್ನು ಉಳಿಸಿಕೊಳ್ಳಲು ಭುಮ್ರೆಗೆ ಸಾಧ್ಯವಾಗಲಿಲ್ಲ. ಅಂತಿಮವಾಗಿ ಆತ ಆ ಮರಗಳನ್ನು ಕಡಿದು ಹಾಕಿದ. ಇದು ಈ ರೀತಿಯ ಒಂದೇ ಪ್ರಕರಣವಲ್ಲ. ಜಾಲ್ನಾ ಜಿಲ್ಲೆಯಲ್ಲಿ ಕಿತ್ತಳೆ ಮರ ಬೆಳೆಯಲಾಗುವ ಒಟ್ಟು ಪ್ರದೇಶದಲ್ಲಿ ಸುಮಾರು ಮೂರನೇ ಒಂದು ಭಾಗಕ್ಕಿಂತ ಹೆಚ್ಚು ಅಂದರೆ 9000 ಹೆಕ್ಟೇರ್ ಪ್ರದೇಶದಲ್ಲಿನ ಕಿತ್ತಳೆ ಮರಗಳನ್ನು ಕಡಿದುರುಳಿಸಲಾಗಿದೆ. ಆದರೆ ಈ ರೈತರಿಗೆ ಸರಕಾರದಿಂದ ಯಾವುದೇ ಸಹಾಯ ಸಿಕ್ಕಿಲ್ಲ. ಬಹುತೇಕ ಕಿತ್ತಳೆ ಬೆಳೆಗಾರರಿಗೆ ಯಾವುದೇ ಪರಿಹಾರವೂ ಸಿಕ್ಕಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಸಾಲ ಮರುಪಾವತಿ ಮಾಡುವಂತೆ ಭುಮ್ರೆ ಅವರಂಥ ರೈತರಿಗೆ ಬ್ಯಾಂಕ್‌ಗಳು ನೋಟಿಸ್ ಕಳಿಸುತ್ತಿವೆ. ರೈತರ ಹತಾಶೆ ಎದ್ದು ಕಾಣುತ್ತಿದ್ದು ಈ ಪ್ರದೇಶದಲ್ಲಿ ಇದೇ ವರ್ಷದ ಜನವರಿಯಿಂದೀಚೆಗೆ 325 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಔರಂಗಾಬಾದ್‌ನ ಪಚೋಡ್‌ನಲ್ಲಿನ ದನಗಳ ಸಂತೆಯಲ್ಲಿ ನಾವು ಭುಮ್ರೆಯನ್ನು ಭೇಟಿ ಮಾಡಿದೆವು. ಅಲ್ಲಿ ಆತ ತನ್ನ ಎರಡು ಎತ್ತುಗಳನ್ನು ಮಾರಿದ್ದ. ಹತಾಶರಾದ ರೈತರ ಗುಂಪಿನಲ್ಲಿ ಕುಳಿತಿದ್ದ ಭುಮ್ರೆ ಇನ್ನೇನು ಕಣ್ಣೀರು ಹಾಕುವುದರಲ್ಲಿದ್ದ. ಸುಮಾರು ಒಂದು ವರ್ಷದ ಹಿಂದೆ ಒಂದು ಲಕ್ಷ ರೂಪಾಯಿ ಕೊಟ್ಟು ಖರೀದಿಸಿದ್ದ ತನ್ನ ಪ್ರಾಣಿಗಳನ್ನು ಆತ ಕೇವಲ 20000 ರೂಪಾಯಿಗಳಿಗೆ ಮಾರಿದ್ದ. ಇನ್ನೊಬ್ಬ ರೈತ ಸಾಲಾರ್ ಖಾನ್ ಕತೆಯೂ ಅದೇ ರೀತಿ ಇತ್ತು. ಆತನೂ ಎತ್ತಿನ ಜೋಡಿಯನ್ನು ಖರೀದಿಸಿದ್ದಕ್ಕಿಂತ ಅರ್ಧ ಬೆಲೆಗೆ ಮಾರಾಟ ಮಾಡಿದ್ದ. 90000 ರೂಪಾಯಿ ಸಾಲ ಹೊಂದಿರುವ ಆತನ ಹೆಣ್ಣುಮಕ್ಕಳು ಶಾಲೆಯನ್ನು ತೊರೆಯಬೇಕಾಯಿತು. ಭಾರತೀಯ ಜನತಾ ಪಕ್ಷದ ಸರಕಾರ ಗೋಹತ್ಯೆ ಮೇಲೆ ನಿಷೇಧ ಹೇರಿದ್ದರಿಂದ ರಾಜ್ಯದಾದ್ಯಂತ ಈ ಪ್ರಾಣಿಗಳ ಬೆಲೆ ಪಾತಾಳಕ್ಕೆ ಕುಸಿದಿದೆ. ಮರಾಠವಾಡ ಪ್ರದೇಶದಲ್ಲಿ ಸಾಕಾಣಿಕೆ ವೆಚ್ಚ ಹೆಚ್ಚಿರುವುದರಿಂದ ಪರಿಸ್ಥಿತಿ ಇನ್ನೂ ಗಂಭೀರವಾಗಿದೆ. ದನಗಳ ಸಂತೆಗೆ ಸುಮಾರು 3000 ದನ–ಎತ್ತುಗಳನ್ನು ತರಲಾಗಿತ್ತು. ಹತಾಶೆಯಿಂದ ಸಿಕ್ಕಿದ ಬೆಲೆಗೆ ಮಾರಾಟ ಮಾಡುವುದು ಬದುಕುಳಿಯುವ ಕಟ್ಟಕಡೆಯ ಕಾರ್ಯತಂತ್ರವಾಗಿದೆ. ಅವರಿಗೆ ಅದು ಬಿಟ್ಟು ಅನ್ಯ ಮಾರ್ಗವಿಲ್ಲ.

ಸರಕಾರದ ಯೋಜನೆಯಡಿ ಗೋಶಾಲೆಗಳನ್ನು ನಿರ್ಮಿಸಿದ್ದರೆ ಸ್ವಲ್ಪ ಪರಿಹಾರ ಸಿಗಬಹುದಿತ್ತು. ಆದರೆ ಸರಕಾರ ಅವುಗಳನ್ನು ವಿವಿಧ ನೊಂದಾಯಿತ ಸಹಕಾರಿ ಸಂಘಗಳಿಗೆ ಹೊರಗುತ್ತಿಗೆ ನೀಡಿದೆ. ಬಿಜೆಪಿಯ ದಿವಂಗತ ನಾಯಕ ಗೋಪಿನಾಥ ಮುಂಡೆ ಅವರ ಇಬ್ಬರು ಪುತ್ರಿಯರು ಚುನಾವಣೆಗಳಲ್ಲಿ ಗೆದ್ದು ಹೋಗಿರುವ ಬೀಡ್ ಜಿಲ್ಲೆಯಲ್ಲಿ, ಈ ರೀತಿಯ 137 ಗೋಶಾಲೆಗಳಿವೆ. ಈ ಪ್ರದೇಶದಲ್ಲೇ ಇದು ಹೆಚ್ಚು ಗೋಶಾಲೆಗಳು. ಕೇಜ್‌ನಲ್ಲಿರುವ ಒಂದು ಅತಿದೊಡ್ಡ ಗೋಶಾಲೆಯಲ್ಲಿ 1400 ಪ್ರಾಣಿಗಳಿವೆ. ಈ ಗೋಶಾಲೆಯನ್ನು ಜೈ ಬಜರಂಗ ಬಲಿ ಸಂಘ ನಡೆಸುತ್ತಿದೆ. ಮಾರ್ಚ್‌ನಲ್ಲಿ ಗೋಶಾಲೆ ಆರಂಭಿಸಿದಾಗಿನಿಂದಲೂ ಸಂಘಕ್ಕೆ ಯಾವುದೇ ಧನಸಹಾಯ ಸಿಕ್ಕಿಲ್ಲ. ಗೋಶಾಲೆಯ ದಿನದ ವೆಚ್ಚ ಸುಮಾರು ಒಂದು ಲಕ್ಷ ರೂಪಾಯಿ ಆಗುತ್ತದೆ ಎಂದು ಸಂಘದ ಸುಪರ್‌ವೈಸರ್ ಹೇಳಿದರು. ಹಾಗಾದರೆ ಅದನ್ನು ಹೇಗೆ ನಡೆಸುತ್ತೀರಾ ಎಂಬ ನಮ್ಮ ಪ್ರಶ್ನೆಗೆ ಇನ್ನಷ್ಟು ಸಾಲ ಮಾಡುವ ಮೂಲಕ ಎಂಬ ಉತ್ತರ ದೊರಕಿತು. ಆದರೆ ಬೇರೆ ಕೆಲವರು ಹೇಳುವ ಪ್ರಕಾರ ಈ ನೊಂದಾಯಿತ ಸಂಘಗಳು ರೈತರಿಗೆ ಮೇವಿಗಾಗಿ ಸಿಗಬೇಕಾದ ನಿಜವಾದ ಮೊತ್ತವನ್ನು ಕೊಡುವುದಿಲ್ಲ. ಸರಕಾರದ ಸಬ್ಸಿಡಿ ವಸ್ತು ರೂಪದಲ್ಲಿರಬೇಕಾಗಿದ್ದು ಮೇವು ಮತ್ತು ನೀರಿಗೆಂದು ದೊಡ್ಡ ಹಸುಗಳಿಗೆ ದಿನಕ್ಕೆ 70 ರೂಪಾಯಿ ಹಾಗೂ ಚಿಕ್ಕ ಹಸುಗಳಿಗೆ 31 ರೂಪಾಯಿ ಎಂದು ನಿಗದಿಪಡಿಸಲಾಗಿದೆ.

ಬಹುತೇಕ ಜಿಲ್ಲೆಗಳಲ್ಲಿ ಗೋಶಾಲೆ ಯೋಜನೆ ಆರಂಭವಾಗಿಲ್ಲ. ಸರಕಾರವೇ ನಿರ್ದಿಷ್ಟ ಸಮಯದ ವರೆಗೆ ದೊಡ್ಡ ಸಂಖ್ಯೆಯಲ್ಲಿ ಗೋಶಾಲೆಗಳನ್ನು ನಡೆಸಬೇಕು ಹಾಗೂ ಕೇಂದ್ರ ಸರಕಾರ ಇದಕ್ಕೆ ನೆರವು ನೀಡಬೇಕು. ಸಂಸತ್ತಿನ ಚರ್ಚೆಯ ವೇಳೆ ಈ ಬಗ್ಗೆ ಯಾವುದೇ ಆಶ್ವಾಸನೆ ನೀಡಲಾಗಿಲ್ಲ.

ನೀರಿನ ರಾಜಕೀಯ

ಲಾತೂರ್‌ಗೆ ಟ್ರೇನ್ ಮೂಲಕ ನೀರನ್ನು ಸಾಗಿಸಿದ್ದು ಭಾರೀ ಪ್ರಚಾರ ಗಿಟ್ಟಿಸಿಕೊಂಡಿತು. ಆದರೆ ಈ ಪ್ರದೇಶಕ್ಕೆ ಪೂರೈಸಿದ 3000 ಟ್ಯಾಂಕರ್ ನೀರು ಏನೇನೂ ಸಾಲದು ಎನ್ನುವುದು ಕಟುವಾಸ್ತವವಾಗಿದೆ. ಖಾಸಗಿ ಕಂಪೆನಿಗಳು ನೀರಿಗೆ ವಿಧಿಸುವ ದರದ ಮೇಲೆ ಯಾವುದೇ ನಿಯಂತ್ರಣವಿಲ್ಲ. 3000 ಲೀಟರ್ ಟ್ಯಾಂಕರ್‌ಗೆ 1000 ರೂಪಾಯಿ ವಿಧಿಸಲಾಗುತ್ತಿದೆ. ಇದು ದೆಹಲಿಯಲ್ಲಿನ ದರಕ್ಕಿಂತ ದುಪ್ಪಟ್ಟು ಆಗಿದೆ. ಈ ಖಾಸಗಿ ನೀರಿನ ಕಂಪೆನಿಗಳ ಪೈಕಿ ಅನೇಕ ಕಂಪೆನಿಗಳು ಈ ಪ್ರದೇಶದ ವಿವಿಧ ರಾಜಕೀಯ ಪಕ್ಷಗಳ ನಾಯಕರ ಜೊತೆ ನಿಕಟ ಸಂಪರ್ಕ ಹೊಂದಿವೆ ಎನ್ನುವುದು ಬಹಿರಂಗ ರಹಸ್ಯವಾಗಿದೆ. ಈ ಕಾರಣಕ್ಕಾಗಿಯೇ ಈ ಕಂಪೆನಿಗಳನ್ನು ಪ್ರಶ್ನಿಸಲು ಯಾರೂ ಹೋಗುವುದಿಲ್ಲ.

ಬಿಜೆಪಿ ನೇತೃತ್ವದ ಸರಕಾರದ ಆದ್ಯತೆಗಳು ಬೇರೆಲ್ಲೋ ಇವೆ. ಮದ್ಯ ತಯಾರಿಸುವ ಬ್ರೂವರಿಗಳು ಮತ್ತು ಡಿಸ್ಟಿಲರಿಗಳಿಗೆ ಸರಬರಾಜು ಮಾಡುವ ನೀರಿನ ಪ್ರಮಾಣವನ್ನು ಕಡಿತಮಾಡಬೇಕೆಂದು ಕೋರಿ ಸಲ್ಲಿಸಲಾಗಿದ್ದ ಅರ್ಜಿಯೊಂದನ್ನು ಬಾಂಬೆ ಹೈಕೋರ್ಟ್‌ನ ಔರಂಗಾಬಾದ್ ಪೀಠ ಎಪ್ರಿಲ್ 24ರಂದು ಆಲಿಸಿತು. ಔರಂಗಾಬಾದ್ ಬೀರ್ ತಯಾರಿಕೆಯ ಒಂದು ಪ್ರಮುಖ ಕೇಂದ್ರ. ಈ ಘಟಕಗಳಿಗೆ ಪ್ರತಿದಿನ ಐದು ಮಿಲಿಯ ಲೀಟರ್‌ಗಿಂತ ಹೆಚ್ಚಿನ ನೀರು ಬೇಕಾಗುತ್ತದೆ. ವಿಧಾನಸಭೆಯಲ್ಲಿ ಈ ವಿಚಾರ ಪ್ರಸ್ತಾವವಾದಾಗ, ಈ ಘಟಕಗಳಿಗೆ ನೀರು ಸರಬರಾಜು ಕಡಿತಗೊಳಿಸಲು ಸಾಧ್ಯವಿಲ್ಲ ಎಂದು ಗ್ರಾಮೀಣಾಭಿವೃದ್ಧಿ ಖಾತೆ ಸಚಿವೆ ಪಂಕಜಾ ಮುಂಡೆ ಹೇಳಿದರು. ಪಂಕಜಾ ನಿರ್ದೇಶಕರಾಗಿರುವ ಕಂಪೆನಿಯೊಂದು ಡಿಸ್ಟಿಲರಿ ನಡೆಸುತ್ತಿದ್ದು ಜನರ ಹಿತಕ್ಕಿಂತ ಆ ಕಂಪೆನಿಯ ಹಿತವೇ ಅವರಿಗೆ ಮುಖ್ಯವಾಯಿತು ಎಂಬ ಆರೋಪ ಕೇಳಿ ಬಂದಿದೆ. ಜನರಿಗೆ ಕುಡಿಯುವ ನೀರು ಸರಬಾರಜು ಮಾಡಲು ಆದ್ಯತೆ ಕೊಡಬೇಕೆಂದು ಸರಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದ್ದರೂ ಅದನ್ನು ಅನುಷ್ಠಾನಗೊಳಿಸಲು ಯಾವುದೇ ತುರ್ತುಕ್ರಮಗಳಿಗೆ ಮುಂದಾಗದಿರುವುದು ಎದ್ದು ಕಾಣುತ್ತದೆ.

ಸಾಲ ಮನ್ನಾ, ಬೆಳೆ ನಷ್ಟಕ್ಕೆ ಪರಿಹಾರ, ಕುಡಿಯುವ ನೀರು ಮತ್ತು ದಿನದ 24 ಗಂಟೆಯೂ ವಿದ್ಯುತ್ ಪೂರೈಕೆ ... ಈ ರೀತಿಯಾಗಿ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳ ವೇಳೆ ಪ್ರಧಾನಿ ನರೇಂದ್ರ ಮೋದಿ ಮರಾಠವಾಡ ರೈತರು ಮತ್ತು ಜನರಿಗೆ ಭರವಸೆಗಳ ಮಹಾಪೂರವನ್ನೇ ಹರಿಸಿದ್ದರು. ಕಾಂಗ್ರೆಸ್ ಮತ್ತು ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷ (ಎನ್‌ಸಿಪಿ)ದ ಭದ್ರಕೋಟೆ ಎಂದು ಪರಿಗಣಿಸಲಾಗಿದ್ದ ಈ ಪ್ರದೇಶದ ಎಂಟು ಲೋಕಸಭೆ ಸ್ಥಾನಗಳ ಪೈಕಿ ಆರರಲ್ಲಿ ಬಿಜೆಪಿ ಜಯಿಸಿತು. ಅದೇ ರೀತಿ ಅಲ್ಲಿನ ಒಟ್ಟು 46 ವಿಧಾನಸಭೆ ಸ್ಥಾನಗಳಲ್ಲಿ 15ರಲ್ಲಿ ಗೆದ್ದಿತು; ಅದಕ್ಕೂ ಮುನ್ನ ಅದಕ್ಕಿದ್ದಿದ್ದು ಎರಡು ಸ್ಥಾನ ಮಾತ್ರ. ಆದರೆ ಈಗ ಈ ಆಶ್ವಾಸನೆಗಳಲ್ಲಿ ಯಾವುದೂ ಈಡೇರಿಲ್ಲ. ಮೋದಿಯವರು ವಿದೇಶ ಪ್ರವಾಸಕ್ಕೆ ಸ್ವಲ್ಪ ಬಿಡುವು ಕೊಟ್ಟು ಇಲ್ಲಿನ ಪರಿಸ್ಥಿತಿಯ ಅಧ್ಯಯನಕ್ಕಾಗಿ ಇಲ್ಲಿಗೆ ಭೇಟಿ ಕೊಡುವುದು ಅಗತ್ಯ. ಕನಿಷ್ಟ ಪಕ್ಷ ಅಲ್ಪಾವಧಿಯ ಕ್ರಮಗಳಾದರೂ ಸರಕಾರದ ಹೇಳಿಕೆಗಳು ಅಪ್ಪಟ ಸುಳ್ಳು ಎಂದು ಜನಾಬಾಯಿ ಮತ್ತು ಭುಮ್ರೆ ಯಾಕೆ ಹೇಳುತ್ತಾರೆ ಎನ್ನುವುದನ್ನು ತಿಳಿಯಲು ಮೋದಿಯವರಿಗೆ ಇದು ನೆರವಾಗುತ್ತದೆ. ●

ಬರಗಾಲ

ಜನಗಳಿಗೆ ಸಂಕಷ್ಟ ! ಸರಕಾರಗಳಿಗೆ ಇಷ್ಟ!



ಒಟ್ಟಾರೆ, ಇದೆಲ್ಲವೂ ಬರಗಾಲ ಗಂಭಿರವಾಗಿರುವುದನ್ನು ಹೇಳುತ್ತಿದೆ. ಕೆಲ ತಜ್ಞರು ಇಂತಹ ಬರದ ಭೀಕರತೆ ಕಳೆದ 73 ವರ್ಷಗಳ ಹಿಂದೆ ಕಂಡು ಬಂದಿತ್ತೆಂದು ಹೇಳುತ್ತಿದ್ದಾರೆ. ಯಾಕೀ ಪರಿಸ್ಥಿತಿ? ಈ ಎರಡೂ ಸರಕಾರಗಳಿಗೆ ಮತ್ತು ಗ್ರಾಮೀಣ ಪಟ್ಟಭದ್ರರಿಗೆ ಇಂತಹ ಬರಗಾಲಗಳು ಬೇಕಾಗಿವೆ. ಗ್ರಾಮೀಣ ಭೂಮಾಲಕರು ಮತ್ತು ಬಡ್ಡಿವ್ಯಾಪಾರಿ ಪಟ್ಟಭದ್ರರಿಗಂತೂ ಈ ಬರಗಾಲಗಳು ಖಂಡಿತಾ ಸುಗ್ಗಿಯಾಗಿವೆ. ಸರಕಾರಗಳಿಗೂ ಬೇಕಾಗಿದೆ. ಅದು ಅವುಗಳ ಜಾಗತೀಕರಣದ ನೀತಿಯ ಭಾಗವಾಗಿದೆ. ಯೆಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದ ಕಾಲ 2010ರಲ್ಲಿ ರೂಪಿಸಿದ ಸರಕಾರದ ಕರ್ನಾಟಕದ ದೂರದೃಷ್ಟಿ 2020 ಅದನ್ನು ಸ್ಪಷ್ಟಪಡಿಸುತ್ತಿದೆ. ಅದರಂತೆ, 2020ರೊಳಗೆ ಗ್ರಾಮೀಣ ಪ್ರದೇಶದ ಅರ್ಧದಷ್ಟು ದುಡಿಯುವ ಜನತೆಯನ್ನು ವ್ಯವಸಾಯದಿಂದ ಮತ್ತು ಗ್ರಾಮಗಳಿಂದ ಹೊರದಬ್ಬುವುದು ಅದರ ಗುರಿಯಾಗಿದೆ. ಇದಕ್ಕಾಗಿಯೇ ಅಲ್ಲವೇ, ಆತ್ಮಹತ್ಯೆ ಮಾಡಿಕೊಳ್ಳುವ ಮತ್ತು ಸಾಲಬಾಧಿತ ರೈತರ ಜಮೀನುಗಳನ್ನು ಖರೀದಿಸಲು, ಭೂಮಾಲಕರು ಮತ್ತು ವಾರ್ಷಿಕ 25 ಲಕ್ಷ ಆದಾಯ ಉಳ್ಳವರಿಗೆ ಜಮೀನನ್ನು ಹೊಂದಲು ಸಾದ್ಯವಾಗುವಂತೆ ಭೂ ಸುಧಾರಣಾ ಕಾಯ್ದೆ – 1961 ಕ್ಕೆ ಈಚೆಗೆ ರಾಜ್ಯ ಸರಕಾರ, ತಿದ್ದುಪಡಿ ಮಾಡಿದುದು. ಹಾಗೆಂದೂ ಇಂತಹ ಭೀಕರ ಬರಗಾಲದಲ್ಲಿ ಸರಕಾರಗಳು ಸುಮ್ಮನಿದ್ದರೇ, ಜನಗಳು ಸುಮ್ಮನಿರುವರೇ? ಆದ್ದರಿಂದ ಬರಗಾಲ ನಿವಾರಣೆಗೆ ಭಾರೀ ಕಾಳಜಿ ಇದೆಯೆಂದು ತೋರಿಸಿಕೊಂಡು ರಾಜಕೀಯ ಲಾಭ ಮಾಡಿಕೊಳ್ಳಲೇ ಈ ಅಸಮರ್ಪಕ ಅರೆಬರೆ ಬರ–ಪರಿಹಾರದ ಕೆಲಸ.

ಯು. ಬಸವರಾಜು

ಇದೀಗ ಮುಖ್ಯಮಂತ್ರಿಗಳು ಬರ ಪರಿಹಾರದ ಸಮೀಕ್ಷೆಗಾಗಿ ರಾಜ್ಯದ ಪ್ರವಾಸದಲ್ಲಿ ತೊಡಗಿರುವುದು ಮತ್ತು ವಿರೋಧ ಪಕ್ಷವು ಅದರಲ್ಲಿ ತೊಡಗುವ ಮೂಲಕ ರಾಜ್ಯದ ಬರ ಪರಿಸ್ಥಿತಿ ಮರಳಿ ಮುನ್ನೆಲೆಗೆ ಬಂದಿದೆ. ಮುಖ್ಯಮಂತ್ರಿಗಳು ಅಲ್ಲಲ್ಲಿ ಅಧಿಕಾರಿಗಳ ಮೇಲೆ ಹರಿಹಾಯುತ್ತಾ ಕೆಲವರನ್ನು ಅಮಾನತುಗೊಳಿಸುತ್ತಾ ಅಗತ್ಯ ಬರ ಪರಿಹಾರ ನೀಡದಿರುವುದರ ಕುರಿತು ಕೇಂದ್ರ ಸರಕಾರದ ಮೇಲೆ ವಾಗ್ದಾಳಿಯಲ್ಲಿ ತೊಡಗಿದರೇ, ವಿರೋಧ ಪಕ್ಷದ ಯಡೆಯೂರಪ್ಪನವರು ರಾಜ್ಯ ಸರಕಾರದ ವಿಫಲತೆಯ ಕಡೆ ಬೆರಳು ಮಾಡುತ್ತಾ ಇಬ್ಬರೂ ಬರಗಾಲದ ರಾಜಕೀಯ ಲಾಭದೋಚಿಕೊಳ್ಳಲು ಯತ್ನಿಸುತ್ತಿದ್ದಾರೆ. ವಾಸ್ತವದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಪಕ್ಷಗಳು ಮತ್ತು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಬರದಿಂದ ಜನತೆಯನ್ನು ರಕ್ಷಿಸಲು ಗಂಭೀರವಾಗಿಲ್ಲದಿರುವುದು ಸ್ಪಷ್ಟವಿದೆ. ಇವರು ಅನುಸರಿಸುತ್ತಿರುವ ಆರ್ಥಿಕ ನೀತಿಗಳೇ ಈ ದುಸ್ಥಿತಿಯ ಮೂಲವಾಗಿವೆ.

ಬರದ ಗಾಂಭೀರ್ಯತೆ ;

ಕರ್ನಾಟಕ ರಾಜ್ಯ 2015–16 ನೇ ವರ್ಷದಲ್ಲಿ ಮುಂಗಾರು ಹಾಗೂ ಹಿಂಗಾರು ಮಳೆಯ ವೈಫಲ್ಯದಿಂದಾಗಿ ತೀವ್ರ ಬರ ಪೀಡಿತ ಪ್ರದೇಶವಾಗಿದೆ. ರಾಜ್ಯದ ಒಟ್ಟು ಸಾಗುವಳಿ ಭೂಪ್ರದೇಶದ ಮುಂಗಾರಿನಲ್ಲಿ ಶೇ65ರಷ್ಟು ಮತ್ತು ಹಿಂಗಾರಿನಲ್ಲಿ ಶೇ 90 ರಷ್ಟು ಭೂ ಪ್ರದೇಶ ಬೆಳೆಯನ್ನು ಕಾಣಲಿಲ್ಲ. ನಗರ ತಾಲೂಕುಗಳನ್ನು ಹೊರತು ಪಡಿಸಿದರೇ ಉಳಿದೆಲ್ಲಾ 137 ತಾಲೂಕುಗಳು ಬರ ಪೀಡಿತವೇ ಆಗಿವೆ. ಈ ಕಾರಣದಿಂದ ಈ ವರ್ಷ ಭಾರೀ ದೊಡ್ಡ ಪ್ರಮಾಣದಲ್ಲಿ ನಗರ ಪ್ರದೇಶಗಳ ಕಡೆ ಗುಳೆಹೊರಟ ಜನತೆಯನ್ನು ಕಾಣುತ್ತಿದ್ದೇವೆ. ಪ್ರತಿ ಎಕರೆಗೆ ರೈತರು ಸರಾಸರಿ 25,000 ರೂಗಳಷ್ಟು ಬೆಳೆ ನಷ್ಟವನ್ನು ಅನುಭವಿಸಿದ್ದಾರೆ. ಆದಾಯವಿಲ್ಲದೇ ರಾಜ್ಯದ ಬಹುತೇಕ ಗ್ರಾಮೀಣ ಕುಟುಂಬಗಳು ಹಲವು ದಶ ಸಾವಿರ ರೂಪಾಯಿಗಳಷ್ಟು ಜೀವನ ವೆಚ್ಚದ ಸಾಲದ ಹೊರೆಯನ್ನು ಹೊತ್ತಿವೆ. ಇಲ್ಲವೇ ಇದ್ದ ಬದ್ದ ಸಣ್ಣ ಪುಟ್ಟ ಆಸ್ತಿಗಳನ್ನು ಇರುವ ಚಿಕ್ಕಪುಟ್ಟ ಬಂಗಾರದೊಡವೆಗಳನ್ನು ಭೂಮಾಲಕ ಬಡ್ಡಿ ಸಾಹುಕಾರರುಗಳಿಗೆ ಮಾರಾಟ ಮಾಡಿಕೊಂಡಿದ್ದಾರೆ.

ಪಶ್ಚಿಮ ಘಟ್ಟಗಳಲ್ಲಿ ಸುರಿಯುವ ಮಳೆಯೇ, ರಾಜ್ಯದ ತುಂಗಭದ್ರ, ಭೀಮಾ, ಕಾವೇರಿ ಮುಂತಾದ ಬಹುತೇಕ ನದಿಗಳಿಗೆ, ಆಣೆಕಟ್ಟುಗಳಿಗೆ ಆಧಾರವಾಗಿದ್ದು ಶೇ 40 ಸಾಗುವಳಿ ಪ್ರದೇಶದ ನೀರಾವರಿ ಜಮೀನುಗಳಿಗೆ ಮತ್ತು ರಾಜ್ಯದ ದೊಡ್ಡ ದೊಡ್ಡ ನಗರ/ ಪಟ್ಟಣಗಳಿಗೆ ನೀರು ಒದಗಿಸುತ್ತಿತ್ತು. ಕಳೆದ ವರ್ಷ ಅಲ್ಲಿಯೂ ಮಳೆ ಕ್ಷೀಣಗೊಂಡುದರಿಂದ ಮಲೆನಾಡು ಮತ್ತು ಕರಾವಳಿ ಪ್ರದೇಶವೂ ಬರಗಾಲಕ್ಕೆ ತುತ್ತಾಗ ಬೇಕಾಯಿತು. ಆಣೆಕಟ್ಟುಗಳಲ್ಲಿ ಸಂಗ್ರಹಿಸಲ್ಪಟ್ಟ ನೀರು ಕೇವಲ ಒಂದು ಬೆಳೆಗೆ ನೀರು ಒದಗಿಸಲಷ್ಟೇ ಸಫಲವಾಯಿತಲ್ಲದೇ ಮತ್ತೊಂದು ಬೆಳೆಗೆ ನೀರು ಒದಗಿಸದೇ ಹೋದುದು ಮತ್ತು ಆಣೆಕಟ್ಟುಗಳು ಮತ್ತು ನದಿಗಳು ಬತ್ತುವಂತಾದುದು ರಾಜ್ಯದ ಬರದ ಬೇಗೆಯನ್ನು ತೀವ್ರಗೊಳಿಸಿತು. ನದಿಗಳ ಮೂಲದಿಂದ ಪಂಪ್‌ಗಳ ಮತ್ತು ಏತ ನೀರಾವರಿ ಮೂಲಕ ನೀರು ಸಾಗಿಸಿಕೊಂಡು ವ್ಯವಸಾಯದಲ್ಲಿ ತೊಡಗಿದ್ದ ಹಲವು ದಶಲಕ್ಷಾಂತರ ಎಕರೆ ಪ್ರದೇಶದ ರೈತರು ಬೆಳೆ ನಷ್ಟವನ್ನು ಅನುಭವಿಸುವಂತಾಯಿತು. ಅದೇ ರೀತಿ, ಇದರಿಂದಾಗಿ ನದಿಗಳ ಇಕ್ಕೆಲಗಳಲ್ಲಿನ ನೂರಾರು ಗ್ರಾಮಗಳಿಗೆ ಕುಡಿಯುವ ನೀರಿನ ತೊಂ ದರೆ ಬಂದಿತು ಮತ್ತು ನಗರ/ಪಟ್ಟಣಗಳ ಜನತೆಗೆ ಕುಡಿಯುವ ನೀರಿನ ಸಮಸ್ಯೆಯನ್ನು ಅದು ಉಲ್ಬಣಗೊಳಿಸಿ 10–12 ದಿನಗಳಿಗೊಮ್ಮೆ ನೀರು ಪಡೆಯುವಂತಹ ದುಸ್ಥಿತಿಯನ್ನು ತಂದಿತು.

ಬಹುತೇಕ ಮಳೆಯಾಧಾರಿತ ಪ್ರದೇಶವು ಮಾತ್ರವಲ್ಲ, ಅಂತರ್‌ಜಲದ ಕೊರತೆಯಿಂದಾಗಿ ಕೊಳವೇ ಬಾವಿ ನೀರಾವರಿ ಪ್ರದೇಶದ ಬೆಳೆಗಳನ್ನು ನಾಶ ಮಾಡಿದೆ. ಇದೆಲ್ಲವೂ ಸಾಲ ಭಾಧಿತ ರೈತರನ್ನು ಹತಾಶೆಗೀಡುಮಾಡಿತಲ್ಲದೇ, ಇದರೊಂದಿಗೆ ಬೆಲೆ ಕುಸಿತವೂ ಸೇರಿ ಈ ಅವಧಿಯಲ್ಲಿ 11 ಸಾವಿರಕ್ಕಿಂತಲೂ ರೈತರು ಆತ್ಮಹತ್ಯೆಯಲ್ಲಿ ತೊಡಗುವಂತಾಯಿತು. ರಾಜ್ಯದ ದಶ ಸಾವಿರಗಟ್ಟಲೆ ಗ್ರಾಮಗಳಲ್ಲಿ ಕುಡಿಯುವ ನೀರಿನ ತತ್ವಾರ ಉಂಟಾಗಿದೆ. ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ ಮತ್ತು ತುಮುಕೂರು ಮುಂತಾದ ಜಿಲ್ಲೆಗಳಲ್ಲಿ ಸಾವಿರಾರು ಅಡಿ ಅಳಕ್ಕೆ ಕೊರೆದರೂ ಕುಡಿಯುವ ನೀರು ಸಿಗುತ್ತಿಲ್ಲ. ಈಗಲೂ ಸರಕಾರದ ಹಲವು ಪ್ರಯತ್ನಗಳ ನಡುವೆಯೂ ಫ್ಲೋರೈಡ್ ಮಿಶ್ರಿತ ವಿಷದ ನೀರೇ ಅಲ್ಲಿನ ಜನಗಳಿಗೆ ಆಧಾರವಾಗಿದೆ.

ಮಳೆಯಾಶ್ರಿತ ಪ್ರದೇಶದ ಬರ ಪೀಡಿತ ಜನತೆಗೆ ನೀರಾವರಿ ಪ್ರದೇಶವೂ ಕನಿಷ್ಠ ಒಂದೆ–ರಡು ತಿಂಗಳಾದರೂ ಉದ್ಯೋಗ ಒದಗಿಸುವ ಪ್ರಸಂಗವಿತ್ತು. ಈ ಭಾರೀ ನದಿಗಳು, ಕೆರೆಗಳು ಮತ್ತು ಆಣೆಕಟ್ಟುಗಳು ಬತ್ತಿಹೋದುದು ಇವರಿಗೆ ನೀರಾವರಿ ಪ್ರದೇಶದಲ್ಲಿ ಉದ್ಯೋಗವಿಲ್ಲದಂತಾಯಿತು. ಮಾತ್ರವಲ್ಲಾ, ನೀರಾವರಿ ಪ್ರದೇಶದ ಕೂಲಿಕಾರರು ಮತ್ತು ಕಸುಬುದಾರರು ಮತ್ತಿತರೇ ಬಡವರು ಕೂಡ ಗ್ರಾಮಗಳನ್ನು ತೊರೆದು ಹೋಗುವಂತಾಗಿದೆ. ಕಳೆದ ದಿನಗಳಲ್ಲಿ ಮಳೆಯಾಶ್ರಯದ ಪ್ರದೇಶದಿಂದ ವಲಸೆ ಅಥವಾ ಗುಳೆ ಹೋಗುವ ಒಟ್ಟು ಜನತೆಯಲ್ಲಿ ಶೇ 60 ರಷ್ಟು ಜನತೆ ನೀರಾವರಿ ಪ್ರದೇಶದಲ್ಲಿ ಮತ್ತು ಕೃಷಿಯೇತರ ಕೆಲಸಗಳಲ್ಲಿ ಆಶ್ರಯ ಪಡೆದಿದ್ದರೇ ಈಗ ಶೇ 100ರಷ್ಟು ಜನತೆ ನಗರ/ಪಟ್ಟಣಗಳ ಕಡೆ ನಡೆಯುವಂತಾಗಿದೆ. ಮಾತ್ರವಲ್ಲಾ ನೀರಾವರಿ ಪ್ರದೇಶದಿಂದಲೂ ವಲಸೆ/ ಗುಳೆಯನ್ನು ಹೆಚ್ಚಿಸಿದೆ.

ಜಾನುವಾರುಗಳು, ಪಕ್ಷಿಗಳು ಮತ್ತು ಕಾಡು ಪ್ರಾಣಿಗಳು ಮೇವಿನ ಮತ್ತು ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುತ್ತಿವೆ.

ಕಳೆದ ವರ್ಷದ ಮಳೆಯ ಅಭಾವ ಮತ್ತು ಮಹಾರಾಷ್ಟ್ರ, ತೆಲಂಗಾಣ ಹಾಗೂ ಆಂದ್ರ ಪ್ರದೇಶಗಳಲ್ಲಿ ಬೀಸುತ್ತಿರುವ ಬಿಸಿಗಾಳಿಯು ರಾಜ್ಯದ ತಾಪಮಾನವನ್ನು ಅಗಾಧವಾಗಿ ಹೆಚ್ಚಿಸಿದೆ. ಇದ–ರಿಂದಾಗಿ ಕಲಬುರಗಿಯ ಯುವ ವಕೀಲರೊಬ್ಬರು ಬಿಸಿಲಿನ ತಾಪಕ್ಕೆ ಬಲಿಯಾದ ವರದಿ ಬಂದಿದೆ.

ಒಟ್ಟಾರೆ, ಇದೆಲ್ಲವೂ ಬರಗಾಲ ಗಂಭಿರವಾಗಿರುವುದನ್ನು ಇದು ಹೇಳುತ್ತಿದೆ. ಕೆಲ ತಜ್ಞರು ಇಂತಹ ಬರದ ಭೀಕರತೆ ಕಳೆದ 73 ವರ್ಷಗಳ ಹಿಂದೆ ಕಂಡು ಬಂದಿತ್ತೆಂದು ಹೇಳುತ್ತಿದ್ದಾರೆ.

ಸರಕಾರಗಳ ಅಸಮರ್ಪಕ ಕ್ರಮಗಳು :

ಗ್ರಾಮೀಣ ಪ್ರದೇಶವೂ ಅಲ್ಲಿನ ದುಡಿಯುವ ಜನತೆಗೆ ಇದರಿಂದಾಗಿ ಭೀಕರವಾಗಿರುವಾಗ, ಕೇಂದ್ರ ಹಾಗೂ ರಾಜ್ಯ ಸರಕಾರಗಳು ಅದನ್ನು ಅಷ್ಟೇನು ಗಂಭಿರವಾಗಿ ಪರಿಗಣಿಸದಿರುವುದನ್ನು ಕಾಣುತ್ತಿದ್ದೇವೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮತ್ತು ಬಿಜೆಪಿಯ ಯಡಿಯೂರಪ್ಪನವರೂ ಏನೆಲ್ಲಾ ತಾವು ಕ್ರಮಕೈಗೊಂಡಿರುವುದಾಗಿ ಕೊಚ್ಚಿ–ಕೊಂಡು ಪರಸ್ಪರರ ಮೇಲೆ ಆರೋಪಿಸಿಕೊಂಡರೂ ಅದು ಕೇವಲ ಬೂಟಾಟಿಕೆ ಎಂಬುದು ಸ್ಪಷ್ಟವಿದೆ. ಗ್ರಾಮೀಣ ದುಡಿಯುವ ಜನತೆ ಬರದಿಂದಾಗಿ ತೀವ್ರ ನಷ್ಟ ಕ್ಕೊಳಗಾಗುತ್ತಿರುವುದು ಇದ್ದ ಬದ್ದ ಆಸ್ತಿಗಳನ್ನೆಲ್ಲ ಮಾರಾಟಮಾಡುತ್ತಿರುವುದು, ಸಾಲಭಾಧಿತರಾಗುತ್ತಿರುವುದು ಮತ್ತು ಗ್ರಾಮೀಣ ಪ್ರದೇಶದಿಂದ ನಗರಗಳೆಡೆ ಗುಳೆ ಹೋಗುತ್ತಿರುವುದು ಸ್ಪಷ್ಟವಾಗಿದ್ದರೂ ಅದನ್ನು ತಡೆಯುವ ಯಾವುದೇ ಗಂಭೀರ ಪ್ರಯತ್ನಗಳನ್ನು ಅವು ಮಾಡುತ್ತಿಲ್ಲ. ರೈತರು ಈ ಅವಧಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಆತ್ಮಹತ್ಯೆಗಳನ್ನು ಮಾಡಿಕೊಂಡರೂ ಅವುಗಳನ್ನು ನಿಲ್ಲಿಸುವ ಗಂಭೀರ ಹೆಜ್ಜೆಗಳನ್ನು ಇಡಲು ಅವು ನಿರಾಕರಿಸುತ್ತಿವೆ. ಉದ್ಯೋಗ ಖಾತ್ರಿಯಂತಹ ಯೋಜನೆಯನ್ನು ಪರಿಣಾಮಕಾರಿಯಾಗಿ ಬಳಸಿ ಗ್ರಾಮೀಣ ವಲಸೆಯನ್ನು ತಡೆಯಬಹುದಿತ್ತು. ಸರಕಾರಗಳು ಅದನ್ನು ಮಾಡದೇ ಗ್ರಾಮೀಣ ಪಟ್ಟಭದ್ರರೂ ಲೂಟಿ ಮಾಡಲು ಬಿಡುತ್ತಿವೆ. ಇದ–ರಿಂದಾಗಿ ಸಾವಿರಾರು ಕೋಟಿ ಹಣವು ಗ್ರಾಮೀಣ ಪಟ್ಟಭದ್ರರ ಪಲಾಗಿದೆ. ಮುಖ್ಯಮಂತ್ರಿಗಳು ಕಳೆದ ಒಂದು ವಾರದಿಂದ ರಾಜ್ಯದ ಪ್ರವಾಸದಲ್ಲಿದ್ದಾರೆ ಇಂತಹ ಬರಗಾಲದಲ್ಲಿ ಎಲ್ಲಿಯಾದರೂ ಸಾವಿರಾರು ಸಂಖ್ಯೆಯಲ್ಲಿ ಜನತೆ ಉದ್ಯೋಗ ಖಾತ್ರಿಯಲ್ಲಿ ತೊಡಗಿದುದುನ್ನು ಕಂಡರೇ? ಯಾಕೆ ಕಾಣಲಿಲ್ಲ.

ಅದೇ ರೀತಿ, ಬರಗಾಲದಿಂದ ಮುಕ್ತಿಯನ್ನು ಪಡೆಯಲು ಮಹದಾಯಿ ನೀರಿಗಾಗಿ ಉತ್ತರ ಕರ್ನಾಟಕದಲ್ಲಿ ನೂರಾರು ದಿನಗಳೀಂದ ನಡೆದಿರುವ ಮತ್ತು ಮದ್ಯ ಹಾಗೂ ದಕ್ಷಿಣ ಕರ್ನಾಟಕದ ಪಶ್ಚಿಮ ಘಟ್ಟಗಳ ನೀರಿಗಾಗಿ ನಡೆದಿರುವ ಹಲವು ವರ್ಷಗಳಿಂದ ನಡೆದಿರುವ ಹೋರಾಟಗಳನ್ನು ಯಾಕೆ ಪರಿಗಣಿಸುತ್ತಿಲ್ಲ?

ಈ ಅವಧಿಯಲ್ಲಿ ಬೆಳೆ ನಷ್ಟ ಮತ್ತು ಜೀವನ ವೆಚ್ಚದಿಂದ ಲಕ್ಷಾಂತರ ರೂಪಾಯಿಗಳ ಸಾಲದ ಹೊರೆಯನ್ನು ರೈತರು ಹೊತ್ತಿದ್ದರೂ, ಅದನ್ನು ಕಡಿಮೆ ಮಾಡಲು ಮುಖ್ಯವಾಗಿ ಬಡ ಹಾಗೂ ಮದ್ಯಮ ರೈತರ ಎಲ್ಲ ರೀತಿಯ ಖಾಸಗೀ ಹಾಗೂ ಸಾರ್ವಜನಿಕ ಹಾಗೂ ಸಹಕಾರಿ ಬ್ಯಾಂಕ್ ಸಾಲಗಳನ್ನು ಮನ್ನಾ ಮಾಡಲು ಅಗತ್ಯ ಕ್ರಮವಹಿಸಲು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಸರಕಾರಗಳು ಸ್ಪಷ್ಟವಾಗಿ ನಿರಾಕರಿಸುತ್ತಿವೆ. ಹಾಗೂ ಅವುಗಳು ನೀಡಲಾಗುತ್ತದೆಂದು ಹೇಳುತ್ತಿರುವ ಬೆಳೆ ನಷ್ಟಪರಿಹಾರವು ಕೇವಲ ಮಳೆಯಾಧಾರಿತ ಪ್ರದೇಶಕ್ಕೆ ಸೀಮಿತವಾಗಿದೆ ಮತ್ತು ಅದು ಆ ಪ್ರದೇಶದ ರೈತರ ಮತ್ತು ಕೂಲಿಕಾರರ ಕೂಲಿ ನಷ್ಟದ ಪರಿಹಾರವನ್ನು ಅದು ಘೋಷಿಸಿಲ್ಲ ಮತ್ತು ನೀಡುತ್ತಿರುವ ಪರಿಹಾರವೂ ಭಾರೀ ತಮಾಷೆಯದಾಗಿದೆ. ಅದಕ್ಕೆ ಯಾವುದೇ ಮಾನದಂಡಗಳಿಲ್ಲ. ಕೆಲವೆಡೆ ಎಕರೆಗೆ 1000ರೂಗಳಿಗಿಂತಲೂ ಕಡಿಮೆ ನೀಡಿದರೇ ಇನ್ನೂ ಕೆಲವೆಡೆ 1900 ರೂ ಮತ್ತೆ ಕೆಲವರಿಗೆ 3,000 ರೂ ನೀಡಿದೆ. ಕೆಲವರಿಗೆ 100 ರೂಗಿಂತಲೂ ಕಡಿಮೆ ನೀಡಿದ ಪ್ರಕರಣಗಳು ವರದಿಯಾಗಿವೆ. ಅದೇ ರೀತಿ ಹಲವು ಲಕ್ಷ ಮಳೆಯಾಶ್ರಯದ ರೈತಕುಟುಂಬಗಳಿಗೆ ಅದು ಇನ್ನೂ ಕೂಡಾ ತಲುಪಿಲ್ಲ. ಇನ್ನು ನೀರಾವರಿ ನಂಬಿ ನಷ್ಠ ಹೊಂದಿದ ನದಿ ನೀರನ್ನು ಬಳಸಿ ವ್ಯವಸಾಯದಲ್ಲಿ ತೊಡಗಿದ, ಎರಡನೆ ಬೆಳೆಗೆ ನೀರು ದೊರಯದೇ ನಷ್ಠವಾದ ಮತ್ತು ಪಂಪ್‌ಸೆಟ್ ಮೂಲಕ ನೀರಾವರಿ ಮಾಡಿಕೊಂಡು ನಷ್ಟ ಹೊಂದಿದ ದಶಲಕ್ಷಾಂತರ ರೈತರಿಗೆ ಪರಿಹಾರವೆ ಇಲ್ಲಾ!

ಕುಡಿಯುವ ನೀರಿಗಾಗಿ ಎಲ್ಲಾ ಕ್ರಮವಹಿಸಲಾಗಿದೆಯೆಂದು ಕೋಟ್ಯಾಂತರ ಹಣ ಬಿಡುಗಡೆ ಮಾಡಲಾಗಿದೆಯೆಂದು, ಹಣದ ಕೊರತೆ ಇಲ್ಲವೆಂದು ಸರಕಾರ ಹೇಳುತ್ತಿದ್ದರೂ, ಈಗಲೂ ರಾಜ್ಯದ ಜನತೆ ಗಂಭಿರ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಹುಬ್ಬಳ್ಳಿ ತಾಲೂಕಿನ ಬಂಡಿಹಳ್ಳಿಯಲ್ಲಿ ಇಂತಹ ಭಾರೀ ತಾಪಮಾನದಲ್ಲಿ ತಲಾ ರೇಷನ್ ಕಾರ್ಡ್‌ಗೆ ಎರಡು ಕೊಡ ನೀರು ನೀಡಲಾಗುವುದೆಂದು ಹೇಳಲಾಗಿದೆ. ನಗರಗಳ ಜನತೆ ನೀರಿಗಾಗಿ ಕೆಲಸವನ್ನು ಬಿಟ್ಟು ಅಲೆಯಬೇಕಾದ ಪರಿಸ್ಥಿತಿ ಮುಂದುವರೆದಿದೆ. ಭೀಮಾ ನದಿ ಇಕ್ಕೆಲಗಳ ನೂರಾರು ಗ್ರಾಮಗಳಿಗೆ ನದಿಗಳು ಬತ್ತಿಹೋಗಿರುವುದರಿಂದ ಟ್ಯಾಂಕ್‌ಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿಲ್ಲವೆಂದು ಮಹಾರಾಷ್ಟ್ರ ಸರಕಾರಕ್ಕೆ ಸದರಿ ನದಿಗೆ ಅಲ್ಲಿನ ಆಣೆಕಟ್ಟೆಗಳಿಂದ ನೀರು ಬಿಡುವಂತೆ ಸರಕಾರ ಮನವಿ ಮಾಡಿದೆ. ಇಂತಹದ್ದೇ ಪರಿಸ್ಥಿತಿ ಇತರೇ ನದಿಗಳ ದಂಡೆಗಳ ಮೇಲಿನ ಗ್ರಾಮಗಳದ್ದು ಆಗಿದೆ.

ಯಾಕೀ ಪರಿಸ್ಥಿತಿ?

ಯಾಕೆಂದರೇ ಎರಡೂ ಸರಕಾರಗಳಿಗೆ ಮತ್ತು ಗ್ರಾಮೀಣ ಪಟ್ಟಭದ್ರರಿಗೆ ಇಂತಹ ಬರಗಾಲಗಳು ಬೇಕಾಗಿವೆ. ಗ್ರಾಮೀಣ ಭೂಮಾಲಕರು ಮತ್ತು ಬಡ್ಡಿವ್ಯಾಪಾರಿ ಪಟ್ಟಭದ್ರರಿಗಂತೂ ಈ ಬರಗಾಲಗಳು ಖಂಡಿತಾ ಸುಗ್ಗಿಯಾಗಿವೆ. ಆದ್ದರಿಂದ ಅವುಗಳು ಇರಬೇಕೆಂಬುದೇ ಅವರ ಅಭಿಲಾಷೆಯಾಗಿದೆ. ಸರಕಾರಗಳಿಗೂ ಬೇಕಾಗಿದೆ. ಅದು ಅವುಗಳ ಜಾಗತೀಕರಣದ ನೀತಿಯ ಭಾಗವಾಗಿದೆ. ರೈತರೂ ಭೂಮಿಗಳನ್ನುತೊರೆಯುವುದು ಮತ್ತುಬೀದಿಪಾಲಾದ ರೈತ ಕುಟುಂಬಗಳು ಮತ್ತು ಕೂಲಿಕಾರರು, ಕಸುಬುದಾರರು ಗ್ರಾಮಗಳನ್ನು ತೊರೆಯುವಂತೆ ಮಾಡುವುದು ಈ ಎರಡು ಸರಕಾರಗಳ ಯೋಜನೆಯಾಗಿದೆ. ವ್ಯವಸಾಯವನ್ನು ರೈತರು ಮತ್ತು ಕಸುಬುದಾರರು ಹಾಗೂ ಕೃಷಿಕೂಲಿಕಾರರಿಂದ ಕಸಿದು ಅದನ್ನು ಬಹುರಾಷ್ಟ್ರೀಯ ಸಂಸ್ಥೆಗಳ ಹೆಗಲಿಗೆ ಹಾಕುವ ಹುನ್ನಾರದ ಭಾಗವಾಗಿದೆ.

ಯೆಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದ ಕಾಲ 2010ರಲ್ಲಿ ರೂಪಿಸಿದ ಸರಕಾರದ ಕರ್ನಾಟಕದ

ಪುಟ 14 ಕ್ಕೆ

ರೇಗಾ ಮತ್ತು ಬರ

ಹೌದು. ನಾವು ಹೀಗೆ ಕೆಲಸ ಮಾಡಲು ಮನಸು ಮಾಡಿದೆವು. ದಿನಗಳೆದಂತೆ ಎಲ್ಲವನ್ನೂ ಆಪೋಷನಗೈಯುವಂತೆ ರಾಚುವ ಬೆಂಕಿ ಬಿಸಿಲು. ನಗರಗಳಲ್ಲಿ ಬಿಕೋ ಎನ್ನುವ ರಸ್ತೆಗಳು. ಹಳ್ಳಿಗಳಲ್ಲಿ ಹರಕು ರಸ್ತೆಗಳು ಬಿಕೋ ಅಂದರೂ ಪ್ರತಿ ಮನೆ ಗುಡಿಸಲುಗಳಲ್ಲಿ ಸಂಕಟದ ಮೌನ. ಊಟ-ಕ್ಕೆ ಒದಗಿ ಬರುವ ದವಸ ಧಾನ್ಯಗಳು ದಿನಸಿಗಳು ಖಾಲಿಯಾಗುತ್ತಿದ್ದು, ಮುಂದೇನು? ಎನ್ನುವಂಥ ಆಳದ ಚಿಂತೆ, ಒಳ-ಒಳಗೆ ಬಿಕ್ಕುವ ಮನಸು ಕ್ರಮೇಣ ಹತಾಶೆಯ ಪಾಶದಲ್ಲಿ ಸಿಲುಕಿಕೊಂಡು ಒದ್ದಾಡುತ್ತಿತ್ತು.. ಏನು ಮಾಡುವುದು? ಯಾವ ರಸ್ತೆಗೆ ಹೊಲಗದ್ದೆ ಪಕ್ಕದಿಂದ ಹಾದರೂ ಎರಡೆರಡು ಕೊಡಹೊತ್ತ ಹೆಂಗಸರು ಮಕ್ಕಳು ಉಸ್ಸೆನ್ನುತ್ತ ಹಾದಿ ಸವೆಸುತ್ತಿರುವರು. ಕೈಯ್ಯಲ್ಲಿ ಕೆಲಸವಿಲ್ಲ. ಹಿಂದೆಲ್ಲ ಮಾಡಿದ ಕೆಲಸಕ್ಕೆ ಕೂಲಿ ಕೊಡದ ಉದ್ಯೋಗ ಖಾತ್ರಿಯ ಮೇಲೆ ವಿಶ್ವಾಸವೇ ಇಲ್ಲದಂತಹ ಪರಿಸ್ಥಿತಿ.

ಎಷ್ಟೊ ಹಳ್ಳಿಗಳಲ್ಲಿ ಸಾವಿರಾರು ಉದ್ಯೋಗ ಚೀಟಿಗಳು ಗೆದ್ದವರ ಇದ್ದವರ ಕೈ ಸೇರಿ ವರ್ಷಗಳೇ ಆಗಿವೆ. 'ನಮ್ಮ ರೊಕ್ಕ ನಿಮ್ಮ ಅಕೌಂಟಿಗೆ ಬರ್‍ತದೆ. ಐದು ನೂರು ಇಟ್ಕೊಂಡು ಉಳಿದಿದ್ದು ವಾಪಸ್ ಕೊಡ್ರಿ...' ಎಂದು ಮುಗ್ಧ ಜನರನ್ನು ಯಾಮಾರಿಸಿ ಅವರ ಕೈಯಿಂದಲೇ ಅವರದೇ ಹೆಸರಿನ ಹಣವನ್ನು ನುಂಗಿ ನೀರು ಕುಡಿದವರು ಕಟ್ಟೆಯ ಮೇಲೆ ಇಸ್ಪೇಟಾಡುತ್ತ ಕುಳಿತಿರುವರು. ರೇಗಾದಡಿಯಲ್ಲಿ ಜನರ ಅಕೌಂಟಿಗೆ ಎನ್ ಎಂ ಆರ್ ತೆಗೆದು ಕೆಲಸ ಮಾಡಿರುವವರೆಂದು ಸುಳ್ಳು ಬಿಲ್ಲು ಮಾಡಿಸಿ ಅವರ ಅಕೌಂಟಿಗೆ ಬಂದ ಹಣವನ್ನು ಸುಳ್ಳು ಹೇಳಿಯೇ ಲೂಟಿ ಮಾಡಿರುವರು. ಇದು ಹಗಲು ದರೋಡೆ. ತನ್ಮೂಲಕ ಜನರನ್ನು ಕರಪ್ಟ್ ಮಾಡಿರುವರು. ಈಗಲೂ ಸಾಮಾನ್ಯ ಜನರಿಗೆ ಕೆಲಸ ಸಿಗದಂತೆ ಮಾಡಿ ಉದ್ಯೋಗ ಚೀಟಿಯನ್ನು ತಮ್ಮಲ್ಲಿಯೇ ಇಟ್ಟುಕೊಂಡವರು ಸಾವಿರಗಟ್ಟಲೆ ಜನರು ಪ್ರತಿ ತಾಲ್ಲೂಕಿನಲ್ಲಿ ಸಿಗುವರು. ಬರಗಾಲದ ಹೊತ್ತಿನಲ್ಲಿಯೂ ಕರುಣೆಯಿಲ್ಲದ ಈ ಕಟುಕರು ಶ್ರಮಿಕರ ಸಂಕಟ ಕಂಡು ಅಟ್ಟಹಾಸ ಮಾಡುತ್ತಿರುವಂತೆ ಭಾಸವಾಗುವುದು.

ಇನ್ನು ಸರಕಾರದ ಸಿಬ್ಬಂದಿಗಳಿಗೆ ಈ 45-47 ಡಿಗ್ರಿ ಬಿಸಿಲಿನಲ್ಲಿ ಹಳ್ಳಿ ಸುತ್ತಾಡಿ ಜನರ ಕೈಗೆ ಕೆಲಸ ಕೊಡುವುದು ಬೇಕಿಲ್ಲ. ಸರಿ ಏನು ಮಾಡುವುದು? ಈ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯು ಆರಂಭವಾದ ವರ್ಷ 2005-6ರ ಹೊತ್ತಿನಲ್ಲಿ ಬೀದರ ಜಿಲ್ಲೆಯಲ್ಲಿ ಹೀಗೆ ಹುಚ್ಚು ಹಿಡಿದವರಂತೆ ಹಳ್ಳಿಗಳನ್ನು ಸುತ್ತಾಡಿ ಕೆಲಸ ಮಾಡಿದ್ದೆವು. ನಿರಂತರ ಹೋರಾಟ, ಸಮಾವೇಶ, ಜಾಗೃತಿ ಜಾತಾ, ಅನೇಕ ಘೇರಾವ್, ಪಂಚಾಯತ್ ಕಚೇರಿಗಳಿಗೆ ಕೀಲಿ ಜಡಿಯುವಂತಹ ಸಂಘರ್ಷಗಳ ಜೊತೆಗೆ ಸಾವಿರಾರು ಕೂಲಿ ಕಾರ್ಮಿಕರು, ಬಡ-ರೈತರು ಉದ್ಯೋಗ ಖಾತ್ರಿಯ ನೆರವಿನೊಂದಿಗೆ ಕೊಂಚ ನೆಮ್ಮದಿಯ ಬದುಕು ಕಂಡಿದ್ದು ನನಗೀಗಲು ನೆನಪಾಗುವುದು. ಬರೆದರೆ ದೊಡ್ಡ ಗ್ರಂಥವೇ ಆಗುವಂತಹ ಹೋರಾಟದ ಗಾಥೆಯದು. ಸತತ ಮೂರು ವರ್ಷ ಬೆನ್ನು ಹತ್ತಿದ್ದಾಯ್ತು...

ಅರಳಿ ನಿಂತ ಆಜಾದಪುರ ಕೆರೆ

ಕಳೆದ ವರ್ಷವೂ ಬರವಿತ್ತು. ಆದರೆ ನಾವಾಗ ಮೈಕ್ರೊ ಸಿಸ್ಟಮ್ ಕೆಲಸ ಮಾಡುವ ಪ್ರಯೋಗಕ್ಕೆ ಒಡ್ಡಿಕೊಳ್ಳಲು ತೀರ್ಮಾನ ಮಾಡಿದ್ದೇವು. ಹೀಗಾಗಿ ಕಲಬುರಗಿ ನಗರದ ಹತ್ತಿರವಿರುವ ಕುಸನೂರು ಗ್ರಾಮಪಂಚಾಯತಿಯ ಆಜಾದಪುರ ಗ್ರಾಮದ ಕೆರೆಯಲ್ಲಿ ಸುಮಾರು ಮುನ್ನೂರರಷ್ಟು ಕೃಷಿ ಕೂಲಿ ಕಾರ್ಮಿಕರು ಮತ್ತು ಬಡರೈತರಿಗೆ ರೇಗಾ ಅಡಿಯಲ್ಲಿ ಸತತ ನೂರು ದಿನ ಕೆಲಸ ಕೊಡಿಸಲು ಸಾಧ್ಯವಾಗಿತ್ತು. ಅಂತೆಯೇ ಪುಟ್ಟ ಕೆರೆಯೊಂದು ಇಂದು ಅರಳಿ ನಿಂತಿದೆ. ಕೆರೆ ಪೂರ್ತಿ ಕಟ್ಟಬೇಕೆಂದು ಅನೇಕ ಬಾರಿ ಹೋರಾಟವೂ ನಡೆಸಿದೆವು.

ಆದರೆ ಈ ವರ್ಷ ಬರಗಾಲವು ಇನ್ನಷ್ಟು ಭೀಕರವಾಗಿರುವುದರಿಂದ ನಮ್ಮ ಕೆಲಸ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿರುವೆವು. ನೀರಿನ ಅಂತರ್ಜಲಮಟ್ಟ ಕುಸಿದಿರುವುದರಿಂದ ನಾವು ದುಡಿವ ಜನರ ಕೈಗೆ ಕೆಲಸ, ಮಾಡಿದ ಕೆಲಸಕ್ಕೆ ಕೂಲಿ ಮತ್ತು ನೀರಿನ ಅಂತರ್ಜಲ ಮಟ್ಟ ಹೆಚ್ಚಿಸುವುದು. ಹೀಗೆ ಮುಖ್ಯ ಗುರಿಯನ್ನಿಟ್ಟುಕೊಂಡು ಕೆಲಸ ಮಾಡಲು ನಿರ್ಣಯಿಸಿದೆವು. ನೀರಿಲ್ಲವೆಂದರೆ ನಾಳೆಯಿಲ್ಲ. ನಿಜಾಮ ಆಳ್ವಿಕೆಯ ಪ್ರದೇಶದಲ್ಲಿ ಕೆರೆ ಮತ್ತು ಬಾವಿಗಳು ಹೇರಳವಾಗಿವೆ. ಇದಕ್ಕಾಗಿ ನಿಜಾಮನಿಗೆ ಧನ್ಯವಾದ ಹೇಳಲೇಬೇಕು. 1972 ರ ಹೊತ್ತಿಗೆ ಬಿದ್ದ ಭೀಕರ ಬರದ ಹೊತ್ತಿನಲ್ಲಿ ಪ್ರತಿ ಹಳ್ಳಿಯಲ್ಲಿ ಕೆರೆ ಹೂಳೆತ್ತುವ ಕಾಮಗಾರಿ ಕೈಗೆತ್ತಿಕೊಂಡು ಜನರ ಕೈಗೆ ಕೆಲಸ ಕೊಡಲಾಗಿತ್ತು. ಅಂದಿಗೆ ಹೂಳೆತ್ತಲ್ಪಟ್ಟ ಕೆರೆಗಳು ಹೂಳು ತುಂಬಿಕೊಂಡು ನೆಲಸಮವಾಗಿವೆ. ರೇಗಾ ಅಡಿಯಲ್ಲಿ ಅವುಗಳ ಹೂಳು ತೆಗೆಸಬೇಕಿತ್ತು. ಸರಕಾರವಾಗಲಿ ಸರಕಾರಿ ಯಂತ್ರವಾಗಲಿ ಇದ-ಕ್ಕೆ ಮನಸು ಮಾಡಲೇಯಿಲ್ಲ. ಈ ಕಾರಣದಿಂದಲೂ ನೀರಿನ ಅಂತರ್ಜಲಮಟ್ಟ ಕುಸಿದಿದೆ.

ಈ ವರ್ಷ ಬರಗಾಲವು ಇನ್ನಷ್ಟು ಭೀಕರವಾಗಿರುವುದರಿಂದ ನಮ್ಮ ಕೆಲಸ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿರುವೆವು. ನೀರಿನ ಅಂತರ್ಜಲಮಟ್ಟ ಕುಸಿದಿರುವುದರಿಂದ ನಾವು ದುಡಿವ ಜನರ ಕೈಗೆ ಕೆಲಸ, ಮಾಡಿದ ಕೆಲಸಕ್ಕೆ ಕೂಲಿ ಮತ್ತು ನೀರಿನ ಅಂತರ್ಜಲ ಮಟ್ಟ ಹೆಚ್ಚಿಸುವುದು. ಹೀಗೆ ಮುಖ್ಯ ಗುರಿಯನ್ನಿಟ್ಟುಕೊಂಡು ಕೆಲಸ ಮಾಡಲು ನಿರ್ಣಯಿಸಿದೆವು. ಕೆರೆಗಳು ಎಲ್ಲೆಲ್ಲಿ ಇವೆಯೋ ಅಲ್ಲೆಲ್ಲ ಹಳ್ಳಿಗಳ ಜನರತ್ತ ನಮ್ಮ ನಡಿಗೆ ಎಂದು ನಿರ್ಧರಿಸಿ ಕಳೆದ ಒಂದುವರೆ ತಿಂಗಳಿಂದ ಕೆರೆ ಕೇಂದ್ರೀಕರಿಸಿ ಕೆಲಸ ಆರಂಭಿಸಿದ್ದೇವೆ. ಇದರ ಪ್ರತಿ ಫಲವಾಗಿ ಮಾರ್ಚ್ 26ರಂದು ಆಳಂದ ತಾಲ್ಲೂಕಿನ ನರೋಣ ಕ್ಷೇತ್ರ ಪಾಳ್ಯದಲ್ಲಿ ಸುಮಾರು ಮೂರುವರೆ ಸಾವಿರಕ್ಕೂ ಅಧಿಕ ಮಹಿಳೆಯರು ಅಂತರರಾಷ್ಟ್ರೀಯ ದಿನವನ್ನು 'ಕೆಲಸದ ಹಕ್ಕಿಗಾಗಿ ಮತ್ತು ನೀರು ಸಂರಕ್ಷಣೆ' ಗಾಗಿ ಆಚರಿಸಿದರು. ಈಗ ನಮ್ಮ ಸಂಘಟನೆಯ ಶ್ರಮದ ಭಾಗವಾಗಿ ಎಂಟು ಕೆರೆಗಳಲ್ಲಿ ಕಾಮಗಾರಿ ಆರಂಭವಾಗಿದೆ. ಸರಿ ಸುಮಾರು ನಾಲ್ಕು ಸಾವಿರಕ್ಕೂ ಅಧಿಕ ಕಾರ್ಮಿಕರು ಕೆಲಸದಲ್ಲಿ ತೊಡಗಿದ್ದಾರೆ.



ನಾವೀಗ ಎಚ್ಚೆತ್ತುಕೊಳ್ಳದಿದ್ದರೆ ಇನ್ನು ಸಂಕಟದ ದಿನಗಳು ನಮ್ಮ ಮುಂದಿವೆ ಎಂದು ನಮಗೆ ಅನಿಸಿತು. ಇಷ್ಟಕ್ಕೂ ಹಳ್ಳಿಯಲ್ಲಿ ಜನರು ಬರದ ಬೆಂಕಿಯಲ್ಲಿ ಬೇಯುವಾಗ ಕೂದಲು ಸೀಳುವ ತರ್ಕಕ್ಕೆ ಅಕ್ಷರಗಳನ್ನು ನಲುಗಿಸುತ ಕೂಡಿವುದರಲ್ಲಿ ಅರ್ಥವಿಲ್ಲ ಎನಿಸಿತು. ಎಂದಿನಂತೆ ಮತ್ತೆ ಹಳ್ಳಿಗಳತ್ತ ಹೊರಡಲು ತೀರ್ಮಾನಿಸಿದೆವು. ಕಳೆದ ವರ್ಷ ಐದು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ರೇಗಾ ಪ್ರಚಾರ ಮಾಡಿದ್ದೆವು. ಮತ್ತು ಪಾಳಾ ಕೆರೆಯಲ್ಲಿ ಕೆಲಸ ಆರಂಭಿಸಿದ್ದೆವು. ಮೂರು ಥಾಂಡಾ ಮತ್ತು ಒಂದು ಹಳ್ಳಿಯ ಜನರು ಕೆರೆಯಲ್ಲಿ ಕೆಲಸ ಮಾಡಿರುವರು.

ಕೆರೆಗಳತ್ತ ನಮ್ಮ ನಡಿಗೆ

ಆದರೀಗ ಕೆರೆಗಳು ಎಲ್ಲೆಲ್ಲಿ ಇವೆಯೋ ಅಲ್ಲೆಲ್ಲ ಹಳ್ಳಿಗಳ ಜನರತ್ತ ನಮ್ಮ ನಡಿಗೆ ಎಂದು ನಿರ್ಧರಿಸಿ ಕಳೆದ ಒಂದುವರೆ ತಿಂಗಳಿಂದ ಕೆರೆ ಕೇಂದ್ರೀಕರಿಸಿ ಕೆಲಸ ಆರಂಭಿಸಿದ್ದೇವೆ. ಇದರ ಪ್ರತಿ ಫಲವಾಗಿ ಮಾರ್ಚ್ 26ರಂದು ಆಳಂದ ತಾಲ್ಲೂಕಿನ ನರೋಣ ಕ್ಷೇತ್ರ ಪಾಳ್ಯದಲ್ಲಿ ಸುಮಾರು ಮೂರುವರೆ ಸಾವಿರಕ್ಕೂ ಅಧಿಕ ಮಹಿಳೆಯರು ಅಂತರರಾಷ್ಟ್ರೀಯ ದಿನವನ್ನು 'ಕೆಲಸದ ಹಕ್ಕಿಗಾಗಿ ಮತ್ತು ನೀರು ಸಂರಕ್ಷಣೆ' ಗಾಗಿ ಆಚರಿಸಿದರು. ಈಗ ನಮ್ಮ ಸಂಘಟನೆಯ ಶ್ರಮದ ಭಾಗವಾಗಿ ಎಂಟು ಕೆರೆಗಳಲ್ಲಿ ಕಾಮಗಾರಿ ಆರಂಭವಾಗಿದೆ. ಸರಿ ಸುಮಾರು ನಾಲ್ಕು ಸಾವಿರಕ್ಕೂ ಅಧಿಕ ಕಾರ್ಮಿಕರು ಕೆಲಸದಲ್ಲಿ ತೊಡಗಿದ್ದಾರೆ.

ಕ್ರಮೇಣ ಈ ಕೆಲಸಕ್ಕೆ ಕೈ ಜೋಡಿಸಿದವರು ಕಲಬುರಗಿಯ ವ್ಹಿ.ಜಿ.ಮಹಿಳಾ ಮಹಾವಿದ್ಯಾಲಯ, ರಜೆಯ ದಿನಗಳಲ್ಲಿ ಮಸ್ತಿ-ಮೋಜಿಗೆ ಹೋಗದೆ ಹಳ್ಳಿಗಳ ಜನತೆಯೊಂದಿಗೆ ನಾವಿದ್ದೇವೆ ಎಂದು ಆದರ್ಶ ಶಿಕ್ಷಕರಾಗಿರುವ ನಿಂಗಣ್ಣ ಮುಂಗೊಂಡಿ ನೇತೃತ್ವದಲ್ಲಿ ಆರು ಜನ ಶಿಕ್ಷಕರು ಹಳ್ಳಿಗಳಿಗೆ ಪಯಣ ಹೊರಟಿದ್ದಾರೆ. ಸಿದ್ದಲಿಂಗ ಸಿ ಸು-ಣಗಾರ, ಮಲ್ಲಿಕಾರ್ಜುನ ಜಿ ಓಕಳಿ, ಶಂಭುಲಿಂಗ, ರವೀಂದ್ರ ರುದ್ರವಾಡಿ ಮತ್ತು ಅಪ್ಪಾಸಾಹೇಬ ತೀರ್ಥ ಎಂಬುವವರೇ ಈ ಆರು ಜನ ಶಿಕ್ಷಕರು ಸೂಟಿಯ ದಿನಗಳನ್ನು ಹಳ್ಳಿಗರ ಸಂಕಟ ನಿವಾರಣೆಗಾಗಿ ಮೀಸಲಿಟ್ಟಿದ್ದಾರೆ. ಕೇಂದ್ರೀಯ ವಿಶ್ವ ವಿದ್ಯಾಲಯದ ಎಂ.ಎಸ್.ಡಬ್ಲ್ಯು.ಡಿ. ವಿದ್ಯಾರ್ಥಿಗಳನ್ನು ತೊಡಗಿಸುವುದಾಗಿ ಆಶ್ವಾಸನೆ ಬಂದಿದೆ. ಈಗಾಗಲೇ ಮಾರ್ಚ್ 26ರಂದು ಮಹಿಳಾ ದಿನಾಚರಣೆಗೆ ಬಂದು ಕಾರ್ಮಿಕರಿಗೆ ಅರ್ಜಿ ತುಂಬಿಸುವಲ್ಲಿ ಈ ವಿದ್ಯಾರ್ಥಿಗಳು ತಮ್ಮ ಜವಾಬ್ದಾರಿ ನಿಭಾಯಿಸಿರುವರು. ಮುಂದೆಯೂ ಜೊತೆ ಬರುವ ಭರವಸೆ ನೀಡಿರುವರು. ಅಕ್ಷರ ಲೋಕದಲ್ಲಿ ಲೀನವಾದ ಜನತೆ ಒಂದೆಡೆ, ಬುದ್ಧ, ಬಸವ, ಅಂಬೇಡ್ಕರ್, ಮಾರ್ಕ್ಸ್, ಲೆನಿನ್, ಗಾಂಧಿ ಮುಂತಾದವರನ್ನು ಹಂಚಿಕೊಳ್ಳಲು ದಿನವೂ ತರ್ಕದ ಬೆನ್ನೇರಿದವರು ಇನ್ನೊಂದೆಡೆ ಇವರ ಇವರುಗಳ ಮಧ್ಯದಲ್ಲಿಯೇ ಒಂದಿಷ್ಟು ಜನರು ಹಳ್ಳಿಗಳತ್ತ ಹೆಜ್ಜೆ ಹಾಕಿದ್ದು ನಮಗಂತೂ ಹಿಡಿಸಲಾರದ ಹಿಗ್ಗು ಅಭಿಮಾನ ತಂದಿದೆ. ಅರ್ಜಿ ತುಂಬುವುದರಿಂದ ಹಿಡಿದು ಕೆಲಸ ದೊರಕಿಸುವವರೆಗೆ ಬಿರು ಬಿಸಿಲಿನಲ್ಲಿ ನಡೆದಾಡುವ ನಿಂಗಪ್ಪ ಮಾಸ್ತರ್‌ರ ಛಲ ನಮ್ಮ ಶಕ್ತಿಯೇ ಹೌದು. ಅವರ ಬಾಳ ಸಂಗಾತಿ ನಂದಾ ಮನೆಗೆಲಸ ಮುಗಿಸಿಕೊಂಡು ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ ಓಡಾಡಿ ಶ್ರಮಿಕರ ಋಣ ತೀರಿಸುವ ಪರಿಗೆ ಬೆರಗಾಗಿದ್ದೇವೆ. ಇವರ ಸಾಗರದಂತ ಬದ್ಧತೆಯ ಮುಂದೆ ಕೊಂಚವಾದರೂ ಸಾರ್ಥಕವಾಗುವಂಥ ಕೆಲಸ ಎಡೆಬಿಡದೆ ಮಾಡುವ ದಿಕ್ಕಿನತ್ತ ಎಲ್ಲರೂ ತೊಡಗಿಸಿಕೊಂಡಿದ್ದೇವೆ. ಇದೇ ರೀತಿಯ ಇನ್ನಷ್ಟು ಮನಸುಗಳು ಎಲ್ಲ ಹಳ್ಳಿಗಳಿಗೆ ನುಗ್ಗಲಿ ಮತ್ತು ಬರದ ಬೇಗೆಯಲ್ಲಿ ಬೇಯುತ್ತಿರುವ ಜನತೆಗೆ ಕೆಲಸ ದೊರಕಿಸಲು ನೆರವಾಗಲೆಂದು ಬಯಸುತ್ತೇವೆ.

ಹಾಂ ಬಿಸಿಲಿದೆ. ಏನು ಮಾಡುವುದು...? ಸೂರ್ಯನೊಂದಿಗೂ ಕದನ ಹೂಡುತ್ತ ಹಳ್ಳಿ ತಾಂಡಾಗಳಲ್ಲಿ ಸುತ್ತಾಡುತ್ತಿದ್ದೇವೆ. ಜನತೆಯ ಮುಗ್ಧತೆ, ತಾಯ್ತನದಂತಹ ಹೃದಯಕ್ಕೆ ಶರಣಾಗಿದ್ದೇವೆ. ಇದೊಂದು ಹುಚ್ಚೇ ಅನ್ನಬಹುದು. ಹುಚ್ಚಿಲ್ಲದಿದ್ದರೆ ಕೆಲಸದಲ್ಲಿ ಆನಂದ ಸಿಗಲಾರದು. ಈ ಆನಂದದಲ್ಲಿ ಪಾಲ್ಗೊಳ್ಳುವವರ ಪಟ್ಟಿ ಬೆಳೆಯಲೆನಿಸುವುದು. ಮುನ್ನಳ್ಳಿಯ ವಿಜಯಲಕ್ಷ್ಮಿ, ಸುದೇವಿ ತಮ್ಮೂರಲ್ಲದೆ ಸುತ್ತೆಲ್ಲ ಹಳ್ಳಿಗಳಿಗೂ ಸುತ್ತಾಡಿ ಜನರ ಕೈಗೆ ಕೆಲಸ ದೊರಕಿಸಲು ಶ್ರಮಿಸುತ್ತಿರುವರು.... ನಮ್ಮ ದೇವದಾಸಿ ಅಕ್ಕಂದಿರರು ಕೆಲವು ಹಳ್ಳಿಗಳ ಪಟ್ಟಿ ಮಾಡಿಕೊಂಡು ಅಲ್ಲೆಲ್ಲ ತಮ್ಮ ಶ್ರಮ ಹಾಕುತ್ತಿರುವರು..

ವಿದ್ಯಾರ್ಥಿಗಳೂ ಅಧಿಕಾರಿಗಳೂ ಬೆಂಬಲಕ್ಕೆ

ವಿದ್ಯಾರ್ಥಿಗಳೂ ಈ ಹೊತ್ತಿನಲ್ಲಿ ಹಳ್ಳಿಗಳತ್ತ ಬರಲಿ...ಕೆರೆ ಬಾವಿ ಚೆಕ್ ಡ್ಯಾಮ್, ಗೋಕಟ್ಟಾ, ಕೃಷಿಹೊಂಡಾ ನಿರ್ಮಾಣವಾದರೆ, ಹೂಳೆತ್ತಿದರೆ ಬರುವ ಮಳೆಗಾಲದಲ್ಲಿ ನೀರು ತುಂಬಿಕೊಳ್ಳಲು ಸಾಧ್ಯವಿದೆ. ಸುರಿದ ಮಳೆನೀರು ಹಿಡಿದಿಟ್ಟುಕೊಳ್ಳಲು ಏನೂ ಇಲ್ಲದಿದ್ದರೆ ಹರಿದು ಹೋಗುವುದು ಖಾತ್ರಿ. ಏನು ಪ್ರಯೋಜನ? ಹೀಗಾಗಿ ಕೆರೆ ಹೂಳೆತ್ತಿಸೋಣ, ಈ ಕೆಲಸಕ್ಕೆ ರೇಗಾ ಅಡಿಯಲ್ಲಿ ದಿನಕ್ಕೆ ರೂ.234 ಕೂಲಿ ಇದೆ. (ರೂ.224 ಕೂಲಿ, ರೂ10 ಬುಟ್ಟಿ ಸಲಿಗೆ, ಗುದ್ದಲಿಯ ಬಾಡಿಗೆ) ಜನರ ಕೈಗೆ ಕೆಲಸವಾಯ್ತು, ಕೆರೆ ಹೂಳೆತ್ತಿದ್ದಕ್ಕೆ ಮುಂದಕ್ಕೆ ಮಳೆ ನೀರು ತುಂಬಿಕೊಂಡು ನೀರಿನ ಅಂತರ್ಜಲಮಟ್ಟ ಹೆಚ್ಚಲು ಕಾರಣವೂ ಆಯ್ತು... ಮತ್ತು ಕೆಲಸವಿಲ್ಲದ್ದಕ್ಕಾಗಿ ಗುಳೆ ಹೋಗುವ ಜನರು ತಮ್ಮೂರಲ್ಲಿಯೇ ಉಳಿದು ಕೆಲಸ ಪಡೆಯಲು ಸಾಧ್ಯವಾಗುವುದು .

ಇನ್ನೊಂದು ಮಾತು ಇಲ್ಲಿ ಹೇಳಲೇಬೇಕು.. ನಮ್ಮ ಈ ಕೆಲಸಕ್ಕೆ ಸಾಮಾನ್ಯವಾಗಿ ಅಧಿಕಾರಿಗಳು ಕೈ ಜೋಡಿಸುವುದು ಕಡಿಮೆ. ಬೆಂಬಲಿಸಿದರೂ ಕಾಟಾಚಾರಕ್ಕೆ. ಆದರೆ ಕಲಬುರಗಿ ಜಿಲ್ಲೆಯ ಜಿಲ್ಲಾ ಪಂಚಾಯತ್‌ನ ಕಾರ್ಯ ನಿರ್ವಾಹಕ ಅಧಿಕಾರಿಯಾದ ಅನಿರುದ್ಧ ಶ್ರವಣ ಅಂತರಂಗ ಸಾಕ್ಷಿಯಾಗಿ ದುಡಿಯುವ ಜನತೆಯ ಪರ ಬದ್ಧತೆಯಿಂದ ನಿಂತು ಮನರೇಗಾ ಜಾರಿಗಾಗಿ ಶ್ರಮಿಸುತ್ತಿರುವುದು ಮತ್ತು ನಮ್ಮ ಹುಚ್ಚಿಗೆ ಇಂಬಾಗಿ ನಿಂತಿರುವುದು ಹೆಮ್ಮೆಯ ಸಂಗತಿಯೇ..

ಆದರೆ ಸಂಕಟದ ಮಾತೊಂದು ನಿಮ್ಮೊಂದಿಗೆ ಹಂಚಿಕೊಳ್ಳಲೇಬೇಕು... ಕೆಲಸವೇನೋ ದೊರಕಿಸಬಹುದು, ಆದರೆ ಕಡೆ ಪಕ್ಷ ಹದಿನೈದು ದಿನಕ್ಕೊಮ್ಮೆ ಕೂಲಿ ಪಾವತಿಯಾಗುತ್ತಿಲ್ಲ. ಇದರಿಂದ ತುಂಬ ಸಮಸ್ಯೆಯಾಗಿದೆ. ಇದಕ್ಕೆ ಕಾರಣವೇನು ಗೊತ್ತೇ? ಕೇಂದ್ರ ಸರಕಾರವು ಎಲೆಕ್ಟ್ರಾನಿಕ್ ಫಂಡ್ ಮ್ಯಾನೇಜ್ಮೆಂಟ್ ಸಿಸ್ಟಮ್ ಎಂದು ಹೊಸ ಪದ್ಧತಿಯೊಂದು ಪರಿಚಯಿಸಿದೆ. ತಾನೇ ನೇರವಾಗಿ ಬ್ಯಾಂಕ್ ಖಾತೆಗಳಿಗೆ ಹಣ ಜಮಾ ಮಾಡುವ ಕೇಂದ್ರೀಕರಣ ವ್ಯವಸ್ಥೆಯೊಂದು ತಂದಿದೆ. ಆದರೆ ಈ ಹೊಸ ಪದ್ಧತಿಯು ಕೂಲಿ ಪಾವತಿಸುವಲ್ಲಿ ಪೂರ್ತಿ ತಾಂತ್ರಿಕ ಸಮಸ್ಯೆಯಾಗಿ ಕರ್ನಾಟಕ ರಾಜ್ಯದಲ್ಲಿ ಈಗಾಗಲೇ ಕೆಲಸ ಮಾಡಿದ ಕೂಲಿ ಕಾರ್ಮಿಕರ ಕೂಲಿ ರೂ.246 ಕೋಟಿ ರೂಪಾಯಿ ಬಾಕಿ ಇದೆ. ಬರಗಾಲದಂತಹ ಸಂದರ್ಭದಲ್ಲಿಯೂ ಹೀಗೆ ತಿಂಗಳಾನುಗಟ್ಟಲೆಕೂಲಿ ಬಾಕಿ ಉಳಿಸಿಕೊಳ್ಳುವುದು ಕಟುಕತನವಲ್ಲದೆ ಮತ್ತೇನು? ತಾಂತ್ರಿಕದೋಷ ಸರಿಪಡಿಸುವವರೆಗೆ ಜನರು ಉಪವಾಸ ಇರಲು ಸಾಧ್ಯವೇ? ಕೇಂದ್ರ ಸರಕಾರವಾಗಲಿ ರಾಜ್ಯ ಸರಕಾರವಾಗಲಿ ಕೂಡಲೇ ಪರ್ಯಾಯ ವ್ಯವಸ್ಥೆ ಮಾಡುವ ಜವಾಬ್ದಾರಿ ಹೊರಬೇಕಲ್ಲವೇ? ರಾಜ್ಯ ಸರಕಾರವೇನೋ ತಾನು ಪರ್ಯಾಯ ವ್ಯವಸ್ಥೆ ಮಾಡುವುದಾಗಿ ಹೇಳಿದೆ. ಈ ಹಿಂದೆಯೂ ರೂ.700 ಕೋಟಿಯಷ್ಟು ಹಣ ಕೊಟ್ಟಿದೆ. ಆದರೆ ಬರಗಾಲದಲ್ಲಿ ಜನರು ಎಲ್ಲ ರೀತಿಯ ಸಂಕಟ ಸಮಸ್ಯೆಗಳನ್ನು ಎದುರಿಸುವಾಗ ಕೂಡಲೇ ಪರಿಹಾರೋಪಾಯ ಕಲ್ಪಿಸಬೇಕು. .... ಇಂದಿಗೆ ಇಷ್ಟು ಬರೆದಿರುವೆವು... ಗ್ರಾಮಗಳಲ್ಲಿನ ಇನ್ನಷ್ಟು ಅನುಭವಗಳನ್ನು ಮತ್ತೆ ನಿಮ್ಮೊಂದಿಗೆ ಹಂಚಿಕೊಳ್ಳುವೆವು..


-ನೀಲಾ ಕೆ., ಡಾ.ಮೀನಾಕ್ಷಿ ಬಾಳಿ, ಡಾ. ಪ್ರಭು ಖಾನಾಪುರೆಮ ಗಣಪತಿ ಕೋಡ್ಲೆ

ನಮ್ಮ ಚುರು-ಟ್ವೀಟ್

Parmita Chowdhury‏@ Parmi0727

2012ರಲ್ಲಿ ನಿರ್ಭಯಾ. 2016ರಲ್ಲಿ ಜಿಶಾ. ವರ್ಷ ಬದಲಾಗಿದೆ, ಕಾನೂನು ಬದಲಾಗಿದೆ. ಇನ್ನೇನೋ ಬದಲಾಗಿದೆ. ಆದರೆ ಮಹಿಳೆಯರ ಅಭದ್ರತೆ ಬದಲಾಗಿಲ್ಲ. #JusticeForJisha

- ಪರೊಮಿತಾ ಚೌಧರಿ



ಕ್ಯಾಸ್ಟ್ರೋ ಕಥೆ

11

ಮೊಂಕಾಡಾ : ಹೋರಾಟದ ಹೊಸ ಮಾದರಿ?

ಬಹಳ ಮಹತ್ವಾಕಾಂಕ್ಷಿಯಾದ ಮೊಂಕಾಡಾ ದಾಳಿಯು ಸಂಪೂರ್ಣವಾಗಿ ವಿಫಲವಾಯಿತು. ಅಕಸ್ಮಾತ್ ಏನಾದರೂ ಅಂದುಕೊಂಡಿದ್ದಂತೆ ನಡೆದಿದ್ದರೆ ಫಿಡೆಲ್ ಏನು ಮಾಡುತ್ತಿದ್ದರು? ಸುಮಾರು 3000 ಶಸ್ತ್ರಾಸ್ತ್ರಗಳು ಇವರ ಕೈವಶವಾಗುತ್ತಿದ್ದವು. ಇವರೆಲ್ಲರೂ ಸಾರ್ಜೆಂಟ್ಸ್ ಆಗಿದ್ದರಿಂದ "ಸಾರ್ಜೆಂಟ್ಸ್ ದಂಗೆ" ಎಂದು ಬಿಂಬಿಸುವ ಯೋಜನೆಯಿತ್ತು. ಬಟಿಸ್ಟಾ ಸೈನಿಕರನ್ನು ವಶಪಡೆದು ಅವರ ಹೆಸರು ಮತ್ತಿತರೆ ಮಾಹಿತಿಗಳ ಆಧಾರದಲ್ಲಿ ಎಲ್ಲಾ ಯೂನಿಟ್ ಕಮಾಂಡರ್‌ಗಳಿಗೆ ಸಾರ್ಜೆಂಟ್ಸ್ ದಂಗೆ ಎದ್ದಿದ್ದಾರೆಂದು ಸಂದೇಶ ರವಾನೆ ಮಾಡುವ ಯೋಜನೆಯಿತ್ತು. ಇದರಿಂದ ಶತ್ರುಗಳು ಸಂಪೂರ್ಣವಾಗಿ ಗೊಂದಲಗಳಿಗೆ ಒಳಗಾಗಿ ಇಡೀ ಕ್ಯೂಬಾದಲ್ಲಿ ಅದರ ಪರಿಣಾಮ ಉಂಟಾಗುತ್ತಿತ್ತು. ಆದರೆ ಹೀಗಾಗಲಿಲ್ಲ. ಮೊಂಕಾಡಾ ದಾಳಿಯ ಗೆರಿಲ್ಲಾ ಯುದ್ಧ ವಿಧಾನ ಲ್ಯಾಟಿನ್ ಅಮೇರಿಕಾದ ಬೇರೆಲ್ಲಾದರೂ ನಡೆದಿತ್ತೇ? ಬೊನಿಯಾಟೋ ಜೈಲಿನಲ್ಲೇ ಫಿಡೆಲ್ ರನ್ನು ಜೊತೆಗಾರರನ್ನೂ ಇರಿಸಿದ್ದರು. ಆದರೆ ಅವರೊಂದಿಗೆ ಮಾತನಾಡದಂತೆ ನಿಷೇಧ ಹೇರಿದರು. ಫಿಡೆಲ್ ಇದರ ವಿರುದ್ಧ ಉಪವಾಸ ಆರಂಭಿಸಿದರು.

ಮೂಲ: ಇಗ್ನೇಶಿಯಸ್ ರಾಮೊನೆಟ್
ಸಂಗ್ರಹಾನುವಾದ : ಕೆ. ಪ್ರಕಾಶ್

ದುರ್ಗಮವಾದ ಬಂಡೆಗಳು ಮತ್ತು ಬೆಟ್ಟಗಳ ಸಾಲಿನ ಪಯಣದ ಪ್ರಯತ್ನದಲ್ಲಿ ಬಟಿಸ್ಟಾನ ಸೈನಿಕರ ಬಂದೂಕಿನ ಗುಂಡುಗಳಿಗೆ ಆಕಸ್ಮಿಕವಾಗಿ ಸಿಕ್ಕಿ ಹಲವರು ಗಾಯಗೊಂಡರು. ಅವರಿಗೆ ಚಿಕಿತ್ಸೆ ಕೊಡಲು ಯಾರೂ ಇರಲಿಲ್ಲ. ಹೀಗಾಗಿ ಗಾಯಗೊಂಡ ಮತ್ತು ಸುಸ್ತಾದ ಹನ್ನೆರೆಡು ಜನರನ್ನು ಸ್ಯಾಂಟಿಯಾಗೋ ಕಡೆ ಕಳುಹಿಸಲು ಫಿಡೆಲ್ ತೀರ್ಮಾನಿಸಿದರು. ಉಳಿದದ್ದು ಎಂಟು ಜನ. ಆದರೂ ಹೋರಾಟದ ಕಲ್ಪನೆಯನ್ನು ಫಿಡೆಲ್ ತೊರೆಯಲಿಲ್ಲ. ಆದರೆ ಆಗಿನ ಸಂಕಷ್ಟದ ಪರಿಸ್ಥಿತಿಯನ್ನು ಪರಿಗಣಿಸಿ, ಪರ್ವತ ಶ್ರೇಣಿಯನ್ನು ದಾಟುವ ಯೋಜನೆಯನ್ನು ಕೈಬಿಟ್ಟರು. ಕರಾವಳಿ ತೀರದಲ್ಲಿ ಮುಂದುವರೆದು ಸ್ಯಾಂಟಿಯಾಗೊ ಡಿ ಕ್ಯೂಬಾ ಕೊಲ್ಲಿಯ ಮೂಲಕ ದೋಣಿಯನ್ನು ಬಳಸಿ ಸಿಯೆರ್ರಾ ಮೇಸ್ತ್ರಾಕ್ಕೆ ಹತ್ತಿರದ ಮತ್ತೊಂದು ಬದಿಗೆ ಹೋಗುವ ಬಗ್ಗೆ ತೀರ್ಮಾನಿಸಿದರು. ಆದರೆ ಎಂಟು ಜನರಲ್ಲಿ ಐದು ಜನರ ದೈಹಿಕ ಪರಿಸ್ಥಿತಿ ಇಂತಹ ಸಾಹಸಕ್ಕೆ ಅವಕಾಶವನ್ನೇ ನೀಡಲಿಲ್ಲ. ಅವರು ಜನರ ಮತ್ತು ಚರ್ಚ್‌ನ ಒತ್ತಡಗಳಿಂದಾಗಿ ಲಭ್ಯವಾಗಿದ್ದ ಅನುಕೂಲ ಪಡೆದು ಶರಣಾಗುವುದೆಂದು ತೀರ್ಮಾನಿಸಿದರು. ಅದಕ್ಕಾಗಿ ಒಬ್ಬ ರೈತಕಾರ್ಮಿಕನನ್ನು (ಕಂಪಾಸಿನೊ) ಗುರುತಿಸಿ ಅವರನ್ನು ಅಲ್ಲಿ ಉಳಿಸುವ ಕುರಿತು ಯೋಜಿಸಿದರು. ಉಳಿದದ್ದು ಕೊನೆಗೆ ಮೂವರು : ಆಸ್ಕರ್ ಆಲ್ಕಲ್ದೆ, ಜೋಸ್ ಜ್ವಾರೆಸ್ ಮತ್ತು ಫಿಡೆಲ್. ಈ ಮೂವರು ಎರಡು ಮೂರು ಕಿಲೋಮೀಟರ್ ದುರ್ಗಮ ಹಾದಿಯಲ್ಲಿ ನಡೆದು ಆ ರಾತ್ರಿ ಅಲ್ಲೇ ತಂಗಿದ್ದು ನಸುಕಿನಲ್ಲೆದ್ದು ಹೊರಡಲು ತೀರ್ಮಾನಿಸಿದರು. ಆ ರೀತಿ ಮುಂದುವರಿಯುತ್ತಿರುವಾಗ ಮಾರ್ಗ ಮಧ್ಯೆ ವರಯೆಂಟಿಯರ್‍ರಾ1 ಕಂಡಿತು. ಸಾಮಾನ್ಯವಾಗಿ ರಾತ್ರಿ ವೇಳೆ ಇವರು ದಟ್ಟವಾದ ಗಿಡಗಳು ಅಥವಾ ಪೊದೆಗಳ ಮಧ್ಯೆ ಮಲಗುತ್ತಿದ್ದರು. ಈ ಗುಡಿಸಲು ಕಂಡೊಡನೆ ಹಸಿವು, ಬಳಲಿಕೆಯ ಆಯಾಸದ ಪರಿಸ್ಥಿತಿಯು ಅದರಲ್ಲಿ ವಿಶ್ರಮಿಸುವಂತೆ ಪ್ರಚೋದಿಸಿತು. ಶತ್ರುವಿನ ದಾಳಿಯ ಸಾಧ್ಯತೆಗಳನ್ನು ಗಮನಿಸದೆ ನಿದ್ರೆ ಮಾಡಿದರು.

ಫಿಡೆಲ್ ಸಾವನ್ನು ತಪ್ಪಿಸಿದ ಲೆಫ್ಟಿನೆಂಟ್

ನಾಲ್ಕೈದು ಗಂಟೆಗಳ ನಿದ್ರೆಯಾಗಿರಬಹುದು. ಗುಡಿಸಲಿನ ಹೊರಗಡೆ ಸದ್ದು. ಇವರು ಎಚ್ಚೆತ್ತುಕೊಳ್ಳುವಷ್ಟರಲ್ಲಿ ಬಟಿಸ್ಟಾನ ಯಮದೂತ ಸೈನಿಕರ ಬಂದೂಕಿನ ಬಯೋನೆಟ್ಟುಗಳು ಇವರ ಎದೆಗೆ ಆತುಕೊಂಡು ನಿಂತುಬಿಟ್ಟಿದ್ದವು. ನೋಡನೋಡುತ್ತಿದ್ದಂತೆ ಕೆಲವೇ ಕ್ಷಣಗಳಲ್ಲಿ ಇವರು ಬಂಧಿಗಳಾಗಿದ್ದರು.

ಬಟಿಸ್ಟಾ ಸೈನಿಕರ ಧಮನಿಗಳಲ್ಲಿ ರಕ್ತ ಉಕ್ಕರಿಯುತ್ತಿತ್ತು. ಆ ಸ್ಥಳದಲ್ಲೇ ಇವರನ್ನು ಕೊಂದುಬಿಡುವಂತೆ ಕಾಣುತ್ತಿದ್ದರು. ಇಬ್ಬರ ನಡುವೆ ಜೋರು ಜೋರು ಚರ್ಚೆ ನಡೆಯಲಾರಂಭಿಸಿತು. ಇವರಿದ್ದ ಪರಿಸ್ಥಿತಿ ಮತ್ತು ವೇಷಗಳಿಂದಾಗಿ ಸೈನಿಕರು ಇವರನ್ನು ಗುರುತು ಹಚ್ಚಲಿಲ್ಲ. ಅವರು ಫಿಡೆಲ್‌ನನ್ನು ಹೆಸರು ಕೇಳಿದರು – 'ಫ್ರಾನ್ಸಿಸ್ಕೋ ಗೊನ್ಸಾಲೆಜ್ ಕ್ಯಾಲ್ಡೆರೀನ್' ಎಂದು ಫಿಡೆಲ್ ಕೂಡಲೇ ಉತ್ತರಿಸಿದರು. ನಿಜವಾದ ಹೆಸರೇನಾದರೂ ಹೇಳಿದ್ದರೆ ಫಿಡೆಲ್‌ನ ಸಾವನ್ನು ಯಾರೂ ತಡೆಯಲಾಗುತ್ತಿರಲಿಲ್ಲ. ಅದೃಷ್ಟ ಫಿಡೆಲ್ ಪಾಲಿಗಿತ್ತು. ಪೆಡ್ರೋ ಸರ್ರಿಯಾ ಎಂಬ ಲೆಫ್ಟಿನೆಂಟ್ ಸೈನಿಕರಿಗೆ 'ಕೊಲ್ಲದಿರು'ವಂತೆ ಆದೇಶ ನೀಡಿದ. ಆದರೆ ಆ ನರಹಂತಕ ಸೈನಿಕರಿಗೆ ಅದು ಸಮಾಧಾನವಾಗಲಿಲ್ಲ. ಸರ್ರಿಯಾ ಒಂದು ರೀತಿ ಸ್ವಗತ ಎಂಬಂತೆ, 'ಕೊಲ್ಲಬೇಡಿ, ಕೊಲ್ಲಬೇಡಿ; ಚಿಂತನೆಗಳನ್ನು ಕೊಲ್ಲಲಾಗದು, ಚಿಂತನೆಗಳನ್ನು ಕೊಲ್ಲಲಾಗದು' ಎನ್ನುತ್ತಿದ್ದ.

ಪರಿಸ್ಥಿತಿ ಪರವಾಗಿಲ್ಲ ಎನ್ನುವಷ್ಟರಲ್ಲಿ, ಕೋಪಾವಿಷ್ಟರಾಗಿದ್ದ ಸೈನಿಕರು ಸುತ್ತಲ ಪೊದೆಗಳನ್ನು ಹುಡುಕತೊಡಗಿದರು. ಬಚ್ಚಿಟ್ಟಿದ್ದ ಐದು ಜನರ ಶಸ್ತ್ರಾಸ್ತ್ರಗಳು ದೊರಕಿಬಿಟ್ಟವು. ಓಹ್! ಅದೊಂದು ಅತ್ಯಂತ ಕ್ಲಿಷ್ಟಕರ ಸನ್ನಿವೇಶ. ಸೈನಿಕರ ರಕ್ತ ನೆತ್ತಿಗೇರಿತು. ಸೈನಿಕರನ್ನು ಸಮಾಧಾನಪಡಿಸಲು ಲೆಫ್ಟಿನೆಂಟ್ ಹರಸಾಹಸ ಪಡಬೇಕಾಯಿತು. ಹೇಗೋ ಮಾಡಿ ಅವರನ್ನು ಶಾಂತಗೊಳಿಸಿದರು – 'ಅವರನ್ನು ಕೊಲ್ಲಬೇಡಿ, ಚಿಂತನೆಗಳನ್ನು ಕೊಲ್ಲಲಾಗದು' ಎನ್ನುತ್ತಿದ್ದರು. ಹೀಗಾಗಿ ಫಿಡೆಲ್ ಮತ್ತು ಗೆಳೆಯರು ಬದುಕುಳಿದರು. ಇವರನ್ನು ಕರೆದುಕೊಂಡು ರಸ್ತೆ ಬದಿಗೆ ಬರುವಾಗ, "ಲೆಫ್ಟಿನೆಂಟ್ ನಾನು ನಿಮಗೆ ಒಂದು ವಿಚಾರ ಹೇಳಬೇಕೆಂದಿದ್ದೇನೆ – ನಾನೇ ಫಿಡೆಲ್ ಕ್ಯಾಸ್ಟ್ರೋ" ಎಂದು ಲೆಫ್ಟಿನೆಂಟ್ ಕಿವಿಯಲ್ಲಿ ಉಸುರಿದರು. ತಕ್ಷಣವೇ ಆತ ಗಾಬರಿ ಬಿದ್ದವನಂತೆ "ಇದನ್ನು ಹೇಳಬೇಡ, ಯಾರಿಗೂ ಹೇಳಬೇಡ" ಎಂದು ಎಚ್ಚರಿಸಿದರು. ಬಂಧಿತರನ್ನು ಟ್ರಕ್ ಒಂದಕ್ಕೆ ತುಂಬಿಸಿಕೊಂಡರು. ಅಲ್ಲಿಯೂ ಫಿಡೆಲ್‌ನ ಜೀವ ಉಳಿಸಲು ಲೆಫ್ಟಿನೆಂಟ್ ಸಹಾಯಕ್ಕೆ ಬಂದರು. ಟ್ರಕ್ ಡ್ರೈವರ್‌ನ ಪಕ್ಕದಲ್ಲಿ ಫಿಡೆಲ್‌ನನ್ನು ಕೂರಿಸಿದರು. ಫಿಡೆಲ್‌ನ ಪಕ್ಕದಲ್ಲಿ ಲೆಫ್ಟಿನೆಂಟ್ ಸರ್ರಿಯಾ ಕೂತರು.

ಅದೇ ಸಂದರ್ಭಕ್ಕೆ ಕಮಾಂಡರ್ ಪೆರೆಝ್ ಚೌಮಂಟ್ ಅಲ್ಲಿಗೆ ಬಂದ. ನಿಜವಾಗಿ ಹೇಳಬೇಕೆಂದರೆ ಆತ ಕೊಲೆಗಡುಕ ಮತ್ತು ಕಳ್ಳನಾಗಿದ್ದ. ತನ್ನ ಸೈನಿಕರ ಮೂಲಕ ಆ ಭಾಗದಲ್ಲಿ ಜನರನ್ನು ನಿರ್ದಾಕ್ಷಿಣ್ಯವಾಗಿ ಕೊಲ್ಲುತ್ತಿದ್ದ. ಅವನು ಫಿಡೆಲ್‌ನನ್ನು ತನಗೆ ಒಪ್ಪಿಸುವಂತೆ ಲೆಫ್ಟಿನೆಂಟ್‌ಗೆ ಆದೇಶಿಸಿದ. ಅವನು ಮೇಲಧಿಕಾರಿಯಾಗಿದ್ದ. ಆದರೆ ಲೆಫ್ಟಿನೆಂಟ್ ಒಂದು ರೀತಿಯ ಭಂಡ ಧೈರ್ಯ ಮಾಡಿ ಧೃಡವಾಗಿ ಕಮಾಂಡರ್‌ನ ಆದೇಶವನ್ನು ನಿರಾಕರಿಸಿದ! ಈ ಖೈದಿಗೆ ತಾನು ಜವಾಬ್ದಾರನಾಗಿರುವುದರಿಂದ 'ಈ ಮನುಷ್ಯ ತನ್ನ ಖೈದಿ' ಎಂದು ಸಮಜಾಯಿಷಿ ನೀಡಿದ. ಕಮಾಂಡರ್‌ಗೆ ಬೇರೆ ದಾರಿ ಉಳಿದಿರಲಿಲ್ಲ. ಮೊಂಕಾಡಾ ಬ್ಯಾರಕ್‌ಗಳಿಗೆ ಒಯ್ಯುವ ಬದಲು ಸರ್ರಿಯಾ ಇವರನ್ನು ವಿವಾಕ್‌ಗೆ ಕರೆದೊಯ್ದ. ವಿವಾಕ್, ಕ್ರೂರ ರಕ್ತಪಿಪಾಸುಗಳ ಮಿಲಿಟರಿ ಬ್ಯಾರಕ್ ಆಗಿರಲಿಲ್ಲ, ಬದಲಿಗೆ ಪೊಲೀಸ್ ನಿಯಂತ್ರಣದಲ್ಲಿದ್ದ ನಗರ ಕೇಂದ್ರದ ಒಂದು ನಾಗರಿಕ ಜೈಲಾಗಿತ್ತು. ಇದು ಕೋರ್ಟುಗಳ ವ್ಯಾಪ್ತಿಗೆ ಬರುತ್ತಿತ್ತು. ಸರ್ರಿಯಾ ಈಗ ಮೂರನೆ ಬಾರಿಗೆ ಫಿಡೆಲ್ ಮತ್ತು ಗೆಳೆಯರ ಜೀವ ಉಳಿಸಿದ್ದ. ಏಕೆಂದರೆ, ಬಟಿಸ್ಟಾ ಸರ್ಕಾರ ಮತ್ತು ಮಿಲಿಟರಿ, ಫಿಡೆಲ್ ಈಗಾಗಲೇ ಸತ್ತು ಹೋಗಿದ್ದಾನೆಂದು ಪತ್ರಿಕೆಗಳಲ್ಲೂ ಪ್ರಕಟಿಸಿಬಿಟ್ಟಿದ್ದರು. ಈ ಹಿನ್ನಲೆಯಲ್ಲಿ ಲೆಫ್ಟಿನೆಂಟ್ ಸರ್ರಿಯಾನ ನಡೆ ತುಂಬಾ ಮಹತ್ವದ್ದಾಗಿತ್ತು. ಒಮ್ಮೆ ನಾಗರಿಕ ಕೋರ್ಟ್‌ನ ಸುಪರ್ದಿಗೆ ಒಪ್ಪಿಸಿಬಿಟ್ಟರೆ ಕೊಲ್ಲುವುದು ಸುಲಭದ ವಿಚಾರವಾಗಿರಲಿಲ್ಲ.

ಕನಿಷ್ಟ ಮೂರು ಬಾರಿ ಫಿಡೆಲ್ ಮತ್ತು ಜೊತೆಗಾರರ ಸಾವನ್ನು ತಪ್ಪಿಸಿದ ಲೆಫ್ಟಿನೆಂಟ್ ಸರ್ರಿಯಾ ನಂತರ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಮುಂದೆ ಸಿಯೆರ್ರಾ ಮೇಸ್ತ್ರಾ ಯುದ್ಧ ಸಂದರ್ಭದಲ್ಲಿ ಸೆರೆವಾಸವನ್ನೂ ಅನುಭವಿಸಬೇಕಾಯಿತು (ಆದರೆ 1959 ರಲ್ಲಿ ಯುದ್ಧದಲ್ಲಿ ಫಿಡೆಲ್ ಜಯಗಳಿಸಿದಾಗ ಈ ಸರ್ರಿಯಾನಿಗೆ ಕ್ಯಾಪ್ಟನ್ ಆಗಿ ಬಡ್ತಿ ನೀಡಲಾಯ್ತು ಮತ್ತು ಗಣರಾಜ್ಯದ ಅಧ್ಯಕ್ಷರ ಮೊದಲ ಸಹಾಯಕರನ್ನಾಗಿ ನೇಮಿಸಲಾಯಿತು). ಬಟಿಸ್ಟಾ ಸರ್ಕಾರ ಫಿಡೆಲ್‌ರ ಕಾರ್ಯಾಚರಣೆಯ ಹಿಂದೆ ಹಿಂದಿನ ಅಧ್ಯಕ್ಷ ಕಾರ್ಲೋಸ್ ಪ್ರಿಯೊ ಸೊಕಾರ್ರೇಸ್‌ನ ಹಣಕಾಸಿನ ನೆರವಿದೆ ಎಂದು ಪ್ರತಿಪಾದಿಸತೊಡಗಿತ್ತು. ಅದರೆ ಫಿಡೆಲ್ ಪ್ರಸಕ್ತ ಕಾರ್ಯಾಚರಣೆಗೆ ತಾನೇ ಹೊಣೆಗಾರನೆಂದು ಬಹಳ ಸ್ಪಷ್ಟವಾಗಿ ಒಪ್ಪಿಕೊಂಡರು.

ಮೊಂಕಾಡಾ : ಹೋರಾಟದ ಹೊಸ ಮಾದರಿ

ಬಹಳ ಮಹತ್ವಾಕಾಂಕ್ಷಿಯಾದ ಮೊಂಕಾಡಾ ದಾಳಿಯು ಸಂಪೂರ್ಣವಾಗಿ ವಿಫಲವಾಯಿತು. ಅಕಸ್ಮಾತ್ ಏನಾದರೂ ಅಂದುಕೊಂಡಿದ್ದಂತೆ ನಡೆದಿದ್ದರೆ ಫಿಡೆಲ್ ಏನು ಮಾಡುತ್ತಿದ್ದರು? ಸುಮಾರು 3000 ಶಸ್ತ್ರಾಸ್ತ್ರಗಳು ಇವರ ಕೈವಶವಾಗುತ್ತಿದ್ದವು. ಇವರೆಲ್ಲರೂ ಸಾರ್ಜೆಂಟ್ಸ್ ಆಗಿದ್ದರಿಂದ "ಸಾರ್ಜೆಂಟ್ಸ್ ದಂಗೆ" ಎಂದು ಬಿಂಬಿಸುವ ಯೋಜನೆಯಿತ್ತು. ಬಟಿಸ್ಟಾ ಸೈನಿಕರನ್ನು ವಶಪಡೆದು ಅವರ ಹೆಸರು ಮತ್ತಿತರೆ ಮಾಹಿತಿಗಳ ಆಧಾರದಲ್ಲಿ ಎಲ್ಲಾ ಯೂನಿಟ್ ಕಮಾಂಡರ್‌ಗಳಿಗೆ ಸಾರ್ಜೆಂಟ್ಸ್ ದಂಗೆ ಎದ್ದಿದ್ದಾರೆಂದು ಸಂದೇಶ ರವಾನೆ ಮಾಡುವ ಯೋಜನೆಯಿತ್ತು. ಇದರಿಂದ ಶತ್ರುಗಳು ಸಂಪೂರ್ಣವಾಗಿ ಗೊಂದಲಗಳಿಗೆ ಒಳಗಾಗಿ ಇಡೀ ಕ್ಯೂಬಾದಲ್ಲಿ ಅದರ ಪರಿಣಾಮ ಉಂಟಾಗುತ್ತಿತ್ತು. ಆದರೆ ಹೀಗಾಗಲಿಲ್ಲ.

ಮೊಂಕಾಡಾ ದಾಳಿಯ ಗೆರಿಲ್ಲಾ ಯುದ್ಧ ವಿಧಾನ ಲ್ಯಾಟಿನ್ ಅಮೇರಿಕಾದ ಬೇರೆಲ್ಲಾದರೂ ನಡೆದಿತ್ತೇ? ಅದರ ಮಾದರಿ ಏನಾದರೂ ಫಿಡೆಲ್ ಮುಂದಿತ್ತೇ ಎಂಬ ಪ್ರಶ್ನೆ ಬರುತ್ತದೆ. 1948 ರ ಸುಮಾರಿಗೆ ಬೊಗೊಟಾದ ಹೋರಾಟಗಳಿಗೆ ಸ್ವತಃ ಫಿಡೆಲ್ ಸಾಕ್ಷಿಯಾಗಿದ್ದರು. ಕೊಲಂಬಿಯಾದಲ್ಲಿ ಹಲವು ಅನಿಯಮಿತ ಗುಂಪುಗಳು ಅಸ್ತಿತ್ವದಲ್ಲಿದ್ದವು. ಆದರೆ ಇವಾವೂ ನಂತರದ ಕಲ್ಪನೆಯಾದ ಗೆರಿಲ್ಲಾ ಗುಂಪುಗಳಾಗಿರಲಿಲ್ಲ. ಲ್ಯಾಟಿನ ಅಮೇರಿಕಾದಲ್ಲಿ ಹಲವು ಚಳುವಳಿಗಳು ನಡೆಯುತ್ತಿದ್ದವು ಮತ್ತು ಹಲವು ಸಶಸ್ತ್ರ ಕಾರ್ಯಾಚರಣೆಗಳು ನಡೆದಿದ್ದವು. ಮೆಕ್ಸಿಕನ್ ಕ್ರಾಂತಿ ಸ್ಫೂರ್ತಿಯನ್ನು ನೀಡಿತ್ತು. ನಿಕರಾಗುವಾದ ಸ್ಯಾಂಡಿನೋ ಚಳುವಳಿ ಮಹಾನ್ ಪ್ರೇರಣೆ ನೀಡಿತ್ತು ಮತ್ತು ಕ್ಯೂಬಾದ್ದೇ ಸ್ವಾತಂತ್ರ್ಯ ಹೋರಾಟಗಳ ನಿರ್ಭೀತ ಮ್ಯಾಸಿಯೊ, ಗೋಮೇಜ್ ಮತ್ತಿತರ ಕಮಾಂಡರ್‌ಗಳ ಚರಿತ್ರೆಯನ್ನು ಫಿಡೆಲ್ ಬಲ್ಲವರಾಗಿದ್ದರು. ಗಿಯಾಪ್, ಹೋ ಚಿ ಮಿನ್ಹ್, ಮಾವೋ ಇವರುಗಳು ಪ್ರತಿಪಾದಿಸಿದ ಯುದ್ಧತಂತ್ರಗಳನ್ನು ಫಿಡೆಲ್ ತಿಳಿದಿದ್ದರು ಎನ್ನಲಾಗಿದೆ. ಡಿಯೆನ್ ಬಿಯೆನ್ ಫೂ–ದಲ್ಲಿ 1954 ರಲ್ಲಿ ಫ್ರೆಂಚ್ ಸೈನ್ಯವನ್ನು ವೀರಾವೇಶದಿಂದ ಸೋಲಿಸಿದ ವಿಯೆಟ್ನಾಂ ಸೈನ್ಯ ಮತ್ತು ಜನತೆಯನ್ನು ಫಿಡೆಲ್ ಬಲ್ಲವರಾಗಿದ್ದರು. ಅಲ್ಲಿ ನಿಯಮಿತವಾದ ಸೈನ್ಯವಿತ್ತು. ಇಲ್ಲಿ ಕ್ಯೂಬಾದಲ್ಲಿ ಅಂತಹ ಸೈನ್ಯವಿರಲಿಲ್ಲ. ಅಲ್ಲಿ ನಡೆದುದು ಸಂಪೂರ್ಣವಾಗಿ ಭಿನ್ನವಾದ ಯುದ್ಧವಾಗಿತ್ತು ಎನ್ನುತ್ತಾರೆ ಫಿಡೆಲ್. ಇನ್ನು ಚೀನಾದಲ್ಲಿ ಮಾವೋ ನಡೆಸಿದ ಧೀರ್ಘ ಪಯಣವು ಅತ್ಯದ್ಭುತ ತಂತ್ರಗಾರಿಕೆ ಮತ್ತು ರಾಜಕೀಯ ಮಿಲಿಟರಿ ಕಾರ್ಯಾಚರಣೆ ಎಂಬುದನ್ನು ಫಿಡೆಲ್ ಒಪ್ಪುತ್ತಲೇ ಆ ವಿಧಾನ ಕ್ಯೂಬಾಕ್ಕೆ ಯಾವುದೇ ರೀತಿಯಲ್ಲೂ ಪ್ರಯೋಜಕವಾಗಿರಲಿಲ್ಲ ಎಂದಿದ್ದಾರೆ. ಮಾವೋ ಏನನ್ನೇ ಬೇಕಾದರೂ ಸಾಧಿಸಬಹುದು ಎಂಬುದನ್ನು ನಿರೂಪಿಸಿದರು. ಆದರೆ ಕ್ಯೂಬಾದ ಹೋರಾಟ ಬೇರೆಯದೇ ಪರಿಸ್ಥಿತಿಯಲ್ಲಿ ಸಂಘಟಿಸಿದುದಾಗಿತ್ತು ಎಂದಿದ್ದಾರೆ.

ಬೊನಿಯಾಟೋ ಜೈಲಿನಲ್ಲಿ

ಯಾವುದೇ ಕ್ಷಣದಲ್ಲೂ ಬಟಿಸ್ಟಾ ಸರ್ಕಾರ ತನ್ನನ್ನು ಏನು ಬೇಕಾದರೂ ಮಾಡಬಹುದು ಎಂದು ಫಿಡೆಲ್‌ಗೆ ಅನಿಸಿಬಿಟ್ಟಿತ್ತು. ಅದೇ ಸಂದರ್ಭಕ್ಕೆ ತನ್ನನ್ನು ಇರಿಸಿದ್ದ ಬೊನಿಯಾಟೋ ಜೈಲಿನಲ್ಲೇ ತನ್ನ ಜೊತೆಗಾರರನ್ನೂ ಇರಿಸಿದ್ದರು. ಆದರೆ ಅವರೊಂದಿಗೆ ಮಾತನಾಡದಂತೆ ನಿಷೇಧ ಹೇರಿದರು. ಫಿಡೆಲ್ ಇದರ ವಿರುದ್ಧ ಉಪವಾಸ ಆರಂಭಿಸಿದರು. ಆದರೆ ಜೈಲಿನ ಅಧಿಕಾರಿಗಳು ಇವರನ್ನು ಮತ್ತೂ ಪ್ರತ್ಯೇಕಿಸಿದರು. ಪ್ರತ್ಯೇಕ ಕೋಣೆಯೊಂದರಲ್ಲಿ ಎಪ್ಪತ್ತೈದು ದಿನಗಳನ್ನು ಕಳೆಯಬೇಕಾಯ್ತು. ಆದರೂ ಫಿಡೆಲ್ ಗಾರ್ಡ್‌ಗಳನ್ನು ಸ್ನೇಹಿತರನ್ನಾಗಿ ಮಾಡಿಕೊಳ್ಳುವುದು ಮತ್ತು ಕಾರ್ಯಸಾಧಿಸುವುದರಲ್ಲಿ ಯಶಸ್ವಿಯಾಗುತ್ತಲೇ ಇದ್ದರು. ಬಟಿಸ್ಟಾ ಸರ್ಕಾರ ಫಿಡೆಲ್ ಮತ್ತು ಗೆಳೆಯರನ್ನು ಕೊಲ್ಲುವ ಸಾಧ್ಯತೆಗಳು ಕಡಿಮೆಯಾದವು. ವಿಚಾರಣೆ ಸಂದರ್ಭದಲ್ಲಿ ಫಿಡೆಲ್ ಕ್ಯೂಬಾದ ಕ್ರಾಂತಿಕಾರಿ ಬದಲಾವಣೆಯ ಹಾದಿಯನ್ನು ಚರ್ಚಿಸಲು, ವಾದಿಸಲು ಮತ್ತು ಸಾರ್ವಜನಿಕಗೊಳಿಸಲು ಬಳಸಿಕೊಂಡರು. ತಮ್ಮ ವಾದದ ಕೊನೆಯ ಮಾತುಗಳು "ಇತಿಹಾಸ ನನ್ನನ್ನು ಮುಕ್ತಗೊಳಿಸುತ್ತದೆ" (History Will Absolve Me) ಎಂಬುದಾಗಿ ಪ್ರಸಿದ್ಧವಾಗಿವೆ. ●



ಜನಧನ ! : 53 ವರ್ಷಗಳಲ್ಲೇ ಅತಿ ಕಮ್ಮಿ ಬ್ಯಾಂಕ್ ಠೇವಣಿ ಬೆಳವಣಿಗೆ

ಎಪ್ರಿಲ್27, 2016ರಂದು 'ಪ್ರಧಾನ ಮಂತ್ರಿ ಜನಧನ ಯೋಜನಾ'ದಲ್ಲಿನ ಒಟ್ಟು ಖಾತೆಗಳ ಸಂಖ್ಯೆ 21.68ಕೋಟಿ ಎಂದು ಈ ಯೋಜನೆಯ ವೆಬ್‌ಸೈಟ್ ಹೇಳುತ್ತಿದೆ.

ಮಾರ್ಚ್ 31, 2016ಕ್ಕೆ ಕೊನೆಗೊಂಡ ಹಣಕಾಸು ವರ್ಷದಲ್ಲಿ ಒಟ್ಟು ಬ್ಯಾಂಕ್ ಠೇವಣಿಗಳ ಬೆಳವಣಿಗೆಯ ದರ ಕಳೆದ 53 ವರ್ಷಗಳಲ್ಲಿ ಮೊದಲ ಬಾರಿಗೆ ಒಂದಂಕಿಗೆ ಇಳಿದಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. 2015–16ರಲ್ಲಿ ಬ್ಯಾಂಕ್ ಠೇವಣಿಗಳ ಏರಿಕೆಯ ದರ 9.91ಶೇ. 2014–15ರಲ್ಲಿ ಇದು 10.74ಶೇ. ಇತ್ತು. ಅದರ ಹಿಂದಿನ ವರ್ಷ ಅಂ–ದರೆ ಯುಪಿಎ–2 ಸರಕಾರದ ಕೊನೆಯ ವರ್ಷದಲ್ಲಿ 14.15ಶೇ. ಇತ್ತು. ಯುಪಿಎ–2 ಸರಕಾರದ ಮೊದಲ ವರ್ಷದಲ್ಲಿ 17.18 ಶೇ. ಇತ್ತು.

'ಜನಧನ' ಯೋಜನೆ'ಯ 'ಭಾರೀ ಸಾಧನೆ'ಯ ನಂತರವೂ ಬ್ಯಾಂಕ್ ಠೇವಣಿಗಳ ಬೆಳವಣಿಗೆ ಪ್ರಮಾಣದಲ್ಲಿ ಇಂತಹ ಗಮನಾರ್ಹ ಇಳಿಕೆ ಏಕೆ ಎಂಬುದು ಬೂರ್ಜ್ವಾ ಆರ್ಥಿಕ ತಜ್ಞರು ತಲೆ ಕೆಡಿಸಿಕೊಳ್ಳುವಂತೆ ಮಾಡಿದೆಯಂತೆ.

ಅದರಲ್ಲೂ, ಠೇವಣಿ ಬಡ್ಡಿದರ ಹಣದುಬ್ಬರದ ಬಡ್ಡಿದರಕ್ಕಿಂತ ಹೆಚ್ಚಿದೆ. 2013–14 ರವರೆಗೆ ತದ್ವಿರುದ್ಧವಾಗಿತ್ತು, ಬ್ಯಾಂಕ್ ಬಡ್ಡಿದರ ಈಗಿನಕ್ಕಿಂತ ಹೆಚ್ಚಿದ್ದರೂ ಹಣದುಬ್ಬರ ದರ ಅದಕ್ಕಿಂತಲೂ ಹೆಚ್ಚಿತ್ತು. ಎರಡನೆಯದಾಗಿ, ರಿಯಲ್ ಎಸ್ಟೇಟ್‌ನಲ್ಲಾಗಲೀ, ಚಿನ್ನದ ಆಮದಿನಲ್ಲಾಗಲೀ ಈ ಅವಧಿಯಲ್ಲಿ ಹೆಚ್ಚಳವಾಗಿಲ್ಲ, ಬದಲಾಗಿ ಅಲ್ಲೂ ಇಳಿಕೆ ಕಂಡಿದೆ. ಕೆಲವು ಆರ್ಥಿಕ ತಜ್ಞರು ಇವೆಲ್ಲ ಇಳಿಕೆ ಅಸೆಂಬ್ಲಿ ಚುನಾವಣೆಗಳಿಂದಾಗಿ ಆಗಿರಬಹುದು, ಸರಕಾರ ಕಪ್ಪು ಹಣವನ್ನು ತೊಳೆಯುವುದರ ಮೇಲೆ ದಾಳಿ ಆರಂಭಿಸಿರುವುದರಿಂದ ಆಗಿರಬಹುದು ಮತ್ತು ಸೇವಾ ತೆರಿಗೆಯಲ್ಲಿ ಹೆಚ್ಚಳದಿಂದ ತಪ್ಪಿಸಿಕೊಳ್ಳುವ ಪ್ರಯತ್ನದಿಂದಾಗಿ ಆಗಿರಬಹುದು ಎನ್ನುತ್ತಿದ್ದಾರೆ. ಆದರೆ ಇವು ಯಾವವೂ ಇಂತಹ ಇಳಿಕೆಗೆ ಸರಿಯಾದ ಕಾರಣಗಳಲ್ಲ ಎಂದು ಬೇರೆ ಕೆಲವರು ಹೇಳುತ್ತಿದ್ದಾರೆ.

ವಾಸ್ತವವಾಗಿ ಈ ಇಳಿಕೆಗೆ ಕಾರಣಕ್ಕಾಗಿ ಇಷ್ಟೊಂದು ತಡಕಾಡಬೇಕಿಲ್ಲ ಎನ್ನುತ್ತಾರೆ ಕೆಲವೇ ಕೆಲವು ಆರ್ಥಿಕ ತಜ್ಞರು. ಉಳಿತಾಯ ಹೆಚ್ಚಿದರೆ ಮಾತ್ರವೇ ತಾನೇ ಬ್ಯಾಂಕುಗಳಲ್ಲಿ ಠೇವಣಿ ಮತ್ತಿತರ ಹೂಡಿಕೆಗಳು ಹೆಚ್ಚುವುದು ಸಾಧ್ಯ? ಇಂತಹ ಉಳಿತಾಯಗಳು ಆದಾಯಗಳಿಂದಲೇ ತಾನೇ ಬರಬೇಕು?

ಗ್ರಾಮೀಣ ಪ್ರದೇಶಗಳಲ್ಲಿ ಆದಾಯಗಳಲ್ಲಿ ತೀವ್ರ ಇಳಿಕೆಯಾಗಿದೆ ಎಂಬುದು ಸ್ಪಷ್ಟ. ಸತತ ಬರಗಳು 2ಲಕ್ಷ ಕೋಟಿ ರೂ.ಗಳಷ್ಟು ಕೃಷಿ ಆದಾಯದಲ್ಲಿ ಇಳಿಕೆ ತಂದಿವೆ ಎನ್ನಲಾಗಿದೆ. 13.3 ಕೋಟಿ ಗಾಮೀಣ 'ಜನಧನ' ಖಾತೆಗಳ ಉದ್ದೇಶ ಈ ಆದಾಯ ಇಳಿಕೆಯ ಪ್ರಶ್ನೆಯನ್ನು ಎದುರಿಸುವುದಂತೂ ಖಂಡಿತಾ ಅಲ್ಲ.

ನಗರ ಪ್ರದೇಶಗಳಲ್ಲಿ ಆದಾಯ ಇಳಿಕೆ ಇಷ್ಟು ಸ್ಪಷ್ಟವಾಗಿ ಕಾಣದಿದ್ದರೂ ಇ–ವಾಣಿಜ್ಯ ಬಿಟ್ಟು ಬೇರಾವ ವಲಯಗಳಲ್ಲೂ ಹೊಸ ಉದ್ಯೋಗಗಳು ಸೃಷ್ಟಿಯಾಗಿಲ್ಲ ಎಂಬ ಸಂಗತಿ ಒಟ್ಟಾಗಿ ನಗರ ಪ್ರದೇಶಗಳ ಜನಸಾಮಾನ್ಯರ ಆದಾಯಗಳಲ್ಲಿ ಇಳಿಕೆಯಾಗಿರುವುದನ್ನೂ ಸೂಚಿಸುತ್ತವೆಯೇ? ಇರಬಹುದು ಎನ್ನುತ್ತಾರೆ ಕೆಲವು ಆರ್ಥಿಕ ತಜ್ಞರು.

ಯುಪಿಎ–2 ಸರಕಾರದ ಆಳ್ವಿಕೆಯಲ್ಲೇ ಠೇವಣಿ ಬೆಳವಣಿಗೆ ದರದಲ್ಲಿ ಸತತ ಇಳಿಕೆ ಆರಂಭವಾಗಿತ್ತು. ಆದರೆ 'ಒಳ್ಳೆಯ ದಿನ'ಗಳ ಸಮರ್ಥ ಆಳ್ವಿಕೆ ಕೂಡ ಆ ಇಳಿಕೆಯನ್ನು ನಿಲ್ಲಿಸಲು ಸಮರ್ಥ ವಾಗಿಲ್ಲ ಎಂಬುದು ಗಮನಿಸ ಬೇಕಾದ ಸಂಗತಿ. ಬದಲಿಗೆ, ಹಿಂದಿನ ಸರಕಾರದ ನವ–ಉದಾರವಾದಿ ಧೋರಣೆಗಳನ್ನು ಮತ್ತಷ್ಟು ಉಗ್ರವಾಗಿ ಮುಂದು ವರೆಸಿರುವುದರೊಂದಿಗೆ ಬ್ಯಾಂಕ್ ಠೇವಣೆ ಬೆಳವಣಿಗೆಯಲ್ಲಿ ಇಳಿಕೆ ಮತ್ತಷ್ಟು ತೀವ್ರವಾಗಿ ಹೊಸ ದಾಖಲೆ ನಿರ್ಮಿಸಿದೆ!

"ಪ್ರೊ. ಬಿಪನ್‌ಚಂದ್ರರ ಪುಸ್ತಕದ ಬಗ್ಗೆ ಕಿರಿಚಾಡುವವರು ತಮ್ಮ ಅಜ್ಞಾನವನ್ನು ಜಗತ್ತಿಗೆ ಸಾರುತ್ತಿದ್ದಾರೆ"– ನೂರಕ್ಕೂ ಹೆಚ್ಚು ಪರಿಣಿತರ ಹೇಳಿಕೆ

ಪ್ರಖ್ಯಾತ ಇತಿಹಾಸಕಾರ ಪ್ರೊ. ಬಿಪನ್ ಚಂದ್ರ ಮತ್ತು ಅವರ ಸಹಯೋಗಿಗಳು ರಚಿಸಿದ, 28 ವರ್ಷಗಳ ಹಿಂದೆ ಪ್ರಕಟವಾದ ಭಾರತದ ಸ್ವಾತಂತ್ರ್ಯ ಹೋರಾಟದ ಕುರಿತಾದ ಪುಸ್ತಕದಲ್ಲಿ ಭಗತ್ ಸಿಂಗ್ ಅವರನ್ನು 'ಕ್ರಾಂತಿಕಾರಿ ಭಯೋತ್ಪಾದಕರು' ಎಂದು ಹೇಳಿ ಅವಮಾನಿಸಲಾಗಿದೆ, ಈ ಪುಸ್ತಕವನ್ನು ನಿಷೇಧಿಸಬೇಕು, ಅದನ್ನು ಬರೆದವರ ಮೇಲೆ ಕ್ರಮ ಕೈಗೊಳ್ಳಬೇಕು ಎಂದೆಲ್ಲ ಬೊಬ್ಬೆ ಇತ್ತೀಚೆಗೆ ಎದ್ದಿದೆ.

ಇದು ಇತ್ತಿಚೆಗಷ್ಟೇ 'ರಾಷ್ಟ್ರೀಯುವಾದ' ಎಂಬ ಪದದ ಪರಿಚಯುವಾದವರು , ತಮ್ಮ ದೇಶಪ್ರೇಮವನ್ನು ಪ್ರದರ್ಶಿಸಲು ಯಾವುದೇ ಅರ್ಥಹೀನವಾದ ವಿಚ್ಛಿದ್ರಕಾರಿ ಪ್ರಶ್ನೆಗಳನ್ನು ಎತ್ತುವುದು ಒಂದು ಹವ್ಯಾಸವಾಗಿ ಬಿಟ್ಟಿರುವವರು ತಮ್ಮ ಅಜ್ಞಾನವನ್ನು ಜಗತ್ತಿಗೆ ಸಾರುತ್ತಿರುವ ಪರಿ ಎಂದು ಸಹಮತ್ ನೀಡಿರುವ ಹೇಳಿಕೆ ವರ್ಣಿಸಿದೆ, ಈ ಹೇಳಿಕೆಗೆ ನೂರಕ್ಕೂ ಹೆಚ್ಚು ಇತಿಹಾಸಜ್ಞರು, ಸಮಾಜ ವಿಜ್ಞಾನಿಗಳು, ಅರ್ಥಶಾಸ್ತ್ರಜ್ಞರು ಮತ್ತು ಇತರ ಪರಿಣಿತರು ಸಹಿ ಮಾಡಿದ್ದಾರೆ.

ಭಗತ್ ಸಿಂಗ್ ಮತ್ತು ಅವರ ಸಂಗಾತಿಗಳು ತಮ್ಮನ್ನು 'ಕ್ರಾಂತಿಕಾರಿ ಭಯೋತ್ಪಾದಕರು' ಎಂದೇ ಕರೆದುಕೊಂಡಿದ್ದರು ಎಂಬುದು ಈ ಮಂದಿಗೆ ತಿಳಿದಂತಿಲ್ಲ. ಅವರೆಲ್ಲರೂ ಸದಸ್ಯರಾಗಿದ್ದ ಹಿಂದುಸ್ತಾನ್ ಸೋಶಲಿಸ್ಟ್ ರಿಪಬ್ಲಿಕನ್ ಅಸೋಸಿಯೇಷನ್ (ಹೆಚ್‌ಎಸ್‌ಆರ್‌ಎ) ತನ್ನ ಪ್ರಣಾಳಿಕೆಯಲ್ಲಿ "ನಮ್ಮ ಭಯೋತ್ಪಾದಕ ಧೋರಣೆಯ ಬಗ್ಗೆ ನಮ್ಮನ್ನು ತರಾಟೆಗೆ ತೆಗೆದುಕೊಳ್ಳಲಾಗುತ್ತಿದೆ. ನಿಸ್ಸಂದೇಹವಾಗಿಯೂ, ಭಯೋತ್ಪಾದನೆಗೆ ಇಳಿಯುವ ಮೂಲಕ ಮಾತ್ರವೇ ಒಂದು ಅತ್ಯಂತ ಪರಿಣಾಮಕಾರಿ ಪ್ರತೀಕಾರದ ಸಾಧನ ಕಂಡುಕೊಳ್ಳಲು ಸಾಧ್ಯ ಎಂದು ಕ್ರಾಂತಿಕಾರಿಗಳು ಯೋಚಿಸುತ್ತಾರೆ, ಸರಿಯಾಗಿಯೇ ಯೋಚಿಸುತ್ತಾರೆ.." ಎಂದಿತ್ತು.

'ಬಾಂಬಿನ ಪಂಥ' ಎಂಬ ಗಾಂಧೀಜಿಯ ಟೀಕೆಯ ಲೇಖನಕ್ಕೆ ಉತ್ತರವಾಗಿ ಹೆಸ್‌ಎಸ್‌ಆರ್‌ಎ ಪರವಾಗಿ ಪ್ರಕಟಿಸಿದ 'ಬಾಂಬಿನ ತತ್ವಶಾಸ್ತ್ರ' ಎಂಬ ಲೇಖನದಲ್ಲಿ ಬ್ರಿಟಿಶರ ದಮನದಿಂದಾಗಿ ಭಯೋತ್ಪಾದನೆ ಹುಟ್ಟಿಕೊಂಡಿದೆ, ಅದೊಂದು ಘಟ್ಟ, ಕ್ರಾಂತಿಯ ಒಂದು ಅನಿವಾರ್ಯ ಘಟ್ಟ, ಭಯೋತ್ಪಾದನೆ ಎಂಬುದೇನೂ ಸಂಪೂರ್ಣ ಕ್ರಾಂತಿಯಲ್ಲ, ಆದರೆ ಅದಿಲ್ಲದೆ ಕ್ರಾಂತಿ ಪೂರ್ಣವಾಗುವುದಿಲ್ಲ ಎನ್ನಲಾಗಿತ್ತು ಎಂಬ ಸಂಗತಿಯತ್ತ ಈ ಹೇಳಿಕೆ ಗಮನ ಸೆಳೆದಿದೆ.

ಆದರೆ ಲೆನಿನ್ ಕೃತಿಗಳನ್ನು ಓದಲಾರಂಭಿಸಿದ ನಂತರ ವೈಯಕ್ತಿಕ ಭಯೋತ್ಪಾದಕತೆಯ ನಿರರ್ಥಕತೆಯನ್ನು ಮನಗಂಡ ಭಗತ್ ಸಿಂಗ್ "ನಾನು ಭಯೋತ್ಪಾದಕನಂತೆ ವರ್ತಿಸಿದಂತೆ ಕಾಣುತ್ತದೆ. ಆದರೆ ನಾನು ಭಯೋತ್ಪಾದಕನಲ್ಲ" ಎಂದಿದ್ದರು.

ಈಗ ಕಳೆದ 2–3 ದಶಕಗಳಲ್ಲಿ 'ಭಯೋತ್ಪಾದನೆ' ಎಂಬುದು ಜಗತ್ತಿನಾದ್ಯಂತ ಅಮಾಯಕ ಮಂದಿಯನ್ನು ಕೊಲ್ಲುವುದು ಎಂಬ ಕೆಟ್ಟ ಅರ್ಥ ಪಡೆದುಕೊಂಡಿದೆ. ಆದ್ದರಿಂದಲೇ ನಮ್ಮ ರಾಷ್ಟ್ರೀಯ ವೀರಾಗ್ರಣಿಗಳನ್ನು ಭಯೋತ್ಪಾದಕರು ಎಂದು ಕರೆಯಲು ನಾವು ಇಷ್ಟಪಡುವುದಿಲ್ಲ. ಆದರೆ ನಾವು ನಮ್ಮನ್ನು ರಾಷ್ಟ್ರೀಯವಾದಿಗಳು ಎಂದು ಹೇಳಿಕೊಳ್ಳುವದಾದರೆ ನಮ್ಮ ರಾಷ್ಟ್ರೀಯ ಆಂದೋಲನದ ಬಗ್ಗೆ ಹೆಚ್ಚು ತಿಳಿದುಕೊಳ್ಳಬೇಕಾಗಿದೆ, 'ಕ್ರಾಂತಿಕಾರಿ ಭಯೋತ್ಪಾದಕರು' ಎಂದು ಹೆಮ್ಮೆ ಪಡುತ್ತಿದ್ದ ಕಾಲವೊಂದಿತ್ತು ಎಂಬುದನ್ನು ಮರೆಯುವಂತಿಲ್ಲ ಎಂದಿರುವ ಹೇಳಿಕೆ ಇಂತಹ ಕಿರಿಚಾಟಗಳನ್ನು ನಿಲ್ಲಿಸೋಣ ಎಂದು ಕರೆ ನೀಡಿದೆ.

ಪ್ರೊ. ಬಿಪನ್‌ಚಂದ್ರ ಈಗಿಲ್ಲ. ಆದರೆ ಈ ಕೃತಿಯನ್ನು ಸಿದ್ಧಪಡಿಸುವಲ್ಲಿ ಅವರೊಂದಿಗೆ ದುಡಿದ ಮೃದುಲಾ ಮುಖರ್ಜಿ, ಆದಿತ್ಯ ಮುಖರ್ಜಿ,ಮತ್ತು ಸುಚೇತ ಮಹಾಜನ್ ಲೋಕಸಭೆಯಲ್ಲಿ ಬಿಜೆಪಿ ಎಂಪಿ ಅನುರಾಗ್ ಠಾಕುರ್ ಮತ್ತು ಮಾಧ್ಯಮಗಳ ಒಂದು ವಿಭಾಗದಲ್ಲಿ ಮಾಡುತ್ತಿರುವ ಟೀಕೆಗಳಿಗೆ ಉತ್ತರ ನೀಡುತ್ತ ಈ ಪದ ಬಳಕೆ ಮೇಲೆ ಹೇಳಿದಂತೆ ಬೈಗುಳವಾಗಿ ಬಂದಿಲ್ಲ ಎಂದು ಸ್ಪಷ್ಟೀಕರಣ ನೀಡುತ್ತ, ಬಿಪನ್ ಚಂದ್ರ ಅವರೇ ನಂತರದ ಬರವಣಿಗೆಗಳಲ್ಲಿ ಈ ಪದ ಬಳಕೆಯನ್ನು ನಿಲ್ಲಿಸಿದ್ದರು, "ಭಗತ್ ಸಿಂಗ್ ಭಾರತದ ಅತ್ಯಂತ ಮಹಾನ್ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಕ್ರಾಂತಿಕಾರಿ ಸಮಾಜವಾದಿಗಳ ಮಾತ್ರವೇ ಅಲ್ಲ, ಈ ದೇಶದ ಆರಂಭದ ಮಾರ್ಕ್ಸ್‌ವಾದಿ ಚಿಂತಕರು ಮತ್ತು ಸಿದ್ಧಾಂತಿಗಳಲ್ಲಿ ಒಬ್ಬರು ಎಂಬ ಸಂಗತಿ, ದುರದೃಷ್ಟವಶಾತ್ ಬಹಳ ಮಂದಿಗೆ ಗೊತ್ತಿರಲಿಕ್ಕಿಲ್ಲ. ಅದರ ಫಲಿತಾಂಶವೆಂದರೆ ಎಲ್ಲ ರೀತಿಯ ಪ್ರತಿಗಾಮಿಗಳು, ಕುರುಡು ಸಂಪ್ರದಾಯವಾದಿಗಳು ಮತ್ತು ಕೋಮುವಾದಿಗಳು ಭಗತ್‌ಸಿಂಗ್ ಮತ್ತು 'ಚಂದ್ರಶೇಖರ ಆಝಾದ್ ಮುಂತಾದ ಆತನ ಸಂಗಾತಿಗಳನ್ನು ತಮ್ಮ ರಾಜಕೀಯ ಮತ್ತು ಸಿದ್ಧಾಂತಗಳಿಗೆ ತಪ್ಪಾಗಿ, ಅಪ್ರಾಮಾಣಿಕವಾಗಿ ಬಳಸಿಕೊಳ್ಳುತ್ತಿದ್ದಾರೆ" ಎಂದಿದ್ದರು ಎಂಬ ಸಂಗತಿಯತ್ತ ಗಮನ ಸೆಳೆದಿದ್ದಾರೆ.

ಈಗ ಪ್ರೊ. ಬಿಪನ್‌ಚಂದ್ರ ಅವರ ವಿರುದ್ಧದ ಕಿರಿಚಾಟದಲ್ಲೂ ಕೂಡ ಪ್ರದರ್ಶನಗೊಳ್ಳುತ್ತಿರುವುದು ಅಂತಹುದೇ ಅಪ್ರಾಮಾಣಿಕತೆ ಎನ್ನುತ್ತಾರೆ ಇತಿಹಾಸಜ್ಞರು..ಇದೀಗ ಸಾಮಾನ್ಯವಾಗಿರುವ ಅಚ್ಛೇದಿನ್ ಸಂಸ್ಕೃತಿ!

ನೌಕರರ ಭವಿಷ್ಯ ನಿಧಿ(ಇಪಿಎಫ್)ಯ ಮೇಲಿನ ಬಡ್ಡಿದರವನ್ನು ಇಪಿಎಫ್‌ಒ ಕೇಂದ್ರೀಯ ಟ್ರಸ್ಟ್ ಮಂಡಳಿ ನಿರ್ಧರಿಸಿದ್ದ 8.8ಶೇ.ದಿಂದ 8.7ಶೇ.ಕ್ಕೆ ಇಳಿಸಿದ ಹಣಕಾಸು ಇಲಾಖೆ ಕಾರ್ಮಿಕರ ತೀವ್ರ ಪ್ರತಿಭಟನೆಯಿಂದಾಗಿ ಎ.29ರಂದು ವಾಪಾಸು ತೆಗೆದುಕೊಂಡಿದೆ. ಇದು ಕಳೆದ ಎರಡು ತಿಂಗಳಲ್ಲಿ ಇಪಿಎಫ್ ಮೇಲಿನ ದಾಳಿಗಳಲ್ಲಿ ಮೋದಿ ಸರಕಾರ ಕಾರ್ಮಿಕರ ತಿರುಗೇಟಿನಿಂದಾಗಿ ಹಾಕಿರುವ ಮೂರನೇ ತಿಪ್ಪರಲಾಗ–ಸುದ್ದಿ



ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್, ವಿಜಯ ಕರ್ನಾಟಕ



ಎರಡು ವರ್ಷಗಳ ಸಾಧನೆ! ಸದನದಲ್ಲಿ ಬಿಜೆಪಿ ಎಂಪಿಗಳಿಂದಲೇ ಟೀಕೆ

ಮೇ 3 ರಂದು ಬಿಜೆಪಿಯ ಸಂಸದೀಯ ಪಕ್ಷದ ಸಭೆಯಲ್ಲಿ ಪ್ರಧಾನ ಮಂತ್ರಿಗಳು ತಮ್ಮ ಸರಕಾರದ ಸಾಧನೆಗಳನ್ನು ಬಿಜೆಪಿ ಸಂಸತ್ ಸದಸ್ಯರು ಜನಗಳ ಬಳಿಗೆ ಒಯ್ಯುವಲ್ಲಿ ವಿಫಲರಾಗಿದ್ದಾರೆ ಎಂದು ತರಾಟೆಗೆ ತೆಗೆದುಕೊಂಡರಂತೆ. ಮುದ್ರಾ ಬ್ಯಾಂಕ್ ಮೂರು ಕೋಟಿ ಜನರಿಗೆ ಪ್ರಯೋಜನ ತಂದಿದೆ, ಎಲ್‌ಪಿಜಿ ಸಂಪರ್ಕಗಳಿಂದಲೂ ಅಷ್ಟು ಜನಕ್ಕೆ ಪ್ರಯೋಜನವಾಗಿದೆ, ವಿದ್ಯುದೀಕರಣ ಮತ್ತೊಂದು ದೊಡ್ಡ ಸಾಧನೆ–ಇವುಗಳ ಬಗ್ಗೆ ನೀವು ಮಾತಾಡ್ತೀರಾ ಎಂದು ಹೆಡ್ ಮಾಸ್ತರರಂತೆ ಕೇಳಿದರಂತೆ, ಸಾಮಾಜಿಕ ಜಾಲತಾಣಗಳಲ್ಲಿ ಸಕ್ರಿಯರಾಗಬೇಕು ಎಂದು ತಾಕೀತು ಮಾಡಿದರಂತೆ.


ಅದರ ಪರಿಣಾಮ? ನಂತರ ನಡೆದ ಲೋಕಸಭೆಯ ಕಲಾಪಗಳಲ್ಲಿ ಕನಿಷ್ಟ ಇಬ್ಬರು ಬಿಜೆಪಿ ಎಂಪಿಗಳು ನಿರ್ದಿಷ್ಟ ವಿಷಯಗಳ ಮೇಲೆ ಅತೃಪ್ತಿ ವ್ಯಕ್ತಪಡಿಸಿದರು, ಸಾಲದ್ದಕ್ಕೆ ಇತರ ಬಿಜೆಪಿ ಎಂಪಿಗಳಿಂದಲೂ ಅವರ ಟೀಕೆಗೆ ಬೆಂಬಲ ವ್ಯಕ್ತವಾಯಿತು! ಹೀಗೆಂದು 'ದಿ ಟೆಲಿಗ್ರಾಫ್(ಮೇ4) ವರದಿ ಮಾಡಿದೆ.

ಈರುಳ್ಳಿ ಬೆಳೆಗಾರರನ್ನು ಉಳಿಸಿ ಎಂದು ಬಿಜೆಪಿ ಎಂಪಿ ಸುಮೇಧಾನಂದ ಸರಸ್ವತಿಯವರ ಕೋರಿಕೆಗೆ ಉತ್ತರಿಸುತ್ತ ಕೃಷಿ ಮಂತ್ರಿಗಳು ಇ–ವ್ಯಾಪಾರದ ಸೌಲಭ್ಯ ಒದಗಿಸಿದ್ದೇವೆ ಎಂದಾಗ ತೃಪ್ತರಾಗದ ಇನ್ನೊಬ್ಬ ಬಿಜೆಪಿ ಸದಸ್ಯ ಹುಕುಂ ಸಿಂಗ್ "ನೀವೇನೋ ಒಂದು ವಿವರವಾದ ಉತ್ತರ ಕೊಟ್ಟಿದ್ದೀರಿ. ಆದರೆ ಸಮಸ್ಯೆ ಮಾತ್ರ ಹಾಗೆಯೇ ಇದೆ. ಬೇಳೆಗಳ ಬೆಲೆಗಳು ಕೆಳಬರುತ್ತಿಲ್ಲ, ಈರುಳ್ಳಿ ಬೆಲೆಗಳು ಮೇಲೇರುತ್ತಿಲ್ಲ" ಎಂದರಂತೆ. "ರೈತರು ಕೆಜಿಗೆ 2ರೂ.ಗೆ, 1ರೂ.ಗೆ ಈರುಳ್ಳಿ ಮಾರಬೇಕಾಗಿರುವಾಗ ನಿಮ್ಮ ಇ–ವ್ಯಾಪಾರದಿಂದೇನು ಪ್ರಯೋಜನ ಎಂದು ಅವರು ಕೇಳಿದಾಗ ಪ್ರತಿಪಕ್ಷಗಳ ಸದಸ್ಯರು ಮುಸಿ–ಮುಸಿ ನಗುವಂತಾಯಿತಂತೆ.

ಇನ್ನೊಬ್ಬ ಬಿಜೆಪಿ ಸದಸ್ಯ ಗೃಹಮಂತ್ರಿಗಳನ್ನೇ ಇಕ್ಕಟ್ಟಿಗೆ ಸಿಲುಕಿಸಿದರು. ಕೇಂದ್ರದ ಪೋಲೀಸ್ ಆಧುನೀಕರಣ ಸ್ಕೀಮ್‌ನಲ್ಲಿ ಎಂದೂ ವಸತಿಯ ಅಂಶ ಇರಲೇ ಇಲ್ಲ ಎಂದು ಅವರು ಹೇಳಿದಾಗ ಆರ್.ಕೆ.ಸಿಂಗ್ ಎದ್ದು ನಿಂತು "ವಸತಿಯ ಅಂಶ ಇತ್ತು, ರಾಜ್ಯಗಳಿಗೆ ತೆರಿಗೆಯ ಪಾಲು ಹೆಚ್ಚಿಸಿದ ನಂತರ ಅದನ್ನು ನಿಲ್ಲಿಸಲಾಯಿತು" ಎಂದರು. ಈತ ಬಿಜೆಪಿಗೆ ಸೇರುವ ಮೊದಲು ಗೃಹ ಕಾರ್ಯದರ್ಶಿಯಾಗಿ ನಿವೃತ್ತರಾದವರು. ಆದ್ದರಿಂದ ಗೃಹಮಂತ್ರಿಗಳು ಸುಮ್ಮನಿದ್ದರು. ಆದರೆ ಅವರ ಕಿರಿಯ ಮಂತ್ರಿ 'ಏನಿದು?' ಎಂದು ಚಡಪಡಿಸಿದರಂತೆ. ಇತರ ಹಲವು ಬಿಜೆಪಿ ಸದಸ್ಯರೇ ಮುಸಿ–ಮುಸಿ ನಗುತ್ತಿದ್ದುದು ಕಂಡುಬಂತಂತೆ. ಏಕೆಂದರೆ ಇದಕ್ಕೆ ಮೊದಲು ಕಾಂಗ್ರೆಸ್‌ನ ಮಲ್ಲಿಕಾರ್ಜುನ ಖರ್ಗೆ ಇದನ್ನೇ ಹೇಳಿದಾಗ ಗೃಹಮಂತ್ರಿಗಳು ಅದನ್ನು ಬಲವಾಗಿ ನಿರಾಕರಿಸಿದ್ದರು!.

ಇದರ ಹಿಂದಿನ ದಿನ ಬಿಹಾರದಿಂದ ಚುನಾಯಿತರಾದ ಬಿಜೆಪಿ ಸದಸ್ಯ ಭೋಲಾ ಸಿಂಗ್ ಈ ಸರಕಾರವೂ ಹಿಂದಿನ ಸರಕಾರದಂತೆ ಕಾರ್ಪೊರೇಟ್ ಗುಂಪುಗಳ ಒತ್ತಡಕ್ಕೆ, ವಿಶೇಷವಾಗಿ ತೈಲ ಮತ್ತು ನೈಸರ್ಗಿಕ ಅನಿಲ ವಲಯಗಳಲ್ಲಿ, ಒಳಗಾಗಿದೆಯೇ ಎಂಬ ಸಂದೇಹದಿಂದ "ಸರಕಾರದ ಮೇಲಿನ ಒತ್ತಾಯ ಏನು ಎಂದು ನಾವು ತಿಳಿಯಬೇಕಾಗಿದೆ" ಎಂದರು. ಕುಪಿತಗೊಂಡ ತೈಲ ಮಂತ್ರಿ ಧರ್ಮೇಂದ್ರ ಪ್ರಧಾನ್ "ನಮ್ಮ ಮೇಲೇನೂ ಒತ್ತಾಯವಿಲ್ಲ, ನರೇಂದ್ರ ಮೋದಿ ದೇಶದ ಪ್ರಧಾನ ಮಂತ್ರಿಗಳು ಎಂಬುದನ್ನು ದಯವಿಟ್ಟು ನೆನಪಿಟ್ಟುಕೊಳ್ಳಿ" ಎಂದರು. ಪ್ರತ್ಯುತ್ತರವಾಗಿ ಭೋಲಾ ಸಿಂಗ್ ಅದು ತನಗೂ ಗೊತ್ತಿದೆ ಎನ್ನುತ್ತ "ನನಗೆ ನಿಮ್ಮ ಮೇಲೂ ನಂಬಿಕೆಯಿದೆ, ಎಷ್ಟೆಂದರೂ ನೀವು ಧರ್ಮೇಂದ್ರ, ಸಾಲದ್ದಕ್ಕೆ ಪ್ರಧಾನರೂ ಹೌದು" ಎಂದಾಗ ಸದನದಲ್ಲಿ ನಗೆ ಸಹಜ ತಾನೇ?

ಅಗಸ್ತಾ ಹೆಲಿಕಾಪ್ಟರ್ ಕಂಪನಿಗೆ ಸಂಬಂಧಿಸಿದ ಇಬ್ಬರಿಗೆ ಲಂಚದ ಆಪಾದನೆಯಲ್ಲಿ ಮೇಲೆ ಇಟಲಿಯ ನ್ಯಾಯಾಲಯ ಶಿಕ್ಷೆ ವಿಧಿಸಿದ ಹಿನ್ನಲೆಯಲ್ಲಿ ಇಲ್ಲಿ ಆಗಿನ ಆಳುವ ಪಕ್ಷ ಮತ್ತು ಎರಡು ವರ್ಷವಾದರೂ ತನಿಖೆ ಮುಗಿಸದ ಈಗಿನ ಆಳುವ ಪಕ್ಷದ ನಡುವೆ ರಾಜಕೀಯ ಜಟಾಪಟಿ ನಡೆಯುತ್ತಿದೆ–ಸುದ್ದಿ



ಕೆ ಜಿ ಬೇಸಿನ್–ಗ್ಯಾಸ್ ಟ್ರಬಲ್



ಕೆ.ಎಂ.ನಾಗರಾಜ್

ಏಪ್ರಿಲ್ 1, 2016ರಂದು ಗುಜರಾತ್ ವಿಧಾನ ಸಭೆಯಲ್ಲಿ ದೇಶದ ಮಹಾ ಲೆಕ್ಕ ಪರಿಶೋಧಕರ(ಸಿಎಜಿ) ಒಂದು ವರದಿಯನ್ನು ಮಂಡಿಸಲಾಯಿತು. ಅದು ಗುಜರಾತ್ ಸ್ಟೇಟ್ ಪೆಟ್ರೋಲಿಯಂ ಕಾರ್ಪೊರೇಷನ್ ಎಂಬ ಗುಜರಾತ್ ಸರಕಾರದ ಒಡೆತನದ ಕಂಪನಿಯ ಲೆಕ್ಕ ಪರಿಶೋಧನೆ ಕುರಿತಾದದ್ದು. ಇದರಲ್ಲಿ ಸಿಎಜಿ ಈ ಕಂಪನಿಯನ್ನು ತರಾಟೆಗೆ ತೆಗೆದುಕೊಂಡಿತ್ತು. ಅದರ ಟಿಪ್ಪಣಿಗಳು ಹೀಗಿದ್ದವು:

* ಅನಿಲ ಅನ್ವೇಷಣೆ ಮತ್ತು ಉತ್ಪಾದನೆಯ ಏನೊಂದೂ ಅನುಭವವಿಲ್ಲದ ಈ ಕಂಪನಿ ಅನಿಲ ಬ್ಲಾಕುಗಳನ್ನು ಪಡೆದುಕೊಂಡಿತು, ನಂತರ ಅದನ್ನು ಹಿಂದಿರುಗಿಸಿತು, ಈ ಪ್ರಕ್ರಿಯೆಯಲ್ಲಿ 2514.65 ಕೋಟಿ ರೂ. ಗಳನ್ನು ರೈಟ್ ಆಫ್ ಮಾಡಿತು
* ಈ ಕಂಪನಿಯ ಸಾಲಗಳು ಮಾರ್ಚ್2011ರಲ್ಲಿ 7126.67 ಕೋಟಿ ಇದ್ದದ್ದು ಮಾರ್ಚ್2015ರಲ್ಲಿ 19, 716 ಕೋಟಿ ರೂ.ಗಳಿಗೇರಿತು., ಅದರ ಬಡ್ಡಿ ಹೊರೆ ಇದೇ ಅವಧಿಯಲ್ಲಿ 981.71 ಕೋಟಿ ರೂ.ಗಳಿಂದ 1804.06 ಕೋಟಿ ರೂ.ಗಳಿಗೇರಿತು, ಅಂದರೆ ಸುಮಾರು ದುಪ್ಪಟ್ಟಾಯಿತು.
* ಈ ಕಂಪನಿಯೊಂದಿಗೆ ಜಂಟಿ ಉದ್ದಿಮೆ ನಡೆಸುವ ಜಿಯೊ ಗ್ಲೋಬಲ್ ರಿಸೋರ್ಸಸ್ ಮತ್ತು ಜುಬಿಲೆಂಟ್ ಗ್ರೂಪ್‌ನಿಂದ ಬರಬೇಕಾದ 2329.52 ಕೋಟಿ ರೂ. ಗಳನ್ನು ವಸೂಲಿ ಮಾಡಿಲ್ಲ.

ಈ ವರದಿ ಕಾರ್ಪೊರೇಟ್ ಮಾಧ್ಯಮಗಳಲ್ಲಿ ಅದೇಕೋ ದೊಡ್ಡ ಸುದ್ದಿಯಾಗಲಿಲ್ಲ. ಏಕೆ? ಏಕೆಂದರೆ ಇದು ಹೇಳಿದ್ದನ್ನು ಛಲದಿಂದ ಮಾಡುವ ಮಹಾಸಾಧಕನೆನಿಸಿರುವ ನಮ್ಮ ಹಾಲೀ ಪ್ರಧಾನಿಗಳು ಹನ್ನೊಂದು ವರ್ಷಗಳ ಹಿಂದೆ ಗುಜರಾತ್ ಮಾದರಿಯನ್ನು ರೂಪಿಸುತ್ತಿದ್ದಾಗ ಬಹಳ ಸಂಭ್ರಮದಿಂದ ಆರಂಭಿಸಿದ ಕಂಪನಿ ಎನ್ನುವ ಕಾರಣಕ್ಕಿರಬಹುದೇ?

ಅದೇನೇ ಇರಲಿ, 'ದಿ ಹಿಂದೂ' ಪತ್ರಿಕೆಯಲ್ಲಿ ರಾಜ್ಯಸಭಾ ಸದಸ್ಯ ಮತ್ತು ಯುಪಿಎ ಸರಕಾರದಲ್ಲಿ ಮಂತ್ರಿಯಾಗಿದ್ದ ಜೈರಾಮ್ ರಮೇಶ್ ಬರೆದಿರುವ ಲೇಖನ ಈ ಕಂಪನಿಯ ಮತ್ತು ಅದನ್ನು ಸ್ಥಾಪಿಸಿದವರ ಬಗ್ಗೆ ಸಾಕಷ್ಟು ಬೆಳಕು ಚೆಲ್ಲುತ್ತದೆ. ಸಿಎಜಿ ತರಾಟೆಯ ಹಿನ್ನೆಲೆಯಲ್ಲಿ ನಮ್ಮ ಓದುಗರಿಗಾಗಿ ಆ ಲೇಖನದ ಸಾರಾಂಶವನ್ನು ಇಲ್ಲಿ ಕೊಡುತ್ತಿದ್ದೇವೆ.

"ಹಣ ಮತ್ತು ವ್ಯಾಪಾರ ನನ್ನ ರಕ್ತದಲ್ಲಿವೆ" ಎಂದು ಪ್ರಧಾನ ಮಂತ್ರಿ ಮೋದಿಯವರು 2014ರಲ್ಲಿ ಕೈಗೊಂಡ ಜಪಾನ್ ಪ್ರವಾಸದ ಸಂದರ್ಭದಲ್ಲಿ ಅಲ್ಲಿನ ಹೂಡಿಕೆದಾರರೊಂದಿಗೆ ಹೆಮ್ಮೆಯಿಂದ ಹೇಳಿಕೊಂಡಿದ್ದರು. ತಮ್ಮ ವ್ಯಕ್ತಿತ್ವದ ಬಗ್ಗೆ ಒಗ್ಗರಣೆ ಅಥವಾ ಉತ್ಪ್ರೇಕ್ಷೆ ಇಲ್ಲದೆ ಹೇಳಿಕೊಂಡ ಅಪರೂಪದ ಸಂದರ್ಭ ಇದು ಎನ್ನಬಹುದು.

ಮೋದಿಯವರ ವಿಶಿಷ್ಟ ಗುಣಗಳ ಒಂದು ದೃಷ್ಟಾಂತವಾಗಿ "ಕೆ ಜಿ ಗ್ಯಾಸ್ ಸ್ಕ್ಯಾಮ್" (ಅಂದರೆ, ಕೃಷ್ಣಾ–ಗೋದಾವರಿ ಜಲಾನಯನ ಪ್ರದೇಶದಲ್ಲಿ ಅನಿಲ ಹೊರತೆಗೆಯುವ ಯೋಜನೆಯಲ್ಲಿ ವಂಚನೆಯ ಪ್ರಕರಣ) ನಮ್ಮ ಮುಂದಿದೆ. ಅನಿಲ ಒಂದು ಆವಿಯಾಗುವ ವಸ್ತು ಎಂಬುದು ಎಲ್ಲರಿಗೂ ತಿಳಿದಿದೆ. ಅಸ್ತಿತ್ವದಲ್ಲೇ ಇಲ್ಲದ ಅನಿಲ ಹೊರತೆಗೆಯುವುದಾಗಿ ನಟಿಸಲು ಅಸಾಧಾರಣ ಕೌಶಲ್ಯ ಮತ್ತು ಕಣ್ಕಟ್ಟಿನ ವಿದ್ಯೆ ಕರಗತವಾಗಿರಬೇಕು. ಮತ್ತು ನಂತರ ಅದನ್ನು ಅದೃಶ್ಯವಾಗುವಂತೆ ಮಾಡಲು ಹೆಚ್ಚಿನ ದರ್ಪವೂ ಇರಬೇಕಾಗುತ್ತದೆ. ಕೆ ಜಿ ಗ್ಯಾಸ್ ಹಗರಣದಲ್ಲಿ ಆಗಿರುವುದು ಇದೇ ರೀತಿಯ ಚಮತ್ಕಾರ. ಈ ಯೋಜನೆಯಲ್ಲಿ ಅಂದಾಜು 19,700 ಕೋಟಿ ರೂಪಾಯಿಗಳು ಗುಳುಂ ಆಗಿದೆಯೆಂದು ಕಳೆದ ಐದು ವರ್ಷಗಳ ಸಿಎಜಿಯವರ ಐದು ವರದಿಗಳು ಹೇಳುತ್ತವೆಯಾದರೂ ಈ ವಿಷಯ ಇಡೀ ದೇಶಕ್ಕೆ ಗೊತ್ತಾಗದಂತೆ ನೋಡಿಕೊಂಡ ಪ್ರಧಾನ ಮಂತ್ರಿಗಳ ಜಾಣ್ಮೆಗೆ ಗೌರವ ಸಲ್ಲಿಸಬೇಕು.

ಹನ್ನೊಂದು ವರ್ಷಗಳ ನಂತರ

ಗುಜರಾತ್ ರಾಜ್ಯ ಸರ್ಕಾರದ ಸಂಸ್ಥೆ ಗುಜರಾತ್ ರಾಜ್ಯ ಪೆಟ್ರೋಲಿಯಂ ಕಾರ್ಪೊರೇಷನ್(ಜಿಎಸ್‌ಪಿಸಿ) ಕೃಷ್ಣಾ–ಗೋದಾವರಿ ಜಲಾನಯನ ಪ್ರದೇಶದ ಆಳ ನೀರಿನಲ್ಲಿ ದೇಶದ ಅತಿ ದೊಡ್ಡ ಅನಿಲ ನಿಕ್ಷೇಪ ಇರುವುದನ್ನು ಪತ್ತೆಮಾಡಿರುವುದಾಗಿ, 2005 ಜೂನ್ 26 ರಂದು ಆಗಿನ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿ ಪ್ರಕಟಿಸಿದರು. ಪತ್ತೆಯಾದ ಅನಿಲದ ಗಾತ್ರ ಸುಮಾರು 20 ಟ್ರಿಲಿಯನ್ ಘನ ಅಡಿಗಳೆಂದೂ ಮತ್ತು ಅದು ಸುಮಾರು 2,20,000 ಕೋಟಿ ರೂಪಾಯಿ ಬೆಲೆ ಬಾಳುತ್ತದೆಂದೂ ಅವರು ತಿಳಿಸಿದರು. ಈ ಸುದ್ದಿ ಇಡೀ ರಾಷ್ಟ್ರವನ್ನೇ ಚಕಿತಗೊಳಿಸಿತ್ತು. ಈ ದಿಟ್ಟ ಘೋಷಣೆಯನ್ನು ಕೇಳಿ ಕೇಂದ್ರ ಪೆಟ್ರೋಲಿಯಂ ಸಚಿವಾಲಯದ ಅಧಿಕಾರಿಗಳು ತಬ್ಬಿಬ್ಬಾದರು. ಮುಂದುವರೆದು, ಡಿಸೆಂಬರ್ 2007 ರಲ್ಲಿ ಜಿಎಸ್‌ಪಿಸಿ ಅನಿಲ ಉತ್ಪಾದನೆಯನ್ನು ಆರಂಭಿಸುವುದೆಂದೂ ಮತ್ತು ಅದರಿಂದಾಗಿ ದೇಶವು ಇಂಧ'ನ ಸ್ವಾವಲಂಬಿಯಾಗುವುದೆಂದೂ ಮೋದಿಯವರು ತಮ್ಮದೇ ಆದ ಆಡಂಬರದ ಶೈಲಿಯಲ್ಲಿ ದೇಶಕ್ಕೆ ಆಶ್ವಾಸನೆ ಕೊಟ್ಟರು.


ನಾವು ಈಗ 2016 ರಲ್ಲಿ ಇದ್ದೇವೆ. ಮೋದಿಯವರು ಅನಿಲ ಉತ್ಪಾದನೆಯ ಆಡಂಬರದ ಘೋಷಣೆಮಾಡಿ ಹನ್ನೊಂದು ವರ್ಷಗಳು ಕಳೆದ ನಂತರ ಕೃಷ್ಣಾ–ಗೋದಾವರಿ ಜಲಾನಯನ ಪ್ರದೇಶದಲ್ಲಿ ಅನಿಲ ಉತ್ಪಾದನೆಯಾಗಿರುವುದು ಎಷ್ಟು ಗೊತ್ತೆ? ಒಂದು ದೊಡ್ಡ ಸೊನ್ನೆ. ಹೌದು. ಶೂನ್ಯ. ಏಕೆ ಶೂನ್ಯ? ಏಕೆಂದರೆ, ಅಲ್ಲಿ ಅನಿಲವೇ ಇಲ್ಲ. ಆದರೆ, ಈ ಅವಧಿಯಲ್ಲಿ, ಗುರಾಪೆಕಾ ಮಾಡಿರುವ ವೆಚ್ಚ 19,700 ಕೋಟಿ ರೂಪಾಯಿಗಳು. ಬಹಶ: ಕಾಣೆಯಾದ ಅನಿಲವನ್ನು ಹುಡುಕಲು ಹಣ ಖರ್ಚಾಗಿರಬಹುದು!

ಪ್ರಕೃತಿ ಸಂಪನ್ಮೂಲಗಳಾದ ತೈಲ ಮತ್ತು ಅನಿಲ ಅನ್ವೇಷಣೆಯಲ್ಲಿ ಯಾವಾಗಲೂ ಒಂದು ಮಟ್ಟದ ಅನಿಶ್ಚಿತತೆ ಇದ್ದದ್ದೇ. ಜಗತ್ತಿನ ಅತ್ಯುತ್ತಮ ಕಂಪೆನಿಗಳೂ ಕೆಲವೊಮ್ಮೆ ಬರಿಗೈಯಲ್ಲಿ ಹಿಂದಿರುಗಿವೆ. ಹಾಗಾದರೆ, ಕೆ ಜಿ ಬೇಸಿನ್‌ನಲ್ಲಿ ನಡೆದಿದೆ ಎಂದು ಹೇಳಲಾದ ವಂಚನೆ ಎಲ್ಲಿದೆ?

ಹೌದು, ತೈಲ/ಅನಿಲ ಅನ್ವೇಷಣೆಗಳು ಬಹಳ ದುಬಾರಿಯ ಹಾಗೂ ರಿಸ್ಕಿ ವ್ಯವಹಾರಗಳೇ. ಆದಾಗ್ಯೂ, ಯಾವುದೇ ಸ್ಥಳದಲ್ಲಿ ಸಿಗಬಹುದಾದ ತೈಲ/ಅನಿಲ ಬಹಳ ಕಡಿಮೆ ಪ್ರಮಾಣದ್ದು ಅಥವಾ ಇಲ್ಲವೇ ಇಲ್ಲ ಎಂದು ಗೊತ್ತಾದ ತಕ್ಷಣವೇ ಆ ಯೋಜನೆಯನ್ನು ರದ್ದು ಮಾಡಬೇಕಾಗುತ್ತದೆ. ಇಲ್ಲವೇ ಖರ್ಚುಗಳನ್ನು ಸಂದರ್ಭಕ್ಕನುಸಾರವಾಗಿ ಕಡಿಮೆ ಮಾಡಬೇಕಾಗುತ್ತದೆ. ಆದರೆ, ಗುರಾಪೆಕಾ ಮಾಡಿದ್ದೇ ಬೇರೆ ಎಂಬುದನ್ನು ತೋರಿಸುವ ಘಟನಾವಳಿಗಳು ಹೀಗಿವೆ:

ಇಂತಹ ಒಂದು ಮುಖ್ಯವಾದ ಮತ್ತು ನಯ ನಾಜೂಕುಗಳಿಂದ ಕೂಡಿದ ಅನಿಲ ಅನ್ವೇಷಣಾ ಕಾರ್ಯದಲ್ಲಿ ಗುರಾಪೆಕಾ ಜೊತೆಯಲ್ಲಿ ಜಿಯೊಗ್ಲೋಬಲ್ ಎಂಬ ಹೆಸರಿನ ತಾಂತ್ರಿಕ ಪಾಲುದಾರ ಕಂಪೆನಿಯೂ ಇತ್ತು. ಅದೊಂದು ಇಬ್ಬರು ವ್ಯಕ್ತಿಗಳಿಂದ ಕೂಡಿದ ಕಂಪೆನಿ. ಅದು ಬಾರ್ಬಡೋಸ್ ಎಂಬ ದ್ವೀಪದಲ್ಲಿ ಮೈದಳೆದಿತ್ತು. ಈ ಜಿಯೊಗ್ಲೋಬಲ್ ಕಂಪೆನಿಯು ಮಾರಿಷಸ್(ತೆರಿಗೆಗಳ್ಳರ ಹಣ ಅಡಗುದಾಣ) ದೇಶದ ರಾಯ್ ಗುಂಪಿನೊಂದಿಗೆ ಪಾಲುದಾರಿಕೆ ಹೊಂದಿದೆ. ಅಂದರೆ, ಕೆ ಜಿ ಬೇಸಿನ್‌ನಲ್ಲಿ ಅನಿಲ ಅನ್ವೇಷಣೆಯು, ಆರಂಭದಿಂದಲೂ ಸಂದೇಹಾಸ್ಪದವಾಗಿತ್ತು.

ಕೆ.ಜಿ.ಬೇಸಿನ್‌ನಲ್ಲಿ 2007ರಲ್ಲಿ ಅನಿಲ ಉತ್ಪಾದನೆಯಾಗುತ್ತದೆ ಎಂಬುದಾಗಿ ಮೋದಿಯವರು 2005ರಲ್ಲಿ ಭಾರಿ ದೊಡ್ಡ ಆಶ್ವಾಸನೆ ಕೊಟ್ಟಿದ್ದನ್ನು ಜ್ಞಾಪಿಸಿಕೊಳ್ಳಬಹುದು. 2007ರಲ್ಲಿ ಆಗಲಿಲ್ಲ, ಆದರೆ, 2009ರ ಜೂನ್‌ನಲ್ಲಿ ಈ ಜಂಟಿ ಉದ್ಯಮ ಹೊರತಂದದ್ದು ಅನಿಲವಲ್ಲ. ಅದರ ಬದಲಿಗೆ, ಕೆ ಜಿ ಬೇಸಿನ್‌ನಲ್ಲಿ ಅನಿಲವನ್ನು ಹೇಗೆ ಹೊರತೆಗೆಯಬಹುದು ಎಂಬುದರ ಬಗ್ಗೆ ಒಂದು ಅಭಿವೃದ್ಧಿ ಯೋಜನಾ ವರದಿ! ಅಂದರೆ, ಈ ವರದಿ ತಯಾರಿಸಲು ನಾಲ್ಕು ವರ್ಷ ಹಿಡಿಯಿತು. ಈ ಅವಧಿಯಲ್ಲಿ ಜಿಎಸ್‌ಪಿಸಿ ಸಾರ್ವಜನಿಕ ವಲಯದ ಬ್ಯಾಂಕ್‌ಗಳಿಂದ 4800 ಕೋಟಿ ರೂಪಾಯಿಗಳ ಸಾಲ ಪಡೆದಿತ್ತು. ಕೆಲವು ನೂರು ಪುಟಗಳ ವರದಿ ತಯಾರಿಸಲು 4800 ಕೋಟಿ ರೂ ಖರ್ಚಾಯಿತೇ? ಖಂಡಿತವಾಗಿಯೂ ಇರಲಾರದು. ಹಾಗಾದರೆ, ಕೆ ಜಿ ಬೇಸಿನ್‌ನಲ್ಲಿ ಹೇಗೆ ಅನಿಲ ಹೊರತೆಗೆಯಬಹುದೆಂಬ ವರದಿ ತಯಾರಿಸುವ ಮುನ್ನವೇ 4800 ಕೋಟಿ ರೂಪಾಯಿಗಳಷ್ಟು ದೊಡ್ಡ ಮೊತ್ತದ ಸಾಲ ಮಾಡಿದ್ದಾದರೂ ಯಾಕೆ?



2009ರ ಜೂನ್‌ನಲ್ಲಿ ಹೊರಬಂದ ಈ ಅಭಿವೃದ್ಧಿ ಯೋಜನಾ ವರದಿಯು ಆರಂಭದಲ್ಲಿ ಮಾಡಿದ್ದ ಅಂದಾಜಿನ ಶೇ.90 ರಷ್ಟು ಅನಿಲ ದೊರೆಯುವುದಿಲ್ಲ ಎಂದು ತಿಳಿಸಿತ್ತು. ಅಲ್ಲದೆ, ಇದೊಂದು ವ್ಯರ್ಥ ಯೋಜನೆ ಎಂದೂ ತಿಳಿಸಿತ್ತು. ಮತ್ತು ಒಪ್ಪಂದವಾಗಿರುವ ಮಾರಾಟದ ಬೆಲೆಗಿಂತಲೂ ಉತ್ಪಾದನಾ ವೆಚ್ಚ ಅಧಿಕವಾಗುವುದರಿಂದ ಯೋಜನೆಯನ್ನು ಕೈಬಿಡಬೇಕೆಂದು ಸಲಹೆ ನೀಡಿತ್ತು. ಆರಂಭದಿಂದಲೂ ಕಾರ್ಯಸಾಧುವಲ್ಲದ ಈ ಯೋಜನೆಯನ್ನು ಆ ಸಮಯದಲ್ಲೇ ಬಿಟ್ಟುಬಿಡಬೇಕಿತ್ತು. ಆದಾಗ್ಯೂ, ಗುಜರಾತಿನ ಅಂದಿನ ಮೋದಿ ಸರ್ಕಾರ, ಗುರಾಪೆಕಾ ಸಂಶಯಾಸ್ಪದ ಸಂಸ್ಥೆಗಳಿಗೆ ಗುತ್ತಿಗೆ ರೂಪದಲ್ಲಿ ಹಣ ಒದಗಿಸುವ ಸಲುವಾಗಿ ಒಂದು ಸಂಕೀರ್ಣವಾದ ಯೋಜನೆ ರೂಪಿಸಿ ಸಾಲ ಮಾಡುವಂತೆ ನೋಡಿ–ಕೊಂಡಿತು.

ಅಸ್ತಿತ್ವದಲ್ಲೇ ಇಲ್ಲದ ಅನಿಲ

ಅಸ್ತಿತ್ವದಲ್ಲೇ ಇಲ್ಲದ ಅನಿಲ ಹೊರತೆಗೆಯಲು ಹುಟ್ಟಿಹಾಕಿದ್ದ ಜಂಟಿ ಉದ್ಯಮವು ದುಬಾರಿ ಬೆಲೆಯ ಆಳದಲ್ಲಿ ಕೊರೆಯುವ ರಿಗ್ ಯಂತ್ರಗಳನ್ನು ಪಡೆಯಲು ನಿರ್ಧರಿಸಿತು. ಇಂತಹ ಕೆಲಸಗಳಲ್ಲಿ ಯಾವ ಅನುಭವವನ್ನೂ ಹೊಂದಿರದ ಟಫ್‌ಡ್ರಿಲ್ಲಿಂಗ್ ಕಂಪೆನಿಗೆ ರಿಗ್ ಯಂತ್ರಗಳನ್ನು ಒದಗಿಸುವ ಗುತ್ತಿಗೆ ನೀಡಲಾಯ್ತು. ಈ ಕಂಪೆನಿಯನ್ನು 2007ರಲ್ಲಿ ಹುಟ್ಟಿಹಾಕಲಾಗಿತ್ತು. ಜವಳಿ ಉದ್ಯಮದ ಹಿನ್ನೆಲೆ ಉಳ್ಳ ವ್ಯಕ್ತಿ ಈ ಕಂಪೆನಿಯ ಪ್ರವರ್ತಕರು. ಈ ಮಹಾನುಭಾವ, ಮೈನವಿರೇಳಿಸುವ ಗುಜರಾತ್ ಹೂಡಿಕೆ ಮೇಳದ ಉತ್ಸಾಹಿ ಬೆಂಬಲಿಗರೆಂದು ಹೇಳಲಾಗುತ್ತಿದೆ. ಟಫ್‌ಡ್ರಿಲ್ಲಿಂಗ್ ಕಂಪೆನಿಯೂ ಸೇರಿದಂತೆ ಕೆಲವು ಕಂಪೆನಿಗಳು ಒದಗಿಸಿರುವ ಸೇವೆಗಳಿಗೆ, ಮಾರ್ಚ್ 2015ರವರೆಗೆ, 5000 ಕೋಟಿಗಿಂತಲೂ ಅಧಿಕ ಮೊತ್ತದ ಹಣ ಖರ್ಚು ಮಾಡಲಾಗಿದೆ. ಕೆ ಜಿ ಬೇಸಿನ್‌ನಲ್ಲಿ ಅನಿಲ ಅನ್ವೇಷಣೆಯ ಹೆಸರಿನಲ್ಲಿ, ಹತ್ತು ವರ್ಷಗಳ ಅವಧಿಯಲ್ಲಿ ಗುರಾಪೆಕಾ 19,700 ಕೋಟಿ ರೂಪಾಯಿಗಳ ವೆಚ್ಚ ಮಾಡಿದೆ. ಆದರೂ ಅನಿಲ ಪತ್ತೆಯಾಗಲೇ ಇಲ್ಲ. ಹಾಗಾದರೆ, ವ್ಯಾಪಾರ ತಮ್ಮ ರಕ್ತದಲ್ಲೇ ಇದೆ ಎಂದು ಬಡಾಯಿ ಕೊಚ್ಚಿಕೊಳ್ಳುವ ವ್ಯಕ್ತಿ ಇಂತಹ ವ್ಯವಹಾರ ನಡೆಯಲು ಅವಕಾಶ ಕಲ್ಪಿಸಿ ಕೊಟ್ಟದ್ದಾದರೂ ಹೇಗೆ?

ಜಿಎಸ್‌ಪಿಸಿ ಇಷ್ಟೆಲ್ಲಾ ಹಣ ಎಲ್ಲಿಂದ ಪಡೆಯಿತು?

1979ರಲ್ಲಿ ಗುಜರಾತ್ ರಾಜ್ಯ ಪೆಟ್ರೋಲಿಯಂ ಕಾರ್ಪೊರೇಷನ್(ಜಿಎಸ್‌ಪಿಸಿ) ಮೈದಾಳಿತು. ಮಾರ್ಚ್ 2007ರವರೆಗೆ ಅದಕ್ಕೆ ಯಾವ ಸಾಲವೂ ಇರಲಿಲ್ಲ. 2008 ಮತ್ತು 2015ರ ನಡುವೆ ಅದು, ಸಾರ್ವಜನಿಕ ವಲಯದ ಹದಿಮೂರು ಬ್ಯಾಂಕ್‌ಗಳಿಂದ 19,720 ಕೋಟಿ ರೂಗಳ ಸಾಲ ಮಾಡಿದೆ. ಈ ಹಣವನ್ನು, ಪ್ರಶ್ನಾರ್ಹ ಉದ್ದೇಶಗಳುಳ್ಳ ಸಂಶಯಾಸ್ಪದ ಸಂಸ್ಥೆಗಳಿಗೆ ಗುತ್ತಿಗೆ ರೂಪದಲ್ಲಿ ಒದಗಿಸಲಾಗಿದೆ. ಸಾರ್ವಜನಿಕ ವಲಯದ ಬ್ಯಾಂಕ್‌ಗಳ ವಸೂಲಾಗದ ಸಾಲಗಳ ಬಗ್ಗೆ ಮತ್ತು ಕೈಗಾರಿಕೋದ್ಯಮಿಗಳು ಅವುಗಳನ್ನು ಹಿಂಡಿ ಹಿಪ್ಪೆ ಮಾಡುತ್ತಿದ್ದಾರೆ ಎಂದು ಪ್ರಧಾನ ಮಂತ್ರಿಗಳು ಹೇಳಿರುವುದು, ಗುರಾಪೆಕಾ ಸಾಲದ ಸುಳಿಯಲ್ಲಿರುವ ಸಂದರ್ಭದಲ್ಲಿ, ಜಾಸ್ತಿ ಎನಿಸುತ್ತದೆ. ಗುರಾಪೆಕಾ ನಂತಹ ಸಾಲಗಾರರು ಸಲ್ಲದ ಕಾರಣಗಳಿಗೆ ಬ್ಯಾಂಕ್‌ಗಳಿಂದ ಭಾರಿ ದೊಡ್ಡ ಮೊತ್ತದ ಸಾಲ ಪಡೆಯುತ್ತಿರುವುದರಿಂದ ನಮ್ಮ ಸಾರ್ವಜನಿಕ ವಲಯದ ಬ್ಯಾಂಕ್‌ಗಳು ಬಿಕ್ಕಟ್ಟನ್ನು ಎದುರಿಸುತ್ತಿರುವುದರಲ್ಲಿ ಆಶ್ಚರ್ಯವಿಲ್ಲ.

2015ರ ಸಿಎಜಿ ಲೆಕ್ಕ ಪರಿಶೋಧನಾ ವರದಿಯಲ್ಲಿ ನಮೂದಿಸಿರುವಂತೆ ಜಿಎಸ್‌ಪಿಸಿ ವಾರ್ಷಿಕವಾಗಿ ಕಟ್ಟಬೇಕಾಗಿರುವ ಬಡ್ಡಿ ಹಣದ ಮೊತ್ತ 1800 ಕೋಟಿ ರೂಪಾಯಿಗಳಾಗುತ್ತದೆ. ಆದರೆ, ಅದರ ನಿವ್ವಳ ವರಮಾನ 80 ಕೋಟಿ ರೂಗಳು. ಅದರ ಅರ್ಥ, ಜಿಎಸ್‌ಪಿಸಿ ಮಾಡಿರುವ ಸಾಲದ ಮೇಲೆ ಬಡ್ಡಿ ಕಟ್ಟುವಷ್ಟೂ ವರಮಾನವಿಲ್ಲ. ತಾಂತ್ರಿಕವಾಗಿ, ಅದು ದಿವಾಳಿಯಾಗಿದೆ. ಬ್ಯಾಂಕ್‌ಗಳು ಅದನ್ನು ಸುಸ್ತಿದಾರ ಎಂದು ಘೋಷಿಸಬೇಕಲ್ಲವೇ?

ತನಿಖೆ–ವಿಚಾರಣೆ

ಕೆ ಜಿ ಬೇಸಿನ್ ಸ್ಕ್ಯಾಮ್ ಮನಸ್ಸನ್ನು ಕುಗ್ಗಿಸುವ ಒಂದು ಕತೆಯಂತಿದೆ. ಅನಿಲ ಅನ್ವೇಷಣೆಯ ಹೆಸರಿನಲ್ಲಿ ತಮಗೆ ಬೇಕಾದವರಿಗೆ ಗುತ್ತಿಗೆಯ ರೂಪದಲ್ಲಿ ಹಣ ಕೊಳ್ಳೆ ಹೊಡೆಯಲು ಅವಕಾಶ ಕಲ್ಪಿಸಿಕೊಡಲು ಒಂದು ಸರ್ಕಾರಿ ಉದ್ದಿಮೆಯನ್ನು ಹೇಗೆ ಬಳಸಿಕೊಳ್ಳಲಾಗಿದೆ ಎಂಬುದನ್ನು ಈ ವಂಚನೆಯ ಪ್ರಕರಣ ತೋರಿಸುತ್ತದೆ. ಜಿಎಸ್‌ಪಿಸಿ 2015ರ ಲೆಕ್ಕ ಪರಿಶೋಧನಾ ವರದಿಯಲ್ಲಿ ಸಿಎಜಿ ಈ ಕಂಪೆನಿಯನ್ನು ತರಾಟೆಗೆ ತೆಗೆದು–ಕೊಂಡಿದ್ದಾರೆ. ಹಿಂದಿನ ವರ್ಷಗಳಿಗೆ ಸಂಬಂಧಿಸಿದ ಸಿಎಜಿ ವರದಿಗಳಲ್ಲೂ ಜಿಎಸ್‌ಪಿಸಿ ದುರ್ವರ್ತನೆಗಳ ಬಗ್ಗೆ ಪ್ರಸ್ತಾಪಮಾಡಲಾಗಿದೆ. ಆದರೂ, ಮಾಧ್ಯಮಗಳು ಜಿಎಸ್‌ಪಿಸಿ ಬಗ್ಗೆ ಚಕಾರ ಎತ್ತಲಿಲ್ಲ. ಈ ವಂಚನೆಯ ತನಿಖೆಯನ್ನು ಸುಪ್ರೀಂ ಕೋರ್ಟ್‌ನ ಹಾಲಿ ನ್ಯಾಯಾಧೀಶರೊಬ್ಬರಿಂದ ನಡೆಸಬೇಕು ಎಂಬ ಆಗ್ರಹ ಸರಿಯಾದದ್ದೇ.

ರಾಜ್ಯಗಳ ಸುತ್ತ



ಆರ್. ರಾಮಕೃಷ್ಣ

ದೈತ್ಯ ಗ್ರಾನೈಟ್ ಹಗರಣದಲ್ಲಿ ಡಿಎಂಕೆ-ಎಡಿಎಂಕೆ ಪಕ್ಷಗಳ ನೆರಳು

ಮೇ 16, 2016 ರಂದು ನಡೆಯಲಿರುವ ತಮಿಳುನಾಡು ವಿಧಾನ ಸಭಾ ಚುನಾವಣಾ ಕಣದಲ್ಲಿ ಪ್ರಚಾರಾಂದೋಲನ ತೀವ್ರಗೊಂಡಿದೆ. ಡಿಎಂಕೆ ಮತ್ತು ಎಐಎಡಿಎಂಕೆ ಪಕ್ಷಗಳ ಭ್ರಷ್ಟಾಚಾರ ಚುನಾವಣೆಯ ಒಂದು ಪ್ರಮುಖ ವಿಷಯವಾಗಿದೆ. ತಮಿಳುನಾಡಿನಲ್ಲಿ ರಚನೆಗೊಂಡಿರುವ 'ಜನತಾ ಕಲ್ಯಾಣ ರಂಗ' ಮತ್ತು ಮಿತ್ರಪಕ್ಷಗಳು ಈ ನಿಟ್ಟಿನಲ್ಲಿ ತೀವ್ರ ಪ್ರಚಾರಾಂದೋಲನ ಕೈಗೊಂಡಿವೆ. ಒಂದು ಲಕ್ಷ ಕೋಟಿ ರೂಪಾಯಿಯನ್ನು ಮೀರುವ ದೈತ್ಯ ಹಗರಣವಾದ 'ಗ್ರಾನೈಟ್' ಹಗರಣವನ್ನು ಚುನಾವಣೆಯ ಒಂದು ಪ್ರಧಾನವಾದ ವಿಷಯವಾಗಿ ಈ ಪಕ್ಷಗಳು ತಮಿಳುನಾಡಿನ ಜನರ ಮುಂದಿಟ್ಟಿವೆ.

ನಿಷ್ಠಾವಂತ ಪ್ರಾಮಾಣಿಕ ಐಎಎಸ್ ಅಧಿಕಾರಿಯಾದ ಯು. ಸಗಾಯಮ್ ಅವರು ಸರಕಾರಕ್ಕೆ 2012 ರಲ್ಲಿ ಸಲ್ಲಿಸಿರುವ ವರದಿ ಆಧರಿಸಿ ಒಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿತ್ತು. ಅಕ್ರಮ ಗ್ರಾನೈಟ್ ಗಣಿಗಾರಿಕೆಯಿಂದ ಮಧುರೈ ಜಿಲ್ಲೆಯೊಂದರಲ್ಲೇ 16,338 ಕೋಟಿ ರೂಪಾಯಿ ಸರಕಾರಕ್ಕೆ ನಷ್ಟವಾಗಿದೆ ಎಂದು ವರದಿ ಗುರುತಿಸಿದೆ. ಇನ್ನು 32 ಜಿಲ್ಲೆಗಳಲ್ಲಿ ನಡೆದಿರುವ ಅಕ್ರಮ ಗ್ರಾನೈಟ್ ಗಣಿಗಾರಿಕೆಯಿಂದಾದ ನಷ್ಟವು ಒಂದು ಲಕ್ಷ ಕೋಟಿ ದಾಟಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಕೇವಲ ಮಧುರೈ ಜಿಲ್ಲೆಯ ಅಕ್ರಮಗಳೇ ಒಂದು ಲಕ್ಷ ಕೋಟಿ ರೂ. ದಾಟುತ್ತದೆ ಎಂಬ ಮತ್ತೊಂದು ಅಂದಾಜು ಸಹ ಇದೆ, ನ್ಯಾಯಾಲಯವು 2014ರಲ್ಲಿ ಸಗಾಯಮ್ ಅವರನ್ನು ವಿಶೇಷ ಅಧಿಕಾರಿಯನ್ನಾಗಿ ನೇಮಿಸಿ ಮೊದಲು ಮಧುರೈ ಜಿಲ್ಲೆಯ ಅಕ್ರಮಗಳ ಸಮಗ್ರ ವರದಿ ನೀಡಲು ಆದೇಶಿಸಿತು. ಸಗಾಯಮ್ ಸಮೀಕ್ಷೆಗಳನ್ನು ನಡೆಸಿ ವರದಿ ನೀಡಿದರು. ಸರಕಾರ ಇಲ್ಲಿಯವರೆಗೆ ವರದಿಯನ್ನು ಬಹಿರಂಗಗೊಳಿಸಿಲ್ಲ.



"ಡಿಎಂಕೆ ಮತ್ತು ಎಐಎಡಿಎಂಕೆ ಗೂ ವ್ಯತ್ಯಾಸ ಬರಿಯ 'ಎ'. ಎ ಎಂದರೆ ಎಮೌಂಟ್. ಭ್ರಷ್ಟಾಚಾರದ ಎಮೌಂಟ್ ಎಷ್ಟು ಎಂಬುದಷ್ಟೇ ವ್ಯತ್ಯಾಸ."
-ಬೃಂದಾ ಕಾರಟ್ ತಮಿಳುನಾಡು ಚುನಾವಣಾ ಪ್ರಚಾರದಲ್ಲಿ

ಜಯಲಲಿತ ನೇತೃತ್ವದ ಎಐಎಡಿಎಂ-ಕೆ ಸರಕಾರ ವರದಿಯನ್ನು ಆಧರಿಸಿ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. 'ಪುದಿಯ ತಲೈಮುರಿ' ಟಿ.ವಿ. ವಾಹಿನಿಯಲ್ಲಿ ವರದಿಯ ಅಂಶಗಳು ಬಹಿರಂಗಗೊಂಡಾಗ ಜಿಲ್ಲಾಧಿಕಾರಿಗಳ ಶಿಫಾರಿಸ್ಸಿನ ಮೇರೆಗೆ ಕೆಲವು ಗಣಿ ಅನುಮತಿಯನ್ನು ರದ್ದು ಮಾಡುವ ಮೂಲಕ ಕ್ರಮ ಕೈಗೊಳ್ಳುವಂತೆ ತೋರಿಕೆಯ ಪ್ರದರ್ಶನ ನಡೆಲಾಯಿತು. ಆದರೆ ನಂತರ ಕ್ರಮೇಣ ಎಲ್ಲವೂ ತಣ್ಣಗಾಗಿ 'ಮಾಮೂಲಿ' ಪರಿಸ್ಥಿತಿ ಬಂದಿತು. ಹಗರಣವು 1991 ರಿಂದ 2011ರ ವರೆಗಿನವುಗಳು. 175 ಗಣಿ ಗುತ್ತಿಗೆಗೆ ಸಂಬಂಧಿಸಿದಂತೆ ತನಿಖೆ ನಡೆಸಲಾಗಿದೆ. ಒಟ್ಟಾರೆ 36 ಸರಕಾರಿ ಆದೇಶಗಳ ಮೂಲಕ ಅನುಮತಿ ನೀಡಲಾಗಿದೆ. ಇದರಲ್ಲಿ ಎಡಿಎಂಕೆ ಸರಕಾರವು 2003 ರಿಂದ 2006 ರವರೆಗೆ 77 ಅನುಮತಿ ನೀಡಿದೆ. ಉಳಿದಂತೆ 2006 ರಿಂದ 2011 ರವರೆಗೆ ಡಿಎಂಕೆ ಸರಕಾರ ಅನುಮತಿ ನೀಡಿರುವುದು 68.

ಅಕ್ರಮಗಳಲ್ಲಿ ಭಾಗಿಯಾಗಿ ಮೊಕದ್ದಮೆ ಎದುರಿಸುತ್ತಿರುವ ಕಂಪನಿಯಲ್ಲಿ ಕರುಣಾನಿಧಿಯವರ ಮಗ, ಮಾಜಿ ಕೇಂದ್ರ ಸಚಿವ ಅಳಗಿರಿ ಷೇರುದಾರರಾಗಿರುವ ಒಲಿಂಪಸ್ ಗ್ರಾನೈಟ್ ಕಂಪನಿ ಸಹ ಇದೆ. ಮತ್ತೊಂದು ಪಿ.ಆರ್.ಪಿ. ಎನ್ನುವ ದೊಡ್ಡ ಕಂಪನಿ. ಒಟ್ಟಾರೆ ಡಿಎಂಕೆ ಮತ್ತು ಎಡಿಎಂಕೆಗಳಲ್ಲಿ ಪ್ರಭಾವ ಹೊಂದಿರುವವರು ವ್ಯಾಪಕವಾಗಿ ಹಗರಣ ನಡೆಸಿರುವುದು ಸ್ಪಷ್ಟವಾಗಿದೆ. ಸಗಾಯಮ್ ಸಮಿತಿಯು ಅಕ್ರಮಗಳಲ್ಲಿ ಭಾಗಿಯಾದ ಅಧಿಕಾರಿಗಳನ್ನು ಸಹ ಗುರುತಿಸಿದೆ. ಅಕ್ರಮ ಗಣಿಗಾರಿಕೆಯು ಸರಕಾರ-ಕ್ಕೆ ನಷ್ಟವನ್ನು ಉಂಟುಮಾಡಿರುವುದಷ್ಟೆ ಅಲ್ಲ ಸುತ್ತಮುತ್ತಲ ಗ್ರಾಮಗಳ ಕೃಷಿಗೆ ಹಾನಿಯಾಗಿದೆ. ಮತ್ತು ಪರಿಸರಕ್ಕೆ ಸಹ ಗಂಭೀರ ಹಾನಿಯನ್ನು ತಂದಿದೆ. ಅಕ್ರಮವು ಬರೀ ಗಣಿಗಾರಿಕೆಗೆ ಮಾತ್ರವೇ ನಿಂತಿಲ್ಲ., ತೆರಿಗೆಗಳ್ಳತನ ಮತ್ತು ಭೂಕಬಳಿಕೆ ವ್ಯಾಪಕವಾಗಿ ನಡೆದಿದೆ.

ಸಿಪಿಐ(ಎಂ), ಸಿಪಿಐ ಸೇರಿದಂತೆ 'ಜನತಾ ಕಲ್ಯಾಣ ರಂಗ' ಮತ್ತು ಮಿತ್ರಪಕ್ಷಗಳು ಗ್ರಾನೈಟ್ ಹಗರಣವನ್ನು ಒಂದು ಪ್ರಧಾನ ವಿಷಯವಾಗಿ ಜನರ ಮುಂದೆ ಇಟ್ಟಿವೆ. ಮೇ 16, 2006 ರಂದು ತಮಿಳುನಾಡಿನ ಜನರು ಈ ಕುರಿತು ತಮ್ಮ ತೀರ್ಪು ಬರೆಯಲಿದ್ದಾರೆ.

ಪಶ್ಚಿಮ ಬಂಗಾಳ : ಕೋಟ್ಯಾಧಿಪತಿಗಳು ಕಣದಲ್ಲಿ

ಪಶ್ಚಿಮ ಬಂಗಾಳದಲ್ಲಿ ಪ್ರಸ್ತುತ ವಿಧಾನ ಸಭಾ ಚುನಾವಣಾ ಕಣದಲ್ಲಿ 1,961 ಜನ ಅಭ್ಯರ್ಥಿಗಳು ಸ್ಪರ್ಧೆಯಲ್ಲಿದ್ದಾರೆ. ಇದರಲ್ಲಿ ಯಾವ ಯಾವ ಪಕ್ಷದಿಂದ ಎಷ್ಟೆಷ್ಟು ಜನ ಕೋಟ್ಯಾಧಿಪತಿಗಳಿದ್ದಾರೆ ಎಂದು ನೋಡೋಣ. ತೃಣಮೂಲ ಪಕ್ಷದ 114 ಜನ ಅಭ್ಯರ್ಥಿಗಳು ಕೋಟ್ಯಾಧಿಪತಿಗಳಿದ್ದಾರೆ. ಇದರಲ್ಲಿ ಎರಡನೇ ಸ್ಥಾನ ಬಿಜೆಪಿಗೆ. ಬಿಜೆಪಿಯ 46 ಜನರು ಕೋಟ್ಯಾಧಿಪತಿಗಳಿದ್ದಾರೆ. ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಲ್ಲಿ 31 ಜನರು ಕೋಟ್ಯಾಧಿಪತಿಗಳಿದ್ದಾರೆ. ಸ್ವತಂತ್ರ ಅಭ್ಯರ್ಥಿಗಳಲ್ಲಿ 19 ಜನರು ಕೋಟ್ಯಾಧಿಪತಿಗಳಿದ್ದಾರೆ. ಸಿಪಿಐ(ಎಂ) ಪಕ್ಷದ 13 ಜನ ಕೋಟ್ಯಾಧಿಪತಿಗಳಿದ್ದಾರೆ.

ಎಲೆಕ್ಷನ್ ವಾಚ್ ಮತ್ತು ಎ.ಡಿ.ಆರ್. ಎಂಬ ಸಂಸ್ಥೆಗಳು ಈ ಸಮೀಕ್ಷೆಯನ್ನು ನಡೆಸಿವೆ. ಕೋಟ್ಯಾಧಿಪತಿಗಳೆಂದರೆ ಎಲ್ಲರೂ ಒಂದೇ ಅಲ್ಲ. ಅದರಲ್ಲಿ ಒಂದು ಕೋಟಿ ಇರುವವರು, 10 ಕೋಟಿ ಆಸ್ತಿ ಹೊಂದಿರುವವರು 50, 100 ಕೋಟಿ ಆಸ್ತಿ ಹೊಂದಿರುವವರು ಎಂದು ವರ್ಗೀಕರಣ ಮಾಡದ್ದಿದ್ದರೆ ಬಂಡವಾಳಶಾಹಿ ರಾಜಕೀಯ ಪಕ್ಷಗಳು ಹೇಗೆ ಹಣವಂತರಿಗೆ ಮಣೆ ಹಾಕುತ್ತವೆ ಎಂದು ಇನ್ನಷ್ಟು ಚೆನ್ನಾಗಿ ಗುರುತಿಸಬಹುದಿತ್ತು.



ಕೇರಳದ ತುಂಬಾ ಜಿಶಾ ಕೊಲೆ ಕೇಸ್ ಕ್ರಮ ಕೈಗೊಳ್ಳಲು ತೀವ್ರ ಪ್ರತಿಭಟನೆ



ಕುಂಭಮೇಳದಲ್ಲಿ ಕಲ್ತುಳಿತಕ್ಕೆ 6 ಸಾವು 40 ಕ್ಕಿಂತ ಹೆಚ್ಚು ಜನರಿಗೆ ಗಾಯ..
ಕಾಲ್ತುಳಿತಕ್ಕೆ ಪ್ರಧಾನಿ ಮೋದಿ ಟ್ವಿಟ್ಟರ್ ನಲ್ಲಿ ಸಂತಾಪ ....
ಕೇರಳದಲ್ಲಿ ಪಟಾಕಿ ಸ್ಫೋಟ ಗೊಂಡ ಘಟನೆ ನಡೆದಾಗ ಏಕಾಏಕಿ ವಿಮಾನ ಹತ್ತಿ ವೈದ್ಯರೊಂದಿಗೆ ತರಳಿ ಪ್ರಚಾರ ಪಡೆದ್ದಿದ್ದರು..ಆಗ ಅವರ ಮೊಬೈಲ್ ನಲ್ಲಿ ಕರೆನ್ಸಿ ಖಾಲಿಯಾಗಿತ್ತು ಟ್ವಿಟ್ ಮಾಡಲು.
ಆದರೆ ಈಗ ಫುಲ್ ಕರೆನ್ಸಿ ಇದೆ...
ಕೇರಳದಲ್ಲಿ ಚುನಾವಣಾ ಸಂದರ್ಭ ಆದ್ದ-ರಿಂದ ವೈದ್ಯರು ಲಭ್ಯವಿದ್ದರು, ವಿಮಾನ ಫ್ರಿ ಇತ್ತು, ಇವತ್ತು ವೈದ್ಯರು, ವಿಮಾನ ಫ್ರಿ ಇಲ್ಲ ಛೇ

ಜಗದೀಶ ಸೂರ್ಯ

ಬರಗಾಲ ಜನಗಳಿಗೆ ಸಂಕಷ್ಟ: ಸರಕಾರಗಳಿಗೆ .... ಪುಟ 9 ರಿಂದ


ದೂರದೃಷ್ಟಿ2020 ಅದನ್ನು ಸ್ಪಷ್ಟಪಡಿಸುತ್ತಿದೆ. ಅದರಂತೆ, 2020ರೊಳಗೆ ಗ್ರಾಮೀಣ ಪ್ರದೇಶದ ಅರ್ಧದಷ್ಟು ದುಡಿಯುವ ಜನತೆಯನ್ನು ವ್ಯವಸಾಯದಿಂದ ಮತ್ತು ಗ್ರಾಮಗಳಿಂದ ಹೊರದಬ್ಬುವುದು ಅದರ ಗುರಿಯಾಗಿದೆ. ಇದಕ್ಕಾಗಿಯೇ ಅಲ್ಲವೇ, ಆತ್ಮಹತ್ಯೆ ಮಾಡಿಕೊಳ್ಳುವ ಮತ್ತು ಸಾಲಬಾಧಿತ ರೈತರ ಜಮೀನುಗಳನ್ನು ಖರೀದಿಸಲು, ಭೂಮಾಲಕರು ಮತ್ತು ವಾರ್ಷಿಕ 25ಲಕ್ಷ ಆದಾಯ ಉಳ್ಳವರಿಗೆ ಜಮೀನನ್ನು ಹೊಂದಲು ಸಾಧ್ಯವಾಗುವಂತೆ ಭೂ ಸುಧಾರಣಾ ಕಾಯ್ದೆ - 1961 ಕ್ಕೆ ಈಚೆಗೆ ರಾಜ್ಯ ಸರಕಾರ, ತಿದ್ದುಪಡಿ ಮಾಡಿದುದು. ಅದೂ ರಾಜ್ಯ ಭೀಕರ ಬರಗಾಲದಲ್ಲಿ ಮತ್ತು ರೈತರು ದೊಡ್ಡ ಪ್ರಮಾಣದಲ್ಲಿ ಆತ್ಮಹತ್ಯೆಯಲ್ಲಿ ತೊಡಗಿದ್ದಾಗ ಅವುಗಳ ಕಡೆ ಗಮನ ಹರಿಸದೇ ತರಾತುರಿಯಲ್ಲಿ ತಿದ್ದುಪಡಿ ತಂದಿದ್ದು

ಹೀಗಾಗಿ, ಬರಗಾಲವೆಂದರೇ ಕೇವಲ ಭೂಮಾಲಕ ಪಟ್ಟಭದ್ರರಿಗೆ ಮಾತ್ರವೇ ಇಷ್ಟವಲ್ಲ, ಅದು ಕೇಂದ್ರ ಹಾಗೂ ರಾಜ್ಯ ಸರಕಾರಗಳಿಗೂ ಇಷ್ಟವಾಗಿದೆ. ಹಾಗೆಂದೂ ಇಂತಹ ಭೀಕರ ಬರಗಾಲದಲ್ಲಿ ಸರಕಾರಗಳು ಸುಮ್ಮನಿದ್ದರೇ, ಜನಗಳು ಸುಮ್ಮನಿರುವರೇ? ಆದ್ದರಿಂದ ಬರಗಾಲ ನಿವಾರಣೆಗೆ ಭಾರೀ ಕಾಳಜಿ ಇದೆಯೆಂದು ತೋರಿಸಿಕೊಂಡು ರಾಜಕೀಯ ಲಾಭ ಮಾಡಿಕೊಳ್ಳಲೇ ಈ ಅಸಮರ್ಪಕ ಅರೆಬರೆ ಕೆಲಸ

ಚಳುವಳಿಯೊಂದೇ ದಾರಿ

ಕೇಂದ್ರ ಹಾಗೂ ರಾಜ್ಯ ಸರಕಾರಗಳು ಬರಗಾಲವನ್ನು ಶಾಶ್ವತವಾಗಿ ನಿವಾರಿಸಲು ದುರುದ್ದೇಶದಿಂದಲೇ ಕ್ರಮವಹಿಸದಿರುವಾಗ ಗ್ರಾಮೀಣ ಪ್ರದೇಶದ ದುಡಿಯುವ ಜನತೆಗೆ ಚಳುವಳಿಯನ್ನು ಇನ್ನಷ್ಟು ತೀವ್ರಗೊಳಿಸುವುದೊಂದೇ ಮಾರ್ಗವಾಗಿದೆ. ಇದಕ್ಕಾಗಿ ಐಕ್ಯ ಹಾಗೂ ಸುಸಂಘಟಿತ ಚಳುವಳಿಯ ಅಗತ್ಯವಿದೆ. ಬರ ಪರಿಹಾರಕ್ಕೆ ಕೈಗೊಳ್ಳ ಬೇಕಾದ ಕ್ರಮಗಳಿವೆ. ಇವುಗಳಿಗಾಗಿ ಹೋರಾಡಬೇಕಷ್ಟೇ!

1. ಬರ ಪೀಡಿತ ಎಲ್ಲಾ ಪ್ರದೇಶದ ರೈತರು ಹಾಗೂ ಕಸಬುದಾರರು ಮತ್ತು ಕೂಲಿಕಾರರ ಪ್ರತಿ ಕುಟುಂಬಕ್ಕೆ ತಲಾ 25 ಕೇಜಿ ಉಚಿತವಾಗಿ ಅಕ್ಕಿಯನ್ನು ಒದಗಿಸಬೇಕು. ಈ ಪ್ರದೇಶದ ಎಲ್ಲಾ ಶಾಲೆಗಳಲ್ಲೂ ರಾತ್ರಿ ಊಟವನ್ನು ಆರಂಭಿಸಬೇಕು.
2. ಪ್ರತಿ ಕುಟುಂಬಕ್ಕೆ ನಿಜವಾದ ಅರ್ಥದಲ್ಲಿ ಪ್ರತಿದಿನ ಕನಿಷ್ಠ 500 ರೂಗಳ ಕೂಲಿಯಂತೆ 200 ದಿನಗಳ ಉದ್ಯೋಗ ಖಾತ್ರಿ ಕೆಲಸವನ್ನು ಒದಗಿಸಬೇಕು. ಅಲ್ಲಿನ ಭ್ರಷ್ಟಾಚಾರವನ್ನು ನಿಗ್ರಹಿಸಲು ಕಠಿಣ ಕ್ರಮಗಳನ್ನು ಅನುಸರಿಸಬೇಕು.
3. ಪ್ರತಿ ಗ್ರಾಮದಲ್ಲಿ ಅಗತ್ಯ ಕುಡಿಯುವ ನೀರನ್ನು ಒದಗಿಸಲು ಕ್ರಮವಹಿಸಬೇಕು. ಫ್ಲೋ-ರೈಡ್ ವಿಷದಿಂದ ಮುಕ್ತ ಗೊಳಿಸಬೇಕು. ಪ್ರತಿ ಗ್ರಾಮ ಪಂಚಾಯತಿಯಲ್ಲಿ ಮೇವಿನ ಬ್ಯಾಂಕ್ ತೆರೆಯಬೇಕು
4. ಬೆಳೆ ನಷ್ಟ ಪರಿಹಾರವನ್ನು ತಲಾ ಎಕರೆಗೆ ಕನಿಷ್ಟ 25 ಸಾವಿರ ರೂ. ನೀಡಬೇಕು. ಇದನ್ನು ನೀರಾವರಿ ಪ್ರದೇಶದಲ್ಲಾದ ನಷ್ಟಕ್ಕೂ ಅನ್ವಯಿಸಬೇಕು.
5. ರೈತರ ಎಲ್ಲಾ ರೀತಿಯ ಸಾಲ ಮನ್ನಾಮಾಡಲು, ಕೇರಳದ ಈ ಹಿಂದಿನ ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ಸರಕಾರ ಜಾರಿಗೆ ತಂದ ಋಣಮುಕ್ತ ಕಾಯ್ದೆಯನ್ನು ಕರ್ನಾಟಕದಲ್ಲೂ ಜಾರಿಗೆ ತರಬೇಕು. ಎಲ್ಲ ರೈತರು, ಕೂಲಿಕಾರರು ಮತ್ತು ಕಸಬುದಾರರಿಗೂ ಅಗತ್ಯದಷ್ಟು ಹೊಸ ಸಾಲವನ್ನು ನೀಡಲು ಕ್ರಮವಹಿಸಬೇಕು.
6. ಬರಗಾಲದಿಂದ ಶಾಶ್ವತವಾಗಿ ಮುಕ್ತಿ ಹೊಂದಲೂ ಶಾಶ್ವತನೀರಾವರಿ ಯೋಜನೆಗಳಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು.
7. ಬೆಳೆ ವಿಮೆಯು ಸಮಯ ಬದ್ಧವಾಗಿ ಸಿಗುವಂತೆ ಮತ್ತು ಒಟ್ಟು ಬೆಳೆಯ ನಷ್ಟವನ್ನು ತುಂಬಿಕೊಡುವಂತೆ ಸರಿಪಡಿಸಿ, ಪ್ರತಿಯೊಬ್ಬ ರೈತನಿಗೂ ಅದು ದೊರೆಯುವಂತೆ ಬೆಳೆ ವಿಮೆ ಯೋಜನೆಯನ್ನು ಜಾರಿಗೆ ತರಬೇಕು
8. ಈ ಪ್ರದೇಶಧ ವಿದ್ಯಾರ್ಥಿಗಳಿಗೆ ಎಲ್ಲಾ ಹಂತದ ಶಾಲಾ ಕಾಲೇಜುಗಳಲ್ಲೂ ಉಚಿತವಾದ ಪ್ರವೇಶ ನೀಡಬೇಕು.







'ಬಂಡವಾಳಶಾಹಿಯಿಂದ ಆಜಾದಿ'
ಮೊಳಗಿಸಿದ ಮೇ ದಿನ

'ವಾರಕ್ಕೆ 35 ಗಂಟೆ, ದಿನಕ್ಕೆ 4 ಪಾಳಿ ಕೆಲಸಕ್ಕಾಗಿ'

ಬೆಂಗಳೂರು:

ಟೌನ್‌ಹಾಲ್‌ನಿಂದ ಪ್ರಾರಂಭವಾದ ಸಾವಿರಾರು ಕಾರ್ಮಿಕರ ಆಕರ್ಷಕ ಕೆಂಬಾವುಟದ ಮೆರವಣಿಗೆ ನಡೆದು ಸ್ವಾತಂತ್ರ್ಯ ಉದ್ಯಾನವನದಲ್ಲಿ ಸಮಾವೇಶಗೊಂಡಿತು. ಪ್ರತಿದಿನ ನಾಲ್ಕು ಪಾಳಿ ಕೆಲಸಕ್ಕಾಗಿ, ಕಾರ್ಮಿಕ ಕೆಲಸವನ್ನು ವಾರಕ್ಕೆ 35 ಗಂಟೆಗೆ ಸೀಮಿತಗೊಳಿಸಬೇಕೆಂದು ಒತ್ತಾಯಿಸುವ ದಿನವನ್ನಾಗಿ ಆಚರಿಸಲಾಯಿತು.

ಇದೇ ಸಂದರ್ಭದಲ್ಲಿ ಕನಿಷ್ಟ ಕೂಲಿ ರೂ.18 ಸಾವಿರಕ್ಕೆ ಏರಿಸಬೇಕೆಂದು, ಗುತ್ತಿಗೆ ಕಾರ್ಮಿಕರನ್ನು ಖಾಯಂ ಮಾಡಬೇಕೆಂದು ಆಗ್ರಹಿಸಲಾಯಿತು. ಸಭೆಯಲ್ಲಿ ಸಿಐಟಿಯು ರಾಜ್ಯ ಕಾರ್ಯದರ್ಶಿಗಳಾದ ಮೀನಾಕ್ಷಿ ಸುಂದರಂ, ಕೆ.ಎನ್.ಉಮೇಶ್, ಟಿ.ಲೀಲಾವತಿ, ಬೆಂ.ಉತ್ತರ ಜಿಲ್ಲಾ ಅಧ್ಯಕ್ಷರಾದ ಹೆಚ್.ಎನ್.ಗೋಪಾಲಗೌಡ, ಪ್ರಧಾನ ಕಾರ್ಯದರ್ಶಿ ಪ್ರತಾಪ್ ಸಿಂಹ, ಬೆಂ.ದಕ್ಷಿಣ ಜಿಲ್ಲಾ ಉಪಾಧ್ಯಕ್ಷರಾದ ಕೆ.ಪ್ರಕಾಶ್, ಕಾರ್ಮಿಕ ಮುಖಂಡರಾದ ಕೆ.ಎಸ್.ಸುಬ್ರಮಣಿ, ಮುನಿರಾಜು, ಹನುಮಂತರಾವ್ ಹವಾಲ್ದಾರ್, ರಮೇಶ್, ಹೆಚ್.ಡಿ.ರೇವಪ್ಪ ಮುಂತಾದ ಮುಖಂಡರು ಹಾಜರಿದ್ದರು. ಭೂಮ್ತಾಯಿ ಬಳಗದವರು ಹೋರಾಟದ ಹಾಡುಗಳನ್ನು ಸ್ಫೂರ್ತಿದಾಯಕವಾಗಿ ಹಾಡಿದರು.

'ಕಾರ್ಮಿಕರ ಒಗ್ಗಟ್ಟು ಒಡೆಯುವ ಪ್ರಯತ್ನ ಹೆಚ್ಚುತ್ತಿದೆ'

ಚಿಕ್ಕಬಳ್ಳಾಪುರ:

ಅಂಬೇಡ್ಕರ್ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾಜಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿರವರು ಮಾತನಾಡಿ, "ಬಂಡವಾಳಶಾಹಿಗಳು ವಿಶ್ವದ ಮೇಲೆ ಹಿಡಿತ ಸಾಧಿಸುತ್ತಿರುವ ಜತೆಗೆ ಕಾರ್ಮಿಕರ ಹಕ್ಕು ಮತ್ತು ಸೌಲಭ್ಯಗಳನ್ನು ಕಸಿದುಕೊಳ್ಳುವ ಹುನ್ನಾರ ನಡೆಸಿದ್ದಾರೆ. ಕಾರ್ಮಿಕರು ನಿತ್ಯವು ಶೋಷಣೆ ಮತ್ತು ದೌರ್ಜನ್ಯಕ್ಕೆ ಒಳಗಾಗುತ್ತಿದ್ದು, ಅವರ ಬದುಕು ಇನ್ನಷ್ಟು ಅಸಹನೀಯ ಮತ್ತು ಆತಂತ್ರಗೊಳ್ಳುತ್ತಿದೆ" ಎಂದು ತಿಳಿಸಿದರು.

ವಿವಿಧ ರೀತಿಯ ನೀತಿ, ನಿಯಮಗಳಿಂದ ಕಾರ್ಮಿಕರಲ್ಲಿ ಒಂದೆಡೆ ಆತಂಕ ಮತ್ತು ಭಯ ಕಾಡುತ್ತಿದ್ದರೆ, ಮತ್ತೊಂದೆಡೆ ಕೋಮುವಾದಿ, ಜಾತಿವಾದಿ ಸಂಘಟನೆಗಳ ಮೂಲಕ ಕಾರ್ಮಿಕರ ಶಕ್ತಿ ಒಡೆಯುವ ಪ್ರಯತ್ನ ನಡೆದಿದೆ. ಕಾರ್ಮಿಕರು ಎಲ್ಲವನ್ನು ಸೂಕ್ಷ್ಮವಾಗಿ ಗಮನಿಸಿ, ಮುನ್ನಡೆಯಬೇಕೆಂದು ಕರೆ ನೀಡಿದರು.

ಮುಖಂಡರಾದ ಎಂ.ಪಿ.ಮುನಿವೆಂಕಟಪ್ಪ, ಸಿದ್ಧಗಂಗಪ್ಪ, ಬಿ.ಎನ್.ಮುನಿಕೃಷ್ಣಪ್ಪ, ಲಕ್ಷ್ಮಿದೇವಮ್ಮ, ಮುಸ್ತಫಾ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

'ಹೋರಾಟದಿಂದ ಮಾತ್ರ ಬೇಡಿಕೆಗೆ ಮನ್ನಣೆ'

ಉಡುಪಿ:

ಬೈಂದೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ.ಎಸ್.ವರಲಕ್ಷ್ಮಿ ಮಾತನಾಡಿ "1896 ರಲ್ಲಿ ಕಾರ್ಮಿಕರು ನಡೆಸಿದ ಮೊದಲ ಹೋರಾಟದ ದಿನವನ್ನು ಮೇ ದಿನ ಆಚರಿಸಲಾಗುತ್ತಿದೆ. ಅಂದಿನಿಂದ ಇಂದಿನವರೆಗೂ ದುಡಿಯುವ ವರ್ಗ ತನ್ನ ನ್ಯಾಯಯುತ ಬೇಡಿಕೆಗಳಿಗಾಗಿ ಹೋರಾಟ ನಡೆಸುತ್ತಲೆ ಬಂದಿದೆ ಎಂದು ತಿಳಿಸಿದರು.

ಸಿಐಟಿಯು ಜಿಲ್ಲಾಧ್ಯಕ್ಷರಾದ ಕೆ.ಶಂಕರ್, ತಾಲ್ಲೂಕು ಕಾರ್ಯದರ್ಶಿ ಸುರೇಶ ಕಲ್ಲಾಗರ, ಮಾತನಾಡಿದರು. ಗಣೇಶ ತೊಂಡಿಮಕ್ಕಿ ಸ್ವಾಗತಿಸಿದರು. ವೆಂಕಟೇಶ್ ಕೋಣಿ ನಿರೂಪಿಸಿ ವಂದನಾರ್ಪಣೆ ಮಾಡಿದರು. ಮುಖಂಡರಾದ ದಾಸ ಭಂಡಾರಿ, ಶೀಲಾವತಿ, ಗಣೇಶ ಮೊಗವೀರ, ರಾಧಾಕೃಷ್ಣ, ಸುಶೀಲಾ ನಾಡ, ಜಯಶ್ರೀ, ನಾಗರತ್ನ ನಾಡ, ಶಾರದಾ ಬೈಂದೂರು, ಮಂಜು ಪೂಜಾರಿ ಮುಂತಾದ ಮುಖಂಡರು ಇದ್ದರು.

ಬ್ರಹ್ಮಾವರದಲ್ಲಿ ನಿವೃತ್ತ ಪ್ರಾಧ್ಯಾಪಕರಾದ ಭಾಸ್ಕರ್ ಮಯ್ಯ, ಕಾರ್ಮಿಕ ಮುಖಂಡರಾಧ ಸುಭಾಷ್ ನಾಯಕ್, ವಿಠಲ ಪೂಜಾರಿ, ಉದಯಕುಮಾರ್, ಹರಿಪ್ರಸಾದ್, ರಾಮ ಕಾರ್ಕಡ, ಭವಾನಿ ಪೂಜಾರಿ, ಶಂಕರ್ ಕುನಾಲ್ ಸಾಸ್ತಾನ, ಸದಾಶಿವ ಪೂಜಾರಿ, ಕೃಷ್ಣ ಹಿಲಿಯಾಣ, ಭವಾನಿ, ಮುಂತಾದವರು ಭಾಗವಹಿಸಿದ್ದರು.

'ಆರ್ಥಿಕ ಅವಿವೇಕ ದೇಶವನ್ನು ಆಳುತ್ತಿದೆ'

ತುಮಕೂರು:

ನಗರದ ಟೌನ್‌ಹಾಲ್ ನಲ್ಲಿ ಮೇ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಬಹಿರಂಗ ಕಾರ್ಯಕ್ರಮಕ್ಕೆ ಆಗಮಿಸಿದ ಹಿರಿಯ ಸಾಹಿತಿ, ನಾಡೋಜ ಡಾ॥ಬರಗೂರು ರಾಮಚಂದ್ರಪ್ಪ ನವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ "ಇಪ್ಪತ್ತನೇಯ ಶತಮಾನದ ವಿವೇಕ ಮತ್ತು ಧಾರ್ಮಿಕ ಸಾಮರಸ್ಯವನ್ನು ಇಪ್ಪತ್ತೊಂದನೆ ಶತಮಾನದಲ್ಲಿ ಧಾರ್ಮಿಕ ಸಂಘರ್ಷ ಮತ್ತು ಆರ್ಥಿಕ ಅವಿವೇಕ ನಾಶಮಾಡಿದೆ. 20ನೇ ಶತಮಾನ ಆತ್ಮವಿಶ್ವಾಸದ ಶತಮಾನವಾಗಿತ್ತು. 21ನೇ ಶತಮಾನ ಅಸಹಾಯಕತೆಗೆ ದಾರಿ ಮಾಡಿಕೊಟ್ಟಿದೆ. ಸಮಾಜದಲ್ಲಿ ತಲೆ ತಗ್ಗಿಸುವಂತಹ ಕೆಲಸಗಳೇ ಹೆಚ್ಚು ನಡೆಯುತ್ತಿದೆ. ಅತ್ಯಾಚಾರ, ಆತ್ಮಹತ್ಯೆ, ಅಸಹಾಯಕತೆ ವೇಗವಾಗಿ ಬೆಳೆಯುತ್ತಿದೆ. ಆರ್ಥಿಕ ಅವಿವೇಕ ದೇಶವನ್ನು ಆಳುತ್ತಿದೆ" ಎಂದು ವಿಷಾದ ವ್ಯಕ್ತಪಡಿಸಿದರು.


ಸಿಐಟಿಯು ಜಿಲ್ಲಾಧ್ಯಕ್ಷರಾದ ಸೈಯದ್ ಮುಜೀಬ್ ರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಅಂಗನವಾಡಿ ನೌಕರರ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಗುಲ್ಜರ್ ಬಾನು, ಸಿಐಟಿಯು ಪ್ರಧಾನ ಕಾರ್ಯದರ್ಶಿ ಎನ್.ಕೆ.ಸುಬ್ರಮಣ್ಯ, ಕೊಳಗೇರಿ ನಿವಾಸಿಗಳ ಹಿತರಕ್ಷಣಾ ಸಮಿತಿ ಅಧ್ಯಕ್ಷರಾದ ಎ.ನರಸಿಂಹಮೂರ್ತಿ, ಕಟ್ಟಡ ಕಾರ್ಮಿಕ ಸಂಘಟನೆಯ ರಾಜ್ಯ ಕಾರ್ಯದರ್ಶಿ ಬಿ ಉಮೇಶ್, ಜೀವ ವಿಮಾ ನೌಕರರ ಸಂಘದ ಜಗನ್ನಾಥ್, ಅಂಚೆ ನೌಕರರ ಸಂಘದ ಕಾಂತರಾಜು, ಪೌರಕಾರ್ಮಿಕ ಸಂಘದ ನರಸಿಂಹರಾಜು, ಮುಖಂಡರಾದ ಟಿ.ಜಿ.ಶಿವಲಿಂಗಯ್ಯ, ಪುಟ್ಟೇಗೌಡ, ಷಣ್ಮುಗಪ್ಪ, ನಾಗೇಶ್ ಹಾಜರಿದ್ದರು.

ಅಂತರಸನಹಳ್ಳಿ ಕೈಗಾರಿಕಾ ಪ್ರದೇಶದಿಂದ ಆಕರ್ಷಕವಾದ ರ‍್ಯಾಲಿ ನಡೆಸಿದರು. ಕಾರ್ಮಿಕ ಮುಖಂಡರಾದ ನೌಷಾದ್ ಸೆಹಗಲ್ ಮತ್ತು ಲಕ್ಷ್ಮಣ್ ಸಂಗಡಿಗರು ಕ್ರಾಂತಿಗೀತೆಗಳನ್ನು ಹಾಡಿದರು.

'ಮತ್ತೊಂದು ಮಹಾ ಮುಷ್ಕರ ಯಶಸ್ವಿಗೊಳಿಸಿ'

ಹುಬ್ಬಳ್ಳಿ:

ಕಾರ್ಮಿಕ ದಿನಾಚರಣೆ ಅಂಗವಾಗಿ ಜಿಲ್ಲೆಯಲ್ಲಿ ಹಮ್ಮಿಕೊಂಡಿದ ಸಭೆಯಲ್ಲಿ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹೇಶ ಪತ್ತಾರ ಸರಕಾರಕ್ಕೆ ಸಲ್ಲಿಸಿದ 12 ಅಂಶದ ಬೇಡಿಕೆಗಳ ಕುರಿತು ಮೋದಿ ಸರಕಾರ ಯಾವುದೇ ಕಾಳಜಿ ವಹಿಸುತ್ತಿಲ್ಲ ಬದಲಾಗಿ ಅದಕ್ಕೆ ವ್ಯತಿರಿಕ್ತವಾಗಿ ಕಾರ್ಮಿಕ ಹಕ್ಕುಗಳ ಮೇಲೆ ತೀವ್ರತರವಾದ ದಾಳಿ ನಡೆಸುತ್ತಿದೆ. ಕೇಂದ್ರ ಸರಕಾರದ ಈ ಕಾರ್ಮಿಕ-ವಿರೋಧಿ ನೀತಿಗಳನ್ನು ವಿರೋಧಿಸಿ 2016 ಸೆಪ್ಟೆಂಬರ್ 2ರಂದು ಮತ್ತೊಂದು ಕಾರ್ಮಿಕರ ಮಹಾಮುಷ್ಕರ ನಡೆಸಲು ಕೇಂದ್ರ ಕಾರ್ಮಿಕ ಸಂಘಟನೆಗಳು ತೀರ್ಮಾನಿಸಿವೆ. ಮೇ-ದಿನದ ಸ್ಪೂರ್ತಿಯೊಂದಿಗೆ ಮುಷ್ಕರವನ್ನು ಯಶಸ್ವಿಗೊಳಿಸಲು ಮುಂದಾಗೋಣವೆಂದು



ಜವಳಿ ವರ್ತಕರ ಸಂಘದ ಸಭಾ ಭವನದಲ್ಲಿ ನಡೆದ ಸಭೆಯಲ್ಲಿ ಮೇ ದಿನ ಪ್ರಣಾಳಿಕೆ-2016ರ ಕುರಿತು ಕಾಂ.ಬಿ.ಎನ್.ಪೂಜಾರಿ ಮಾತನಾಡಿದರು, ವಿಜಯ ಗುಂಟ್ರಾಳ, ಡಾ.ಇಸಾಬೆಲ್ಲಾ ಝೇವಿಯರ್, ದಾಸ ಮಾತನಾಡಿದರು. ಬಿ.ಐ.ಈಳಿಗೇರ ರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಇದಕ್ಕೂ ಮೊದಲು ನಗರದಲ್ಲಿ ಬೃಹತ್ ಮೆರವಣಿಗೆ ನಡೆಸಲಾಯಿತು.

ಧಾರವಾಡ ಜಿಲ್ಲಾ ಎಸ್.ಸಿ./ಎಸ್.ಟಿ. ಪೌರ ಕಾರ್ಮಿಕರ ಹಾಗೂ ನೌಕರರ ಸಂಘದ ನೇತೃತ್ವದಲ್ಲಿ ಕಾರ್ಮಿಕ ದಿನಾಚರಣೆ ಆಚರಿಸಲಾಯಿತು. ಅಂಬೇಡ್ಕರ್ ವೃತ್ತದಿಂದ ಚೆನ್ನಮ್ಮ ವೃತ್ತದವರೆಗೆ ಮೆರವಣಿಗೆ ನಡೆಯಿತು. ಸಂಘದ ಅಧ್ಯಕ್ಷ ವಿಜಯ ಗುಂಟ್ರಾಳ, ಮಹೇಶ್ ಪತ್ತಾರ, ಎಐಟಿಯುಸಿ ಮುಖಂಡರಾದ ದೇವಾನಂದ ಜಗಾಪುರ, ದಲಿತ ಮುಖಂಡ ಪಿತಾಂಬ್ರಪ್ಪ ಬಿಳಾರದ ಮುಂತಾದವರು ಮಾತನಾಡಿದರು.

ಹಾಸನ:

ಹೇಮಾವತಿ ಪ್ರತಿಮೆ ಬಳಿಯಿಂದ ಹೊರಟ ಕಾರ್ಮಿಕರು ನಗರದ ವಿವಿಧ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ನಂತರ ಮಹಾರಾಜ ಪಾರ್ಕನಲ್ಲಿ ಮೇ ದಿನಾಚರಣೆ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿರಿಯ ಕಾರ್ಮಿಕ ಮುಖಂಡರಾದ ಎಂ.ಸಿ.ಡೋಂಗ್ರೆ ವಹಿಸಿದ್ದರು. ಪ್ರಸ್ತಾವಿಕವಾಗಿ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಧರ್ಮೇಶ್ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಹಾಸನ ನಗರ ಸಭಾ ಅಧ್ಯಕ್ಷರಾದ ಎಚ್.ಎಸ್.ಅನಿಲ್‌ಕುಮಾರ್, ಬ್ಯಾಂಕ್ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಪರಮಶಿವಯ್ಯ, ಸರ್ಕಾರಿ ನೌಕರರ ಒಕ್ಕೂಟದ ಜಿಲ್ಲಾ ಕಾರ್ಯದರ್ಶಿ ಡಿ.ಟಿ. ಶಿವಣ್ಣ, ಗ್ರಾಮೀಣ ಅಂಚೆ ನೌಕರರ ಸಂಘದ ಮುಖಂಡ ಜಗದೀಶ್, ವಿಮಾ ನೌಕರರ ಸಂಘದ ಮಂಜುನಾಥ್, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಎಚ್.ಆರ್.ನವೀನ್‌ಕುಮಾರ್, ದಲಿತ ಮುಖಂಡರಾದ ಮರಿಜೋಸೆಫ್, ಅಕ್ಷರ ದಾಸೋಹ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಎಂ.ಬಿ.ಪುಷ್ಪ, ಅಂಗನವಾಡಿ ನೌಕರರ ಸಂಘದ ಚನ್ನಮ್ಮ, ಸಿಐಟಿಯು ಜಿಲ್ಲಾ ಖಜಾಂಚಿ ಜಿ.ಪಿ.ಸತ್ಯನಾರಾಯಣ ಭಾಗವಹಿಸಿದ್ದರು. ಸಿಐಟಿಯು ಹಾಸನ ತಾಲ್ಲೂಕು ಕಾರ್ಯದರ್ಶಿ ಅರವಿಂದ್ ಕಾರ್ಯಕ್ರಮವನ್ನು ನಿರೂಪಿಸಿದರು, ಶಾವೆಲ್ ಹಮೀದ್ ವಂದಿಸಿದರು.

ಬೆಳಗಾವಿ:

ಜಿಲ್ಲೆಯ ರಾಮದುರ್ಗ ತಾಲ್ಲೂಕಿನಲ್ಲಿ ಕಾರ್ಮಿಕ ದಿನಾಚರಣೆ ಅಂಗವಾಗಿ ಜಿಲ್ಲೆಯ ಸಾಧಕರಿಗೆ ಗೌರವ ಸಮರ್ಪಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಹಿರಿಯ ಸ್ವಾತಂತ್ರ ಹೋರಾಟಗಾರ, ಕಮ್ಯೂನಿಸ್ಟ್ ಪಕ್ಷದ ಹಿರಿಯ ಸಂಗಾತಿ ನರಗುಂದ ಬಂಡಾಯ ಮುಂಚೂಣಿ ನಾಯಕ ಎಸ್.ಎಚ್. ಕಪ್ಪಣ, ಕರ್ನಾಟಕ ಶಾಸನ ಸಭೆಯಲ್ಲಿ ಶಾಸಕರಾಗಿದ್ದ ಸರ್ವೋದಯ ನಾಯಕ ಸದಾಶಿವ ಬೋಸ್ಲೇ, ಕೆಎಲ್ಇ ಸಾಮ್ರಾಜ್ಯದ ವಿರುದ್ಧ ಹೋರಾಟ ಮಾಡುತ್ತಿರುವ ಶ್ರೀಮತಿ ಸಾಯಿಪಾಟೀಲ, ಪರಿಸರ ಹೋರಾಟಗಾರ ಶಿವಾಜಿ ಕಾಂಗೇಣೇಕರ, ದೇವದಾಸಿ ಮಹಿಳೆಯರು ಮತ್ತು ಅವರ ಮಕ್ಕಳ ಕಲ್ಯಾಣಕ್ಕಾಗಿ ದುಡಿಯುತ್ತಿರುವ ಬಿ.ಎಲ್.ಪಾಟೀಲ ಹಾಗೂ ಮೌಢ್ಯಾಚರಣೆ ವಿರುದ್ಧ ಹೋರಾಡುತ್ತಿರುವ ಅಶೋಕ ಅಯ್ಯ ಸೇರಿದಂತೆ ಹಲವು ಸಾಧಕರಿದೆ ಸನ್ಮಾನ ಮಾಡುವ ಮೂಲಕ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಮುಂಚೆ ಆಕರ್ಷಕವಾದ ಮೆರವಣಿಗೆ ನಡೆಯಿತು. ಮುಖ್ಯ ಭಾಷಣಕಾರರಾಗಿ ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ. ಮಹಾಂತೇಶ ಭಾಗವಹಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಕಾರ್ಮಿಕ ಮುಖಂಡರಾದ ವಿ.ಪಿ. ಕುಲಕರ್ಣಿ ವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಗೈಬು ಜೈನೇಖಾನ ನಿರೂಪಿಸಿದರು.

ಉತ್ತರ ಕನ್ನಡ:

ಜಿಲ್ಲೆಯಲ್ಲಿ ಹಲವು ಸಭೆಗಳನ್ನು ನಡೆಸಲಾಯಿತು. ಲೇಖಕ ಎಂ.ಎ.ಖತೀಬ ಮೇ ಡೇ ಹುತಾತ್ಮರಿಗೆ ಗೌರವ ಸಲ್ಲಿಸಿ ಮಾತನಾಡಿದರು.

ಕಲಬುರಗಿ:

ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಸಿಐಟಿಯು ರಾಜ್ಯ ಅಧ್ಯಕ್ಷರಾದ ಕಾಂ॥ವಿಜೆಕೆ ನಾಯರ್ ಸಭೆಯನ್ನು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಶಾಂತಾ ಘಂಟಿ, ಮುಖ್ಯ ಅತಿಥಿಗಳಾಗಿ ಮಾರುತಿ ಮಾನ್ಪಡೆ ಭಾಗವಹಿಸಿದ್ದರು. ಸಜ್ಜನ್ ರವರು ನಿರೂಪಣೆ ಮಾಡಿದರು.

ದಕ್ಷಿಣ ಕನ್ನಡ, ಮೈಸೂರು, ಬಳ್ಳಾರಿ, ಮಂಡ್ಯ, ಕೋಲಾರ, ಕೊಪ್ಪಳ, ಗದಗ, ಬೆಳ್ಳಂಗಡಿ, ಚಿಕ್ಕೋಡಿ, ಚನ್ನರಾಯನಪಟ್ಟಣ, ಶ್ರೀನಿವಾಸಪುರ, ಕರ್ನಾಟಕ ರಾಜ್ಯ ಔಷಧ ಮತ್ತು ಮಾರಾಟ ಪ್ರತಿನಿಧಿಗಳ ಸಂಘಟನೆ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘಟನೆ, ಅಂಗನವಾಡಿ, ಅಕ್ಷರ ದಾಸೋಹ, ಆಶಾ, ಹಮಾಲಿ, ಬೀಡಿ ಕಾರ್ಮಿಕ ಸಂಘಟನೆಗಳು, ಸಾರಿಗೆ ನೌಕರರು, ಆಟೋ ರಿಕ್ಷಾ ಚಾಲಕರು ಸೇರಿದಂತೆ ಹಲವು ಸಂಘಟನೆಗಳಿಂದ ಜಿಲ್ಲಾ ತಾಲ್ಲೂಕುಗಳಲ್ಲಿ ಮೇ ದಿನದ ಆಜಾದಿ ರ‍್ಯಾಲಿ ನಡೆದ ಹಲವು ವರದಿಗಳು ಬಂದಿವೆ.

PEÃV¸ÀÄÝ

'ನೋಬೆಲ್ ಶಾಂತಿ ಪುರಸ್ಕಾರ ನನಗೂ ಕೊಡುತ್ತೇನೆ ಎಂದು ಬಂದಿದ್ದರು. ಅದರಲ್ಲೀಗ ಪೂರ್ತಿ ರಾಜಕೀಯ ವಿನಃ ಆ ಪ್ರಶಸ್ತಿಗೆ ಅರ್ಥವಿಲ್ಲ. ಏನೂ ಮಾಡದ ಮಲಾಲ ಯೂಸುಫ್ಜಾಯ್ಗೆ ಅದನ್ನ ಕೊಟ್ಟ ಮೇಲೆ ಅದಕ್ಕೆ ಬೆಲೆಯೆ ಇಲ್ಲವಾಗಿದೆ. ಹೀಗಾಗಿ ನಾನು ಆ ಪ್ರಶಸ್ತಿಯನ್ನ ನಿರಾಕರಿಸಿದ್ದೇನೆ

– ರವಿಶಂಕರ್

JANASHAKTHI KANNADA VARA PATRIKE MAY 15, 2016 Price : Rs. 10/- RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283















‘ಬಂಡವಾಳಶಾಹಿಯಿಂದ ಆಜಾದಿ’
ಮೊಳಗಿಸಿದ ಮೇ ದಿನ













JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**